ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 11 ಬುಧವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 146 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಮೈಸೂರು ಬಿ.ಜೆ.ಪಿ ನಗರ ಅಧ್ಯಕ್ಷರು, ಅಭಿವೃದ್ಧಿಯ ಹರಿಕಾರ-ಜನಸಾಮಾನ್ಯರ ಶಾಸಕರಾಗಿದ್ದ
ಎಲ್.ನಾಗೇಂದ್ರಣ್ಣ ಅವರಿಗೆ
ಜನ್ಮದಿನದ ಶುಭಾಶಯಗಳು


ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು
ಹಾಗೂ ಮೈಸೂರು ನಗರ(ಜಿಲ್ಲಾ) ಬಿಜೆಪಿ ನಗರಾಧ್ಯಕ್ಷರಾದ
ಶ್ರೀ ಎಲ್. ನಾಗೇಂದ್ರಣ್ಣ ಅವರಿಗೆ
ಜನುಮದಿನದ ಶುಭಾಶಯಗಳು
ಕೆ. ದೇವರಾಜ್ ವಕ್ತಾರರು,
ಬಿ.ಜೆ.ಪಿ., ಮೈಸೂರು ಮಹಾನಗರ
ಶುಭಕೋರುವವರು :
42ನೇ ವಾರ್ಡ್ ಬಿಜೆಪಿ-ಜೆಡಿಎಸ್ ಕಾರ್ಯಕರ್ತರು
ಕನ್ನೇಗೌಡನ ಕೊಪ್ಪಲು ಗ್ರಾಮಸ್ಥರು


ಮಾಜಿ ಶಾಸಕರು,
ಚಾಮರಾಜ ವಿಧಾನಸಭಾ ಕ್ಷೇತ್ರ
ಹಾಗೂ ಬಿಜೆಪಿ ಮೈಸೂರು ನಗರಾಧ್ಯಕ್ಷರು (ಜಿಲ್ಲಾ)
ಅಭಿವೃದ್ಧಿ ಹರಿಕಾರರು, ಜನ ಮೆಚ್ಚಿನ ನಾಯಕ, ಬಡವರ ಬಂಧು
ಶ್ರೀ ಎಲ್.ನಾಗೇಂದ್ರ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:
ಬೆಳ್ಳಿಕಟ್ಟೆ ಹಾಗೂ ಬೋಟಿ ಬಜಾರ್
ಗೆಳೆಯರ ಬಳಗ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಬುಧವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 146 | ಪುಟಗಳು: 12+IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೆಂಗಳೂರಲ್ಲಿ ನಿಲುಗಡೆ ಸ್ಥಳಾಭಾವ ಹಿನ್ನೆಲೆ

ಹಲವು ಪ್ರಮುಖ ರೈಲುಗಳು ಮೈಸೂರು, ಚಾ.ನಗರಕ್ಕೆ ವಿಸ್ತರಣೆ

ಬೆಂಗಳೂರು, ಸೆ.10(ಕೆಎಂಶಿ)– ರಾಷ್ಟ್ರದ ವಿವಿಧೆಡೆಯಿಂದ ಬೆಂಗಳೂರಿಗೆ ಬರುವ ಪ್ರಮುಖ ರೈಲುಗಳನ್ನು ಮೈಸೂರುವರೆಗೆ ವಿಸ್ತರಿಸಲು ರೈಲ್ವೆ ಇಲಾಖೆ ಮುಂದಾಗಿದೆ.

ಬೆಂಗಳೂರು ಕೇಂದ್ರದಲ್ಲಿ ರೈಲುಗಳ ಆಗಮನ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ನಿಲುಗಡೆಗೆ ಸ್ಥಳಾವಕಾಶ ಇಲ್ಲದ ಕಾರಣ ಇವುಗಳನ್ನು ಮೈಸೂರು ಹಾಗೂ ಕೆಲವು ರೈಲುಗಳನ್ನು ಚಾಮರಾಜನಗರದವರೆಗೆ ವಿಸ್ತರಿಸುವ ಯೋಜನೆ ಇಲಾಖೆಯದ್ದಾಗಿದೆ.

ಈ ಕಾರಣಕ್ಕಾಗಿ ಬೆಂಗಳೂರು–ಮೈಸೂರು ನಡುವೆ ಸಬ್–ಅರ್ಬನ್ ರೈಲು ಸಂಚಾರ ಯೋಜನೆ ಕೈಬಿಟ್ಟು, ಈ ಮಾರ್ಗದಲ್ಲಿ ನಾಲ್ಕು ಪಥಗಳ ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷಾ ಕಾರ್ಯ ಆರಂಭಗೊಂಡಿದೆ. ಸಮೀಕ್ಷೆ ಕಾರ್ಯವನ್ನು ತ್ವರಿತಗತಿಯಲ್ಲಿ ಮುಗಿಸುವಂತೆ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ರಾಜ್ಯ ರೈಲ್ವೆ ಯೋಜನೆಗಳ ಅನುಷ್ಠಾನ ಮತ್ತು ಸಬ್–ಅರ್ಬನ್ ರೈಲ್ವೆಗೆ ಸಂಬಂಧಿಸಿದಂತೆ ರಾಜ್ಯದ ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿನ್ನೆ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಈ ಆದೇಶ ಮಾಡಿದ್ದಾರೆ. ಮಾಹಿತಿ ತಂತ್ರಜ್ಞಾನ ಮತ್ತು ಅರಮನೆ ನಗರಗಳ ನಡುವೆ ನಾಲ್ಕು ಪಥಗಳ ರೈಲು ಮಾರ್ಗ ನಿರ್ಮಾಣಕ್ಕೆ ಅಗತ್ಯ ಹಣವನ್ನು ತಾವು ರೈಲ್ವೆ ಸಚಿವರೊಂದಿಗೆ ಚರ್ಚಿಸಿ ಬಿಡುಗಡೆ ಮಾಡಿಸುತ್ತೇನೆ. ಈಗಾಗಲೇ ರೈಲ್ವೆ ಇಲಾಖೆ ಈ ನಗರಗಳ ನಡುವೆ ಸಬ್–ಅರ್ಬನ್ ರೈಲು ಸಂಚಾರವನ್ನು ಕೈಬಿಟ್ಟು ನಾಲ್ಕು ಪಥಗಳ ನಿರ್ಮಾಣಕ್ಕೆ ತೀರ್ಮಾನಿಸಿದ್ದು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ಕಾರ್ಯಗತಗೊಳಿಸಿ. ರಾಜಧಾನಿಯಲ್ಲಿ ನಾಲ್ಕು ರೈಲು ನಿಲ್ದಾಣಗಳಿದ್ದರೂ ದಿನದಿಂದ ದಿನಕ್ಕೆ ■ 6ನೇ ಪುಟಕ್ಕೆ



ಬೆಂಗಳೂರು ರೈಲ್ವೆ ನಿಲ್ದಾಣ



ಮೈಸೂರು ರೈಲ್ವೆ ನಿಲ್ದಾಣ

ದೇಶದಲ್ಲಿ ಈ ಬಾರಿ ವಿಪರೀತ ಚಳಿ

ನವದೆಹಲಿ, ಸೆ.10– ಈ ಬಾರಿ ದೇಶದಲ್ಲಿ ಬೇಸಿಗೆಯ ಬಿಸಿ, ಮುಂಗಾರಿನ ಮಳೆ ಹಿಂದೆಂದಿಗಿಂತ ಅಧಿಕವಾಗಿಯೇ ದಾಖಲಾಗಿದೆ. ಅದರ ಜತೆಗೆ ಈ ಬಾರಿ ದೇಶದಲ್ಲಿ ಚಳಿಯೂ ಅಧಿಕವಾಗಿಯೇ ಇರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಲಾ ನಿನಾ ವಿದ್ಯಮಾನವನ್ನು ಆರಂಭದಿಂದ ಗಮನಿಸಿ, ಇದು ರಾಷ್ಟ್ರದಾದ್ಯಂತ ಹೆಚ್ಚಿದ ಮಳೆ ಮತ್ತು ತಾಪಮಾನದಲ್ಲಿ ಗಮನಾರ್ಹ ಕುಸಿತವನ್ನು ಉಂಟುಮಾಡಬಹುದು. ಭಾರತದ ವಿವಿಧ ಪ್ರದೇಶಗಳಲ್ಲಿ ವಿವಿಧ ಪ್ರಮಾಣದ ತಾಪಮಾನ ದಾಖಲಾಗಲಿದ್ದು, ■ 6ನೇ ಪುಟಕ್ಕೆ



ಹಿನಕಲ್ ಮಂಡಲ ಪಂಚಾಯ್ತಿಯಿಂದ ಮುಡಾ ಜಾಗ ಒತ್ತುವರಿ ಆರೋಪ

ಮುಡಾ ಅಧಿಕಾರಿಗಳಿಗೆ ಲೋಕಾಯುಕ್ತ ನೋಟಿಸ್ ಜಾರಿ

ಮೈಸೂರು, ಸೆ. 10(ಆರ್‌ಕೆ)– ಅಕ್ರಮವಾಗಿ ಮುಡಾ ಜಾಗ ಒತ್ತುವರಿ ಮಾಡಿ, ಹಿನಕಲ್ ಮಂಡಲ ಪಂಚಾಯ್ತಿಯವರು ನಿರ್ಮಿಸಿದ ವಸತಿ ಬಡಾವಣೆಯಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು ನಿವೇಶನ ಪಡೆದು ಮನೆ ಕಟ್ಟಿದ್ದರೂ, ತಮ್ಮ ಆಸ್ತಿ ರಕ್ಷಿಸಿಕೊಳ್ಳದೇ ನಿರ್ಲಕ್ಷ್ಯ ತೋರಿದ್ದಾರೆಂಬ ಹಳೇ ದೂರಿನ ಮೇರೆಗೆ ಮೈಸೂರಿನ ಲೋಕಾಯುಕ್ತ ಪೊಲೀಸರು ಮುಡಾ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ಮೈಸೂರಿನ ಆರ್‌ಟಿಐ ಕಾರ್ಯಕರ್ತ ಎನ್.ಗಂಗರಾಜು 2017ರ ಡಿಸೆಂಬರ್ 19ರಂದು ಅಂದಿನ ಮೈಸೂರು ಎಸಿಬಿ ಎಸ್ಪಿ ಕಚೇರಿಗೆ ದೂರು ನೀಡಿದ್ದರು. ಸರ್ಕಾರದಿಂದ ಅನುಮತಿ ಪಡೆದು ಎಸಿಬಿ ಪೊಲೀಸರು 2022ರ ಮೇ 31ರಂದು ಹಿನಕಲ್ ಮಂಡಲ ಪಂಚಾಯ್ತಿ ಹಿಂದಿನ ಪ್ರಧಾನರು, ಹಿಂದಿನ ಸದಸ್ಯರು ಹಾಗೂ ಇತರರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ ಸೆಕ್ಷನ್ 13(1)(ಸಿ), 13(2), ಪಿಸಿ ಕಾಯ್ದೆ 1988 ಹಾಗೂ ಐಪಿಸಿ ಸೆಕ್ಷನ್ 420, 465, 468, 471, 120 (ಬಿ) ರೀತ್ಯಾ ಎಫ್‌ಐಆರ್ ದಾಖಲಿಸಿದ್ದರು.

ಪ್ರಕರಣದ ತನಿಖೆ ನಡೆಸುತ್ತಿರುವ ಪ್ರಸ್ತುತ ಲೋಕಾಯುಕ್ತ ಡಿವೈಎಸ್ಪಿ ಕೃಷ್ಣಯ್ಯ ಈ ಹಿಂದೆ ವಿಚಾರಣೆ ನಡೆಸಿದ್ದರಾದರೂ, ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ, ನಾನು ಪತ್ನಿ ಎಂಬ ಕೆಲಸಕ್ಕೆ ರಾಜೀನಾಮೆ ಕೊಡುತ್ತಿದ್ದೀನಿ.
ಗಂಡ : ಆಯ್ತು ಕಣೇ... ಆದ್ರೇ ಮತ್ತೊಬ್ಬಳು ಬರುವವರೆಗೂ ನೀನು ಕೆಲಸ ಬಿಡಬಾರದು!

ಮೈಸೂರು ಮಿತ್ರ

ಬುಧವಾರ, 11 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇನ್ನೊಬ್ಬರ ಬಗ್ಗೆ ನಮಗೆ ಏನು ತಿಳಿದಿದೆಯೋ ಅದನ್ನು ನಂಬಬೇಕೇ ಹೊರತು ಬೇರೆಯವರಿಂದ ಕೇಳಿದ್ದನಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಸಹ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

■ ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ಇದು ಅರಣ್ಯ ಪ್ರದೇಶವಲ್ಲ, ಮೈಸೂರಿನ ಡಾ. ರಾಜ್‌ಕುಮಾರ್ ರಸ್ತೆ (ಕಲ್ಯಾಣಗಿರಿ ಬಳಿ)ಯಲ್ಲಿರುವ ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ಖಾಲಿ ನಿವೇಶನದಲ್ಲಿ ಬೆಳೆದಿರುವ ಗಿಡಗಂಟಿಗಳು. ಕಚೇರಿ ಎದುರು ಚರಂಡಿ ಹಾಗೂ ಖಾಲಿ ನಿವೇಶನದಲ್ಲಿ ಗಿಡ–ಗಂಟಿಗಳು ದಟ್ಟವಾಗಿ ಬೆಳೆದಿದ್ದು, ಬೃಹತ್ ಗಾತ್ರದ ಮರವೊಂದರ ಅರ್ಧ ಭಾಗ ನೆಲಕ್ಕೆ ಬಾಗಿದೆ. ಜೊತೆಗೆ ಸೊಳ್ಳೆಗಳ ಕಾಟ ವಿಪರೀತವಾಗಿದೆ.

ಗಿಡ–ಗಂಟಿಗಳು ಎತ್ತರವಾಗಿ ಬೆಳೆದಿರುವುದರಿಂದ ಹಾವು–ಮುಂಗುಸಿಗಳ ಕಾಟವು ಅತಿಯಾಗಿದೆ. ಗಿಡ–ಗಂಟಿಗಳ ಮಧ್ಯೆ ಕಾಡುಪ್ರಾಣಿಗಳಾದ ಚಿರತೆ ಸೇರಿದಂತೆ ಇನ್ನಿತರ ಪ್ರಾಣಿಗಳು ಅವಿತುಕೊಂಡು ದಾಳಿ ನಡೆಸಿದರೂ ಆಶ್ಚರ್ಯಪಡಬೇಕಾಗಿಲ್ಲ. ಸಾಮಾನ್ಯವಾಗಿ ಉಪನೋಂದಣಾಧಿಕಾರಿಯವರ ಕಚೇರಿಗೆ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳು ಮುಗಿಯುವವರೆಗೂ ಫುಟ್‌ಪಾತ್ ಬದಿಯಲ್ಲಿ ನಿಂತಿರುತ್ತಾರೆ. ಈ ಸಮಯದಲ್ಲಿ ಕ್ರಿಮಿ–ಕೀಟಗಳಿಂದ, ಸೊಳ್ಳೆಗಳಿಂದ ಸಾರ್ವಜನಿಕರ ಆರೋಗ್ಯ ಹದಗೆಡುವ ಸಾಧ್ಯತೆ ಇದ್ದು, ಡೆಂಗ್ಯೂ ಜ್ವರ ಹರಡಲೂಬಹುದು. ಈಗಾಗಲೇ ಎಲ್ಲ ಕಡೆ ಡೆಂಗ್ಯೂ ಜ್ವರ ಉಲ್ಬಣಗೊಂಡಿರುವುದು ಎಲ್ಲರಿಗೂ ಗೊತ್ತು. ಒಂದು ವೇಳೆ ಸಾರ್ವಜನಿಕರಿಗೆ ಗಿಡ–ಗಂಟಿಗಳ ಮಧ್ಯೆ ಅವಿತಿರುವ ಹಾವು–ಮುಂಗುಸಿಗಳಿಂದ ಅಪಾಯವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ದಯವಿಟ್ಟು ಚರಂಡಿ ಮತ್ತು ಖಾಲಿ ನಿವೇಶನದಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕೆಂದು ಈಗಾಗಲೇ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವ ವಲಯ ಕಚೇರಿಗೆ ದೂರು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಗಿಡಗಂಟಿಗಳನ್ನು ತೆರವುಗೊಳಿಸಲು ಸೂಚಿಸಬೇಕೆಂದು ಮನವಿ.

–ಎಂ.ಎನ್.ಧರಣಿ ವೆಂಕಟೇಶ್, ಸ್ಥಳೀಯ ಜಿಲ್ಲಾ ಪತ್ರ ಬರಹಗಾರರು, ಮೈಸೂರು.

■ ಸರಗೂರಿಗೆ ಸಮರ್ಪಕ ಬಸ್ ಸೇವೆ ಒದಗಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ ಪಟ್ಟಣದಿಂದ ಕೇವಲ 10 ಕಿ.ಮೀ. ದೂರದ ಸರಗೂರು ತಾಲೂಕು ಕೇಂದ್ರಕ್ಕೆ ಸಂಜೆ 5 ವೇಳೆ ಸಮರ್ಪಕ ಸಾರಿಗೆ ಬಸ್ ಸೌಲಭ್ಯವಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ.

ಆಸ್ಪತ್ರೆ, ಕೂಲಿ ಕೆಲಸ, ಶಿಕ್ಷಣ ಸೇರಿದಂತೆ ವಿವಿಧ ಕಾರಣಗಳಿಂದ ತಾಲೂಕಿನ ಹಲವು ಗ್ರಾಮಗಳ ಮಹಿಳೆಯರು, ಪುರುಷರು, ಮಕ್ಕಳು, ವಯೋವೃದ್ಧರು ಹೆಚ್.ಡಿ. ಕೋಟೆಗೆ ಹಾಗೂ ಇದೇ ಕೇಂದ್ರ ಸ್ಥಾನದಿಂದ ಹುಣಸೂರು ಸೇರಿದಂತೆ ವಿವಿಧ ಭಾಗಗಳಿಗೆ ಅನಿವಾರ್ಯ ಕಾರಣಗಳಿಂದ ತೆರಳುವುದುಂಟು.

ಅವರು ಕೆಲಸ ಮುಗಿಸಿ ವಾಪಸ್ಸು ಸಂಜೆ ವೇಳೆಗೆ ಹೆಚ್.ಡಿ.ಕೋಟೆ ಪಟ್ಟಣದ ಬಸ್ ನಿಲ್ದಾಣಕ್ಕೆ ಬಂದರೆ ಸಂಜೆಯಿಂದ ತಡರಾತ್ರಿವರೆಗೂ ಸರಗೂರಿಗೆ ಬಸ್ಸುಗಳೇ ಇರುವುದಿಲ್ಲ. ಪ್ರಯಾಣಿಕರು ಕಾದುಕಾದು ಹೈರಾಣಾಗುತ್ತಿದ್ದಾರೆ.

ಸರಗೂರು ಕಳೆದ ನಂತರ ಸುಮಾರು 100ಕ್ಕೂ ಹೆಚ್ಚಿನ ಗ್ರಾಮಗಳು ಕಾಡಂಚಿನ ಭಾಗದಲ್ಲಿರುವುದರಿಂದ, ಆ ಭಾಗದ ಜನರು ರಾತ್ರಿಯಾದರೂ ಹೆಚ್.ಡಿ. ಕೋಟೆಯಲ್ಲಿಯೇ ಇರುವುದರಿಂದ ಮಕ್ಕಳಿಗೆ ಊಟದ ವ್ಯವಸ್ಥೆಯ ಜೊತೆಗೆ ಹಲವಾರು ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ಈ ಬಗ್ಗೆ ಸಂಚಾರಿ ನಿಯಂತ್ರಕರನ್ನು ಕೇಳಿದರೆ ಅಸಡ್ಡೆಯ ಉತ್ತರ ನೀಡುತ್ತಾರೆ ಹಾಗೂ ಕಚೇರಿಯಲ್ಲಿ ಯಾರೂ ಇರುವುದಿಲ್ಲ. ಇದರಿಂದ ಬಸ್ ಬರುವುದರ ಬಗ್ಗೆ ಯಾವುದೇ ಮಾಹಿತಿ ಪ್ರಯಾಣಿಕರಿಗೆ ಲಭ್ಯವಾಗುವುದಿಲ್ಲ.

ಈ ಎಲ್ಲಾ ಘಟನೆಗಳು ಆಗಿಂದಾಗ್ಗೆ ನಡೆಯುತ್ತಿವೆ ಹಾಗೂ ಇವೆಲ್ಲಾ ಮಾಹಿತಿಗಳು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಗೊತ್ತಿದ್ದರೂ ಕಣ್ಣಿದ್ದೂ ಕುರುಡಾಗಿದ್ದಾರೆ. ಇನ್ನಾದರೂ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವತ್ತ ಗಮನಹರಿಸಲಿ.

– ಶಿವಕುಮಾರ, ತುಂಬಸೋಗೆ ಗ್ರಾಮ

■ ಯಾಕಿಷ್ಟು ಆತುರ ರಾಜ್ಯ ಸರ್ಕಾರಕ್ಕೆ?

ಮಾನ್ಯರೆ,

ರಾಜ್ಯದ ಹತ್ತು ನಗರಪಾಲಿಕೆಗಳಿಗೆ ಮುಂದಿನ ಮೇಯರ್ ಮತ್ತು ಉಪಮೇಯರ್ ಮೀಸಲಾತಿ ಪಟ್ಟಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ.

ಈ ಎಲ್ಲಾ ನಗರಪಾಲಿಕೆಗಳಿಗೆ ಚುನಾವಣೆ ಯಾವಾಗ ನಡೆಯುತ್ತದೆ ಎಂಬುದೇ ತಿಳಿದಿಲ್ಲ. ಸದ್ಯಕ್ಕೆ ಚುನಾವಣೆ ನಡೆಯುವ ಸಾಧ್ಯತೆಗಳು ಬಹಳ ಕಡಿಮೆ. ಒಂದು ವೇಳೆ ಚುನಾವಣೆ ನಡೆದು ಜನಪ್ರತಿನಿಧಿಗಳು ಆಯ್ಕೆಯಾಗಲು ಕನಿಷ್ಠ ಇನ್ನೂ ಐದಾರು ತಿಂಗಳುಗಳಾದರೂ ಬೇಕಾಗಬಹುದು. ಆದರೆ ಸರ್ಕಾರ ಮಾತ್ರ ತರಾತುರಿಯಲ್ಲಿ ಮೇಯರ್ ಮತ್ತು ಉಪಮೇಯರ್ ಮೀಸಲಾತಿಯನ್ನೂ ಪ್ರಕಟಿಸಿದೆ. ಇದರ ಹಿಂದಿರುವ ರಾಜಕೀಯ ಉದ್ದೇಶವಾದರೂ ಏನು?

ಈ ರೀತಿ ಚುನಾವಣೆಗೆ ಮೊದಲೇ ಮೇಯರ್ ಮತ್ತು ಉಪಮೇಯರ್ ಮೀಸಲಾತಿ ಪ್ರಕಟಿಸಿರುವುದು ರಾಜ್ಯದ ಇತಿಹಾಸದಲ್ಲೇ ಮೊದಲು. ಸುಮ್ಮನಿದ್ದ ಜನಕ್ಕೆ ಈ ರಾಜಕೀಯದ ಅಫೀಮು ಕುಡಿಸುವ ಉದ್ದೇಶವಾದರೂ ಏನು? ಜನರ ಮನಸ್ಸನ್ನು ಬೇರೆ ಕಡೆಗೆ ಸೆಳೆಯುವ ಹುನ್ನಾರವೇ?

–ಬೂಕನಕೆರೆ ವಿಜೇಂದ್ರ,ಕುವೆಂಪು ನಗರ, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಕಾಣದ ಗ್ರಾಮಕ್ಕೆ ಕೈಮರ

ಶ್ರೀಯುತ ಕೆ.ರಮೇಶ್ ಹಿಂದೆ ಗ್ರಾಮನಿಧಿ ಎಂಬ ಪುಸ್ತಕವನ್ನು ಬರೆದಿದ್ದರು. ಅದರಲ್ಲಿ ಭಾರತ ದೇಶದ 108 ವಿಶಿಷ್ಟ ಗ್ರಾಮಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಸಿದ್ದರು. ಗ್ರಾಮ ವೀಕ್ಷಣೆಯನ್ನು ಹವ್ಯಾಸವಾಗಿ ಮಾಡಿಕೊಂಡಿರುವ ಅವರು ಈಗ **ಕಾಣದ ಗ್ರಾಮಕ್ಕೆ ಕೈಮರ** ಎಂಬ ಹೊಸ ಕೃತಿಯನ್ನು ನೀಡಿದ್ದಾರೆ. ಇದರಲ್ಲಿ ನಮ್ಮ ದೇಶದ 84 ವಿಶಿಷ್ಟ ಗ್ರಾಮಗಳ ಪರಿಚಯವಿದೆ. ಸರಳ ಕನ್ನಡದಲ್ಲಿ ರಚಿತವಾದ ಈ ಕೃತಿಯನ್ನು ಓದಲು ಕೈಗೆತ್ತಿಕೊಂಡರೆ ಮುಗಿಯುವವರೆಗೂ ಅದನ್ನು ಕೆಳಗಿಸಲು ಮನಸ್ಸಾಗುವುದಿಲ್ಲ.

ಕೋಶ ಓದಬೇಕು, ದೇಶ ಸುತ್ತಬೇಕು ಎಂಬ ಗಾದೆಯಿದೆ. ಸಾವಿರಾರು ಹಳ್ಳಿಗಳಿರುವ ನಮ್ಮ ನಾಡಿನಲ್ಲಿ ಒಂದೊಂದರದೂ ಸ್ಥಳ ಪುರಾಣ, ಆ ಊರಿನ ಹಿರಿಯರ ಕಥೆ, ಶಿಲ್ಪಕಲೆ ಇತ್ಯಾದಿ ವಿಶೇಷಗಳಿರುತ್ತವೆ. ಅವುಗಳನ್ನು ಕಾಣುವ ಕಣ್ಣು, ವಿಷಯಗಳನ್ನು ಕೇಳುವ ಕುತೂಹಲ, ನಿರೂಪಣೆಯ ಕೌಶಲ ಇವುಗಳಿದ್ದರೆ ಇತಿ ವೃತ್ತಗಳಿಗೇನೂ ಕೊರತೆಯಿಲ್ಲ. ಈ ಎಲ್ಲ ಸಾಮಗ್ರಿಯನ್ನು ವಿಫುಲವಾಗಿ ಹೊಂದಿರುವ ಕೆ.ರಮೇಶ್ ಸಾರ್ಥಕ ಪ್ರಯತ್ನವನ್ನು ಮಾಡಿದ್ದಾರೆ. ಕರ್ನಾಟಕ, ಗುಜರಾತ್, ಕೇರಳ, ರಾಜಸ್ಥಾನ, ತಮಿಳುನಾಡು, ಮಹಾರಾಷ್ಟ್ರ, ಓರಿಸ್ಸಾ, ನಾಗಾಲ್ಯಾಂಡ್, ಮಣಿಪುರ, ಮಧ್ಯಪ್ರದೇಶ, ಉತ್ತರ ಖಾಂಡ, ತೆಲಂಗಾಣ, ಮೇಘಾಲಯ, ಅಸ್ಸಾಂ, ಹಿಮಾಚಲಪ್ರದೇಶ, ಜಮ್ಮು ಕಾಶ್ಮೀರ, ಬಿಹಾರ್, ಆಂಧ್ರಪ್ರದೇಶ, ಪಂಜಾಬ್, ಅರುಣಾಚಲ ಪ್ರದೇಶ, ಉತ್ತರಪ್ರದೇಶ ಎಂಬ ರಾಜ್ಯಗಳಲ್ಲಿ ಇಂದೂ ಇರುವ, ಒಟ್ಟು ಎಂಬತ್ತನಾಲ್ಕು ಗ್ರಾಮಗಳ ವೈಶಿಷ್ಟ್ಯವನ್ನು ಲೇಖಕರು ಈ ಪುಸ್ತಕದಲ್ಲಿ ಬೆಳಕಿಗೆ ತಂದಿದ್ದಾರೆ ಎಂದರೆ ಸಮಸ್ತ ಭಾರತವನ್ನೇ ನಮ್ಮ ಕಣ್ಣ ಮುಂದೆ ಇಟ್ಟಿದ್ದಾರೆ– ಎಂದುಕೊಳ್ಳಬಹುದು.

ಎಂತಹ ವಿಶೇಷಗಳಿವೆ ನಮ್ಮ ದೇಶದಲ್ಲಿ! ಕುಂದಾಪುರ–ತೀರ್ಥಹಳ್ಳಿ ಹೆದ್ದಾರಿಯ ಸಮೀಪದಲ್ಲಿ ಕಮಲಶಿಲೆ ಎಂಬ ಗ್ರಾಮದಲ್ಲಿ ಕುಬ್ಜಾ ನದಿಯು ದುರ್ಗಾ ಪರಮೇಶ್ವರೀ ದೇವಾಲಯದಲ್ಲಿರುವ ದೇವಿಗೆ ವರ್ಷಕ್ಕೊಮ್ಮೆ, ಒಮ್ಮೆ ಮಾತ್ರ, ಉಕ್ಕಿ ಒಂದು ಸ್ನಾನಮಾಡಿಸುತ್ತದೆ! ಯಾವ ದಿನ ಹಾಗೆ ಸ್ನಾನ ಮಾಡಿಸುತ್ತದೆ ಎಂಬುದನ್ನು ಯಾರೂ ಹೇಳಲಾರರು!

ರಾಜಸ್ಥಾನದ ಜೈಸಲ್ಮೇರ್ ಪಟ್ಟಣದ ಸಮೀಪದಲ್ಲಿರುವ ಕುಲ್‌ಧಾರಾ ಎಂಬ ಗ್ರಾಮದಲ್ಲಿ ಈಗ ಒಬ್ಬರೂ ಇಲ್ಲವಂತೆ. ಹಿಂದೆ ಇಲ್ಲಿ ಸಾವಿರದೈನೂರು ಜನರಿದ್ದರು. ಸಲೀಸಿಂಗ್ ಎಂಬ ದಿವಾನನು ಗ್ರಾಮದ ಮುಖಂಡನ ಮಗಳನ್ನು ಬಯಸಿ ಅವಳು ಒಪ್ಪದಿದ್ದರೆ ಗ್ರಾಮಸ್ಥರ ಮೇಲೆ ಅಧಿಕ ತೆರಿಗೆಯನ್ನು ಹೇರುವುದಾಗಿ ಹೆದರಿಸಿದನಂತೆ. ಮರ್ಯಾದೆಯನ್ನು ಕಾಪಾಡಿಕೊಳ್ಳಲು ಅವರೆಲ್ಲರೂ ಗ್ರಾಮವನ್ನೇ ತ್ಯಜಿಸಿ ಹೋದರು. ಮತ್ತೆ ಯಾರೂ ಬಂದು ವಾಸಿಸಬಾರದು ಎಂಬ ಶಾಪವನ್ನು ಕೊಟ್ಟರು. ಅದರಿಂದ ಹಳ್ಳಿ ಇಂದು ನಿರ್ಜನವಾಗಿದೆ.

ಕರ್ನಾಟಕದ ಗದಗ ಜಿಲ್ಲೆಯ ರೋಣ ತಾಲೂಕಿನ ನಾಗರಾಳ ಎಂಬ ಗ್ರಾಮದ ವೈಶಿಷ್ಟ್ಯವೇನೆಂದರೆ ಇದು ಗಜ್ಜರಿ (ಕ್ಯಾರೆಟ್) ಗ್ರಾಮವಾಗಿ ಪ್ರಸಿದ್ಧ. ಎಲ್ಲ ರೈತರೂ ಇಲ್ಲಿ ಗಜ್ಜರಿ ಬೆಳೆಯುತ್ತಾರಂತೆ. ಈ ಗಜ್ಜರಿಯ ರುಚಿ ಬೇರೆ ಎಲ್ಲಿ ಬೆಳೆದ ಗಜ್ಜರಿಯಲ್ಲೂ ಇಲ್ಲ ಎನ್ನುತ್ತಾರೆ. ಈ ಗ್ರಾಮದಲ್ಲಿ ಯಾರೂ ನಿರುದ್ಯೋಗಿಗಳಿಲ್ಲ.

ಮಹಾರಾಷ್ಟ್ರದಲ್ಲಿರುವ ಕೊರ್‌ಲಾಯ್ ಎಂಬ ಗ್ರಾಮದ ಜನರೆಲ್ಲ ಇಂದು ಕೂಡ ಪೋರ್ಚುಗೀಸ್ ಭಾಷೆಯನ್ನೇ ಮಾತನಾಡುತ್ತಾರೆ ಎಂಬುದು ಅದರ ವೈಶಿಷ್ಟ್ಯ. ಕೇರಳ ರಾಜ್ಯದ ಅರನ್ಮುಲ ಎಂಬ ಗ್ರಾಮದಲ್ಲಿ ಇಂದಿಗೂ ಲೋಹದ ಕನ್ನಡಿಗಳನ್ನು ತಯಾರಿಸುತ್ತಾರೆ



ಎಂದರೆ ಆಶ್ಚರ್ಯವಲ್ಲವೆ? ಗಾಜನ್ನು ಮನುಷ್ಯನು ಕಂಡು ಹಿಡಿಯುವ ಮೊದಲು ಲೋಹದ ಕನ್ನಡಿಗಳನ್ನು ಮಾಡುತ್ತಿದ್ದರು ಎಂದು ಕೇಳಿದ್ದೇವೆ. ಅವನ್ನು ಜನರು ದರ್ಪಣ, ಮುಕುರ, ಆದರ್ಶ ಎಂದು ಕರೆಯುತ್ತಿದ್ದರು. ಕಾಳಿದಾಸನು ಕುಮಾರ ಸಂಭವ ಎಂಬ ಕಾವ್ಯದಲ್ಲಿ ಪಾರ್ವತಿಯು ತನ್ನ ಮತ್ತು ಶಿವನ ರೂಪವನ್ನು ದರ್ಪಣದಲ್ಲಿ ನೋಡಿದಳು ಎಂದು ವರ್ಣಿಸಿದ್ದಾನೆ. (ದರ್ಪಣೇ ಚ ಪರಿ ಭೋಗದರ್ಶಿನೀ ಪೃಷ್ಠತಃ ಪ್ರಣಯಿನೋ ನಿಷೇದುಷಃ) ಈ ಲೋಹದ ಕನ್ನಡಿಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಾರೆ. ಬೆಲೆ ಹೆಚ್ಚಾಗಿರುವುದರಿಂದ ಸಾಮಾನ್ಯ ಜನರು ಇವುಗಳನ್ನು ಕೊಳ್ಳಲಾಗದು.

ಕೇರಳದಲ್ಲೇ ಇರುವ ತಿರುವರಪ್ಪು ಎಂಬ ಗ್ರಾಮದಲ್ಲಿರುವ ಕೃಷ್ಣನ ದೇವಸ್ಥಾನ ದಿನದಲ್ಲಿ ಕೇವಲ ಎರಡು ನಿಮಿಷ ಮುಚ್ಚಿರುತ್ತದೆ. (11.58ರಿಂದ 12 ಮಧ್ಯರಾತ್ರಿ). ಇಲ್ಲಿ ಕೃಷ್ಣನಿಗೆ ದಿನದಲ್ಲಿ ಹತ್ತು ಬಾರಿ ನೈವೇದ್ಯವನ್ನು ಅರ್ಪಿಸುತ್ತಾರೆ. ಇಲ್ಲಿಗೆ ಬರುವ ಪ್ರತಿಯೊಬ್ಬ ಭಕ್ತರಿಗೆ, ಅವರು ಯಾವಾಗ ಬಂದರೂ ಸರಿ, ಪ್ರಸಾದ ಸಿಕ್ಕೇ ಸಿಕ್ಕುತ್ತದೆ ಎಂಬ ವೈಶಿಷ್ಟ್ಯವನ್ನು ಲೇಖಕರು ದಾಖಲಿಸಿದ್ದಾರೆ.

ಮಹಾರಾಷ್ಟ್ರದ ಯೋಲ (Yeola) ಎಂಬ ಗ್ರಾಮದ ಪೈತಾನೀ ಸೀರೆಗಳನ್ನು ನೇಯುವ ಮಗ್ಗಗಳ ಗ್ರಾಮವೆಂದು ಪ್ರಸಿದ್ಧ. ಇಲ್ಲಿಯ ಸೀರೆಗಳ ಬೆಲೆ ಕನಿಷ್ಠ ಎಂದರೆ ಆರು ಸಾವಿರ ರೂಪಾಯಿ, ಗರಿಷ್ಠ ಐದು ಲಕ್ಷ ರೂಪಾಯಿಯೂ ಆಗಬಹುದು. ಚಿನ್ನದ ಕಸೂತಿ ಹಾಕಿರುವ ಸೀರೆಗಳೂ ಶ್ರೀಮಂತರಿಗೆ ಲಭ್ಯ. ಇವುಗಳ ಗ್ರಾಹಕರು ಸಿನಿಮಾ ನಟಿಮಣಿಗಳೆಂದರೆ ಆಶ್ಚರ್ಯವೇನಿಲ್ಲ.

ಕರ್ನಾಟಕ ರಾಜ್ಯದ ದೊಡ್ಡಬಳ್ಳಾಪುರದ ಬಳಿ ಇರುವ ಸಿಂಪಡಿಪುರ ವೀಣಾ ಗ್ರಾಮ. ಏಕೆಂದರೆ ಇಲ್ಲಿ ವೀಣೆಗಳನ್ನು ತಯಾರಿಸುತ್ತಾರೆ. ನಾನಾ ವಿಧವಾದ ವೀಣೆಗಳ ಬೆಲೆ ಹದಿನೈದು ಸಾವಿರ ರೂಪಾಯಿನಿಂದ ಮೂವತ್ತೈದು ಸಾವಿರ ರೂಪಾಯಿವರೆಗೆ ಆಗಬಹುದು. ಹೀಗೆಯೇ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ನಟಗಾರ್ ಎಂಬ ಗ್ರಾಮ ಕೊಳಲಿನ ಗ್ರಾಮ. ಇಲ್ಲಿ ತಯಾರಾದ ಕೊಳಲನ್ನು ವಿಖ್ಯಾತ ಪ್ರವೀಣ್ ಗೋಡ್ಕಿಂಡಿಯವರೂ ಬಳಸುತ್ತಾರೆ ಎಂಬ ಅಪೂರ್ವ ಮಾಹಿತಿಯನ್ನು ಲೇಖಕರು ಇಲ್ಲಿ ಕೊಟ್ಟಿದ್ದಾರೆ.

ಮಣಿಪುರ ತುಂಗಾ ತೋಗ್ರಾಮ್ (Thunga Thogram) ಎಂಬ ಗ್ರಾಮದ ವೈಶಿಷ್ಟ್ಯವನ್ನು ರಮೇಶ್ ಅವರ ಮಾತಿನಲ್ಲೇ ತಿಳಿದುಕೊಳ್ಳೋಣ: "ಮಣಿಪುರ ರಾಜ್ಯದ ಪುಟ್ಟ ಗ್ರಾಮ ತುಂಗಾ ತೋಗ್ರಾಮ್. ಇಲ್ಲಿಯ ವಿಶೇಷ ತಾವರೆಯ ದಂಟಿನಿಂದ ಸಿಲ್ಕ್‌ನ ತಯಾರಿಕೆ. ಲೋಕತಾಕ್ ಎಂಬ ಸರೋವರ ಅತ್ಯಂತ ವಿಶಾಲವಾದದ್ದು. ಇಲ್ಲಿ ತಾವರೆಯನ್ನು ಬೆಳೆಯುತ್ತಾರೆ. ಈ ತಾವರೆಯನ್ನು ಕಿತ್ತು ಅದರ ದಂಟನ್ನು ಬೇರ್ಪಡಿಸಿ ನಾರನ್ನು ತಯಾರಿಸುತ್ತಾರೆ. ನೀರಿನಲ್ಲಿ ಅದನ್ನು ನೆನೆಸಿ ಅವುಗಳನ್ನು ಬೊಂಬಿನ ಮೇಲೆ ಒಣಗಲು ಬಿಡುತ್ತಾರೆ. ಒಣಗಿದ ಮೇಲೆ ಅದರಿಂದ ನೂಲನ್ನು ತೆಗೆದು ಸುತ್ತುತ್ತಾರೆ. ಇವೆಲ್ಲವನ್ನೂ ಒಂದೇ ದಿನದಲ್ಲಿ ಮಾಡಬೇಕು. ನಂತರ ಇದರಿಂದ ಪಾರಂಪರಿಕ ನೇಯ್ಗೆ ಯಂತ್ರದಿಂದ ಶಾಲ್‌ಗಳನ್ನು ನೇಯುತ್ತಾರೆ. ಒಂದು ಶಾಲ್‌ನ ತಯಾರಿಕೆಗೆ ಸುಮಾರು ಒಂದು ತಿಂಗಳು ಬೇಕಾಗುತ್ತದೆ. ಒಂದು ಮೀಟರ್‌ನ ಶಾಲ್‌ಗೆ ಸುಮಾರು 32,000 ತಾವರೆಗಳ ದಂಟು ಬೇಕಾಗುತ್ತದೆ ಎಂದರೆ ಆಶ್ಚರ್ಯವಲ್ಲವೆ? ಇದು ಬಹಳ ದುಬಾರಿಯಾದ ಸಿಲ್ಕ್. ಇದರ ಬೆಲೆ ಪ್ರತಿ ಶಾಲ್‌ಗೆ ಸುಮಾರು 17000 ರೂಪಾಯಿಗಳು. ಬಹುತೇಕ ಶಾಲ್‌ಗಳು ವಿದೇಶಕ್ಕೆ ರಫ್ತಾಗುತ್ತವೆ. ಭಾರತದ ಈ ಒಂದು ಗ್ರಾಮದಲ್ಲಿ ಮಾತ್ರ ಈ ತರಹದ ತಾವರೆಯ ದಂಟಿನ ನೂಲಿನ ಸಿಲ್ಕ್‌ನ ಶಾಲ್‌ಗಳು ಉತ್ಪಾದನೆಯಾಗುತ್ತಿವೆ. ಭಾರತ ಸರ್ಕಾರದ ಮಹಿಳೆಯರ ಅಭಿವೃದ್ಧಿ ಇಲಾಖೆ ಈ ಉದ್ದಿಮೆಗೆ ಬಹಳ ಉತ್ತೇಜನ ನೀಡಿದೆ ಇದನ್ನು ಮೊದಲ ಬಾರಿಗೆ 1950ರಲ್ಲಿ ಈಗಿನ ಮಯನ್ಮಾರ್‌ನಲ್ಲಿ ತಯಾರಿಸಲಾಯಿತು. ನಂತರ ಕಾಂಬೋಡಿಯಾ ಹಾಗೂ ವಿಯೆಟ್ನಾಮ್‌ನಲ್ಲಿ ತಯಾರಿಸಲಾಗುತ್ತಿದೆ. ಅಂದರೆ ವಿಶ್ವದ ಕೇವಲ ನಾಲ್ಕು ರಾಷ್ಟ್ರಗಳಲ್ಲಿ ಈ ತಾವರೆ ದಂಟಿನ ಸಿಲ್ಕ್ ತಯಾರಾಗುತ್ತದೆ. ಇದು ಮಣಿಪುರಕ್ಕೆ ಮಾತ್ರವಲ್ಲದೆ ಭಾರತಕ್ಕೆ ಹೆಮ್ಮೆಯ ವಿಷಯವಲ್ಲವೆ? (ಪು. 70–71)


ಈ ನಿರೂಪಣಾ ಶೈಲಿ ಎಷ್ಟು ಚೆನ್ನಾಗಿದೆ ಅಲ್ಲವೆ? ಸುಲಿದ ಬಾಳೆಯ ಹಣ್ಣಿನಂದದಿ, ಅಳಿದ ಉಷ್ಣದ ಹಾಲಿನಂದದಿ ಲಲಿತವಾಗಿರ್ಪ ಕನ್ನಡಕ್ಕೆ ರಮೇಶರ ಬರವಣಿಗೆ ಉತ್ತಮ ಉದಾಹರಣೆ.

ಈ ಪುಸ್ತಕದ ಇನ್ನೊಂದು ವಿಶೇಷಾಂಶವೇನೆಂದರೆ ಒಂದೊಂದು ಹಳ್ಳಿಯ ಪರಿಚಯ ಲೇಖನದಲ್ಲೂ ಇರುವ ಚಿತ್ರಗಳು. ಒಂದು ಚಿತ್ರ ನೂರು ವಾಕ್ಯಗಳಿಗೆ ಸಮ ಎಂಬ ಹೇಳಿಕೆ ಸತ್ಯ. ಗುಜರಾತಿನ ಮಧಾಪುರ ಎಂಬುದು ಇಡೀ ವಿಶ್ವದಲ್ಲೇ ಶ್ರೀಮಂತ ಗ್ರಾಮವಂತೆ. ಇದರ ಬಗೆಗೆ ಎಷ್ಟು ಬರೆದರೂ ಅದು ಹೇಗಿದೆಯೆಂಬ ಕಲ್ಪನೆ ಓದುಗರಿಗೆ ಬರದು. ಅಲ್ಲಿ ಕೊಟ್ಟಿರುವ ಚಿತ್ರದಿಂದ ನಮಗೆ ಅದರ ಸೊಗಸಿನ ಅರಿವಾಗುತ್ತದೆ.

ಮಧ್ಯಪ್ರದೇಶದಲ್ಲಿರುವ ಝುರಿ ಎಂಬುದು ಸಂಸ್ಕೃತ ಗ್ರಾಮ. ಹಾಗೆಯೇ ಓರಿಸ್ಸಾದ ಸಾಸನ, ರಾಜಸ್ಥಾನದ ಗನೊಡ ಸಂಸ್ಕೃತ ಗ್ರಾಮಗಳು ಎಂದು ಈ ಪುಸ್ತಕದಿಂದ ನನಗೆ ತಿಳಿಯಿತು. ಇಂತಹ ಹಲವು ವಿಶೇಷಗಳನ್ನು ಅರಿಯಲು, ಗ್ರಾಮಗಳ ಚಿತ್ರಗಳನ್ನು ನೋಡಿ ಆನಂದಿಸಲು ವಾಚಕರು ಕಾಣದ ಗ್ರಾಮಕ್ಕೆ ಕೈಮರ ಎಂಬ ಈ ಪುಸ್ತಕವನ್ನು ಓದಬೇಕು.

ಯುಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ಅನುಕೂಲಕಾರಿಯಾಗಿ ಪಿಎಸ್‌ಐ ಪರೀಕ್ಷೆ ಮುಂದೂಡಿಕೆ ಚಿಂತನೆ

ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ ನೇತೃತ್ವದ ಬಿಜೆಪಿ ನಿಯೋಗ ಗೃಹ ಸಚಿವ ಡಾ.ಪರಮೇಶ್ವರ್ ಭೇಟಿ



ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ನೇತೃತ್ವದ ಬಿಜೆಪಿ ನಿಯೋಗ ಗೃಹ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಬೆಂಗಳೂರು, ಸೆ.10(ಕೆಎಂಶಿ) – ಯುಪಿಎಸ್‌ಸಿ ಮುಖ್ಯ ಪರೀಕ್ಷೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅನುಕೂಲಕ್ಕೆ ಪಿಎಸ್‌ಐ ಪರೀಕ್ಷೆ ಮುಂದೂಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಮಾಜಿ ಉಪಮುಖ್ಯಮಂತ್ರಿ ಡಾ. ಅಶ್ವತ್ಥ ನಾರಾಯಣ ನೇತೃತ್ವದಲ್ಲಿ ಬಿಜೆಪಿ ನಿಯೋಗ ಗೃಹ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಯುಪಿಎಸ್‌ಸಿ ಅಭ್ಯರ್ಥಿಗಳಿಗೆ ಅನುಕೂಲ ಆಗುವ ರೀತಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಶ್ವತ್ಥನಾರಾಯಣ, ಪಿಎಸ್‌ಐ ಪರೀಕ್ಷೆಯನ್ನು ಮುಂದೂಡಬೇಕೆಂದು ಮನವಿ ಸಲ್ಲಿಸಿದ್ದೇವೆ ಎಂದರು.

ಪರೀಕ್ಷೆ ಮುಂದೂಡುವ ವಿಶ್ವಾಸವಿದೆ, 402 ಹುದ್ದೆ ಪೈಕಿ 102 ಜನರು ಹಾಲ್ ಟಿಕೆಟ್ ಹೊಂದಿದವರು ಯುಪಿಎಸ್ಸಿ ಮೈನ್ಸ್‌ಗೆ ಆಯ್ಕೆಯಾಗಿದ್ದಾರೆ. ಈ ಸಂಖ್ಯೆ ಇನ್ನೂ ಹೆಚ್ಚಾಗಿರುವ ಸಾಧ್ಯತೆ ಇದೆ. ಯುಪಿಎಸ್ಸಿ ಮೈನ್ಸ್‌ಗೆ ಆಯ್ಕೆಯಾದವರು ಪಿಎಸ್‌ಐ ಪರೀಕ್ಷೆಯಲ್ಲಿ 100ಕ್ಕೆ ನೂರು ಆಯ್ಕೆ ಆಗಿಯೇ ಆಗುತ್ತಾರೆ, ಅವರಿಗೆ ಅನ್ಯಾಯ ಆಗಬಾರದು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನಿರ್ಲಕ್ಷ್ಯದಿಂದ, ಬೇಜವಾಬ್ದಾರಿಯಿಂದ ಒಂದೇ ದಿನಾಂಕವನ್ನು ನಿಗದಿ ಮಾಡಿದ್ದಾರೆ, ಇದನ್ನು ತಕ್ಷಣ ಸರಿಪಡಿಸಲು ಗೃಹ ಸಚಿವರಲ್ಲಿ ಕೋರಿದ್ದೇವೆ, ನ್ಯಾಯಬದ್ಧ ಕೋರಿಕೆಯನ್ನು ಗೃಹ ಸಚಿವರು ಈಡೇರಿಸುವ ವಿಶ್ವಾಸ ಹೊಂದಿರುವುದಾಗಿ ತಿಳಿಸಿದರು.

ಜಾರಿ ನಿರ್ದೇಶನಾಲಯ(ಇ.ಡಿ.)ದವರು ವಾಲ್ಮೀಕಿ ನಿಗಮದ ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ಅವರೇ ಸೂತ್ರಧಾರಿ ಎಂದು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ, ಅಧಿಕಾರಿ ಚಂದ್ರಶೇಖರ್ ತಮ್ಮ ಡೆತ್‌ನೋಟ್‌ನಲ್ಲಿ ಈ ಕುರಿತು ಸ್ಪಷ್ಟವಾಗಿ ತಿಳಿಸಿದ್ದರು. ಅಂದಿನ ಸಚಿವ ನಾಗೇಂದ್ರ ಅವರ ಮಾರ್ಗದರ್ಶನ ಮತ್ತು ನಿರ್ಣಯದ ಪ್ರಕಾರ ಹಣ ವರ್ಗಾವಣೆ ನಡೆದಿರುವುದು, ಬೇರೆ ಬೇರೆ ಖಾತೆಗೆ ವರ್ಗಾಯಿಸಿದ್ದು ಮತ್ತು ತೆಲಂಗಾಣ, ಬಳ್ಳಾರಿ ಲೋಕಸಭಾ ಚುನಾವಣೆಗೆ ಬಳಸಿದ್ದು ಸ್ಪಷ್ಟವಾಗಿ ಗೊತ್ತಾಗಿದೆ. ಅವರ ಜೊತೆ ಸಹಚರರೂ ಭಾಗಿಯಾಗಿದ್ದಾರೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಹೊಣೆ ಹೊರಬೇಕೆಂಬ ವಿಚಾರದಲ್ಲಿ ಅನುಮಾನವೇ ಇಲ್ಲ, ಖಜಾನೆಯಿಂದ ನೇರವಾಗಿ ಹಣ ವರ್ಗಾವಣೆ ಆಗಿದೆ, ಹಣಕಾಸು ಇಲಾಖೆ ಸಹಕಾರ ಇಲ್ಲದೇ ಇದು ಸಾಧ್ಯವಿಲ್ಲ.

ಕಾಂಗ್ರೆಸ್ ಸರಕಾರ ಭಯೋತ್ಪಾದಕರ ಕುರಿತು ಮೃದು ಧೋರಣೆ ತೋರಿಸಬಾರದು, ಸರ್ಕಾರದ ತುಷ್ಟೀಕರಣವೇ ಬಿಜೆಪಿ ಕಚೇರಿ ಸ್ಫೋಟಕ್ಕೆ ಟಾರ್ಗೆಟ್ ಮಾಡಲು ಕಾರಣ ಎಂದರು.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನ

ಮೈಸೂರು,ಸೆ.10–ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಹುಣಸೂರು ತಾಲೂಕಿನ ಮೋದೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾಗಿ ಮಾಸಿಕ ರೂ. 9000 ಗೌರವ ಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಸಮರ್ಥ ವಿಕಲಚೇತನ ವ್ಯಕ್ತಿಗಳು ಅರ್ಜಿಯನ್ನು ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸೆ.17ರೊಳಗೆ ಸಲ್ಲಿಸಬೇಕು. ಮಾಹಿತಿಗೆ ಮೊ.ಸಂ: 97396 44342 ಅನ್ನು ಸಂಪರ್ಕಿಸಬಹುದು.

ಅಕ್ರಮ ಹಣ ವರ್ಗಾವಣೆ ಆರೋಪ

ಎಸ್‌ಐಟಿ ಆರೋಪ ಪಟ್ಟಿಯಲ್ಲಿ ಇಲ್ಲದ ಮಾಜಿ ಸಚಿವ ನಾಗೇಂದ್ರ ಇಡಿ ಚಾರ್ಜ್‌ಶೀಟ್‌ನಲ್ಲಿ ಎ1!



ಬೆಂಗಳೂರು, ಸೆ.10– ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ.) ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಎ1 ಆರೋಪಿಯನ್ನಾಗಿ ಪರಿಗಣಿಸಿ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಮಂಗಳವಾರ ಆರೋಪಪಟ್ಟಿ ಸಲ್ಲಿಸಿದೆ.

ಈ ಹಿಂದೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿದ್ದ ಆರೋಪಪಟ್ಟಿಯಲ್ಲಿ ನಾಗೇಂದ್ರ ಅವರ ಹೆಸರು ಇರಲಿಲ್ಲ. ಆದರೆ, ಇ.ಡಿ. ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಮಾಜಿ ಸಚಿವರನ್ನೇ ಮೊದಲ ಆರೋಪಿಯನ್ನಾಗಿ ಮಾಡಲಾಗಿದೆ. ಇದರ ಜೊತೆಗೆ, ಹೈದರಾಬಾದ್ ಫಸ್ಟ್ ಕ್ರೆಡಿಟ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸತ್ಯನಾರಾಯಣ ವರ್ಮಾ ಕೂಡ ಜಂಟಿ ಪ್ರಥಮ ಆರೋಪಿಯಾಗಿದ್ದಾರೆ.

5114 ಪುಟಗಳ ದೋಷಾರೋಪಪಟ್ಟಿಯಲ್ಲಿ ಮಾಜಿ ಸಚಿವ ನಾಗೇಂದ್ರ ಸೇರಿದಂತೆ 24 ಮಂದಿ ವಿರುದ್ಧ ಆರೋಪ ಹೊರಿಸಲಾಗಿದೆ. ಪ್ರಕರಣದ ಸಂಬಂಧ ಮಾಜಿ ಸಚಿವರನ್ನು ಬಂಧಿಸಿ ವಿಚಾರಣೆ ನಡೆಸಿದ ವೇಳೆ ನಿಗಮದ ಕೋಟ್ಯಾಂತರ ರೂಪಾಯಿ ಹಣವನ್ನು ತೆಲಂಗಾಣ ಲೋಕಸಭಾ ಚುನಾವಣೆಯಲ್ಲಿ ಮದ್ಯ ಖರೀದಿಗೆ ವಿನಿಯೋಗಿಸಲಾಗಿದೆ ಎಂದು ಚಾರ್ಜ್‌ಶೀಟ್‌ನಲ್ಲಿ ನಮೂದಿಸಿರುವುದಾಗಿ ಮೂಲಗಳು ತಿಳಿಸಿವೆ.

ಇದೇ ಪ್ರಕರಣದಲ್ಲಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ವಿರುದ್ಧ ಆರೋಪ ಕೇಳಿ ಬಂದಿತ್ತು. ಈ ಕುರಿತು ಇ.ಡಿ ಕೂಡ ವಿಚಾರಣೆ ನಡೆಸಿದೆ. ಆದರೆ, ತನಿಖೆಯಲ್ಲಿ ದದ್ದಲ್ ಪಾತ್ರದ ಬಗ್ಗೆ ಸೂಕ್ತ ಸಾಕ್ಷ್ಯಾಧಾರ ಲಭಿಸದ ಕಾರಣ ಆರೋಪಪಟ್ಟಿಯಲ್ಲಿ ಅವರ ಹೆಸರು ಉಲ್ಲೇಖಿಸಿಲ್ಲ ಎಂದು ತಿಳಿದು ಬಂದಿದೆ.

ಎಸ್‌ಐಟಿ ಪಟ್ಟಿಯಲ್ಲೇನಿತ್ತು

ಪ್ರಕರಣ ಬಯಲಾದ ಬಳಿಕ ಮೊದಲು ತನಿಖೆ ನಡೆಸಲು ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ)ವನ್ನು ರಚಿಸಿತ್ತು. ಬಳಿಕ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅದರಲ್ಲಿ ಆರೋಪ ಕೇಳಿ ಬಂದಿದ್ದ ಮಾಜಿ ಸಚಿವ ನಾಗೇಂದ್ರ ಅವರ ಹೆಸರನ್ನೇ ಉಲ್ಲೇಖಿಸಿರಲಿಲ್ಲ. ಸತ್ಯನಾರಾಯಣ ವರ್ಮಾ, ಸತ್ಯ ನಾರಾಯಣ ಇಟಕಾರಿ, ವಾಲ್ಮೀಕಿ ನಿಗಮ ಎಂಡಿ ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ, ನೆಕ್ಕುಂಟಿ ನಾಗರಾಜ್, ನಾಗೇಶ್ವರ್, ಸಾಯಿ ತೇಜ ಸೇರಿ 12 ಆರೋಪಿಗಳ ಮೇಲೆ ಆರೋಪ ಮಾಡಲಾಗಿತ್ತು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಕೆ.ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣದ ಸಂಬಂಧ ಶಿವಮೊಗ್ಗ ನ್ಯಾಯಾಲಯಕ್ಕೆ ಎಸ್‌ಐಟಿ ಸಲ್ಲಿಸಿದ್ದ ದೋಷಾರೋಪ ಪಟ್ಟಿಯಲ್ಲೂ ನಾಗೇಂದ್ರ ಅವರ ಹೆಸರು ಪ್ರಸ್ತಾಪ ಆಗಿರಲಿಲ್ಲ.

ಹಿರಿಯ ಹೋಟೆಲು ಉದ್ಯಮಿಗಳಿಗೆ 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ



ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಮೂವರು ಹಿರಿಯ ಹೋಟೆಲು ಉದ್ಯಮಿಗಳನ್ನು 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ ಮಾಡಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಸೆ. 10(ಆರ್‌ಕೆ)– ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಮೈಸೂರಿನ ಹೋಟೆಲ್ ಪೈ ವಿಸ್ತಾ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಮೂವರು ಹಿರಿಯ ಹೋಟೆಲು ಉದ್ಯಮಿಗಳನ್ನು 'ಸಹಕಾರ ಮಿತ್ರ' ಪ್ರಶಸ್ತಿ ಪ್ರದಾನ ಮಾಡಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಅರ್ಕಾ ಫೌಂಡೇಷನ್ ಮತ್ತು ಅರ್ಕಧಾಮ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ ಅರ್ಕ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಹಿರಿಯ ಹೋಟೆಲು ಉದ್ಯಮಿಗಳಾದ ಬಿ.ಜಿ.ರಾಘವನ್, ರಾಮಕೃಷ್ಣ ಹೆಬ್ಬಾರ್ ಹಾಗೂ ಆರ್.ಮುರಳೀಧರನ್ ದಂಪತಿಗೆ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಪ್ರಶಸ್ತಿ ಪ್ರದಾನ ಮಾಡಿ, ಹೋಟೆಲು ಉದ್ಯಮದ ಪ್ರಾಮುಖ್ಯತೆ, ಇಂದಿನ ಅಗತ್ಯತೆ ಹಾಗೂ ಆತಿಥ್ಯ ಕ್ಷೇತ್ರದ ಬಗ್ಗೆ ಮಾತನಾಡಿದರು.

ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ, ಉಪಾಧ್ಯಕ್ಷ ಆನಂದ ಎಂ. ಶೆಟ್ಟಿ, ನಿರ್ದೇಶಕರಾದ ಸಿ.ನಾರಾಯಣ ಗೌಡ, ಸುಬ್ರಹ್ಮಣ್ಯ ಆರ್.ತಂತ್ರಿ, ಪಿ. ನಾರಾಯಣ ಕುಂದರ್, ಎಂ. ರಘುವೀರ ಪುರಾಣಿಕ್, ಕೆ.ಸಿ.ವಿಶ್ವಾನಂದ ಭಟ್, ಎಂ.ಎಸ್.ಜಯಪ್ರಕಾಶ್, ಹೇಮಂತ್ ಕುಮಾರ್, ಸುಮಿತ್ರ ಎ. ತಂತ್ರಿ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು. ನಂತರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಚಾರ್ಜ್‌ಶೀಟ್ ವಿವರಗಳನ್ನು ಪ್ರಕಟಿಸಬೇಡಿ

ಮಾಧ್ಯಮಗಳಿಗೆ ಹೈಕೋರ್ಟ್ ನಿರ್ಬಂಧ

ಬೆಂಗಳೂರು: ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ ಎಲ್ಲ 17 ಆರೋಪಿಗಳ ವಿರುದ್ಧ 3,991 ಪುಟಗಳ ವಿವರವಾದ ಆರೋಪ ಪಟ್ಟಿಯನ್ನು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿರುವ ಅಂಶಗಳ ಬಗ್ಗೆ ಈಗಾಗಲೇ ಸಾಕಷ್ಟು ವರದಿಗಳು ಮಾಧ್ಯಮಗಳಲ್ಲಿ, ಸೋಷಿಯಲ್ ಮೀಡಿಯಾಗಳಲ್ಲಿ ಬಂದಿವೆ.

ಚಾರ್ಜ್‌ಶೀಟ್‌ನಲ್ಲಿರುವ ವರದಿಯನ್ನು ಪ್ರಕಟಿಸದಂತೆ ಮಾಧ್ಯಮಗಳಿಗೆ ನಿರ್ಬಂಧ ಹೇರಬೇಕೆಂದು ಕೋರಿ ನಟ ದರ್ಶನ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅದನ್ನು ಮಾನ್ಯ ಮಾಡಿರುವ ನ್ಯಾಯಾಲಯ ಆರೋಪ ಪಟ್ಟಿಯ ಯಾವುದೇ ಮಾಹಿತಿಯನ್ನು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ಸೂಚಿಸಿದೆ. ಮುಂದಿನ ವಿಚಾರಣೆಯವರೆಗೂ ನಿರ್ಬಂಧ ಜಾರಿಯಲ್ಲಿರುತ್ತದೆ. ಪ್ರಕರಣವು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ. ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಸಲ್ಲಿಸಿದ್ದ ಮೊಕದ್ದಮೆಗೆ ಆಗಸ್ಟ್ 27 ರಂದು ಕೆಳ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದರೂ, ಮಾಧ್ಯಮಗಳು ಗೌಪ್ಯ ಮಾಹಿತಿಯನ್ನು ಹಂಚಿಕೊಳ್ಳುವುದನ್ನು ಮುಂದುವರಿಸಿವೆ ಎಂದು ಹೈಕೋರ್ಟ್ ಗಮನಿಸಿದೆ. ಅರ್ಜಿದಾರರ ವಾದವನ್ನು ಮಾನ್ಯ ಮಾಡಿದ ನ್ಯಾಯಾಲಯವು 3 ರಿಂದ 40ರ ಪ್ರತಿವಾದಿಗಳಾಗಿ ಗುರುತಿಸಲಾದ ಮಾಧ್ಯಮಗಳಿಗೆ, ಮುಂದಿನ ವಿಚಾರಣೆಯವರೆಗೆ ಆರೋಪಪಟ್ಟಿಯಿಂದ ಯಾವುದೇ ವಿವರಗಳನ್ನು ಪ್ರಕಟಿಸುವುದನ್ನು ತಡೆಯುವಂತೆ ಆದೇಶ ನೀಡಿತು. ಹೈಕೋರ್ಟ್ ತನ್ನ ನಿರ್ಧಾರ ಪ್ರಕಟಿಸುವಾಗ, 2010ರ ಸುಪ್ರೀಂ ಕೋರ್ಟ್ ತೀರ್ಪನ್ನು 'ಸಿದ್ಧಾರ್ಥ ವಶಿಷ್ಟ @ ಮನು ಶರ್ಮಾ Vs ರಾಜ್ಯ (ಎನ್‌ಸಿಟಿ ಆಫ್ ದೆಹಲಿ)' ಮತ್ತು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ ನಿಯಂತ್ರಣ ಕಾಯಿದೆ, 1995ರ ಷರತ್ತು 5 ಅನ್ನು ಉಲ್ಲೇಖಿಸಿದೆ. ಕರ್ನಾಟಕ ಹೈಕೋರ್ಟ್‌ನ ಸಮನ್ವಯ ಪೀಠದ ಹಿಂದಿನ ತೀರ್ಪನ್ನೂ ಸಹ ಅದು ಉಲ್ಲೇಖಿಸಿದೆ.

ಈ ತೀರ್ಪಿನ ಬಗ್ಗೆ ಮಾಧ್ಯಮ ಸಂಸ್ಥೆಗಳಿಗೆ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೂ ನ್ಯಾಯಾಲಯ ಸೂಚಿಸಿದೆ.

ಮೂರನೇ ಪುಟದಿಂದ

ಮೈಸೂರು, ಚಾ.ನಗರಕ್ಕೆ ವಿಸ್ತರಣೆ

ಒತ್ತಡ ಹೆಚ್ಚುತ್ತಿದೆ, ಮೈಸೂರು ನಿಲ್ದಾಣವನ್ನು ಪ್ರಮುಖ ಕೇಂದ್ರವಾಗಿ ಮಾರ್ಪಡಿಸುವ ಅಗತ್ಯವಿದೆ. ಈಗಾಗಲೇ ಅಲ್ಲಿ ರೈಲ್ವೆ ಕಾರ್ಯಾಗಾರ ಇದ್ದು ನಿಲ್ದಾಣಕ್ಕೆ ಇಟ್ಟಿಗೆಗೂಡು ಬಳಿ ಅಗತ್ಯವಿರುವ ಭೂಸ್ವಾಧೀನ ಮಾಡಿಕೊಳ್ಳುವಂತೆಯೂ ಸಚಿವರು ಸಲಹೆ ಮಾಡಿದ್ದಾರೆ.

ಬೆಂಗಳೂರು ಕೇಂದ್ರದಿಂದ 100 ಕಿಲೋ ಮೀಟರ್ ಮತ್ತು ಅದಕ್ಕೆ ಸಮೀಪದ ನಗರಗಳ ನಡುವಿನ ದ್ವಿಮಾರ್ಗಗಳನ್ನು ನಾಲ್ಕು ಪಥಗಳಾಗಿ ಪರಿವರ್ತಿಸಲು ಇಲಾಖೆ ತೀರ್ಮಾನಿಸಿದೆ. ಈಗಾಗಲೇ ಮೈಸೂರು ಮತ್ತು ತುಮಕೂರು ನಡುವೆ ನಾಲ್ಕು ಪಥ ನಿರ್ಮಾಣಕ್ಕೆ ಸಮೀಕ್ಷೆ ಕಾರ್ಯ ಆರಂಭಗೊಂಡಿದೆ. ಇನ್ನುಳಿದ ನಗರಗಳ ಸಮೀಕ್ಷೆ ಕಾರ್ಯಕ್ಕೂ ಚಾಲನೆ ನೀಡಲಾಗುವುದು. ಕೆಂಗೇರಿಯಿಂದ ವೈಟ್‌ಫೀಲ್ಡ್‌ಗೆ ಸಬ್–ಅರ್ಬನ್ ಯೋಜನೆ ಕೈಬಿಡಿ, ಈಗಾಗಲೇ ಆ ಮಾರ್ಗದಲ್ಲಿ ಮೆಟ್ರೊ ಸಂಚಾರ ಇರುವುದರಿಂದ ಪರ್ಯಾಯವಾಗಿ ಬೆಂಗಳೂರು–ಮಾಗಡಿ–ಕುಣಿಗಲ್‌ಗೆ ಸಬ್–ಅರ್ಬನ್ ರೈಲು ಸಂಚಾರ ಯೋಜನೆ ರೂಪಿಸಿ.

ಇದರಿಂದ ಕೃಷಿಕನಿಗೂ ಹಾಗೂ ದಿನನಿತ್ಯ ಸಂಚರಿಸುವವರಿಗೂ ಅನುಕೂಲವಾಗಲಿದೆ ಹಾಗೂ ರಸ್ತೆ ಸಂಚಾರದ ಮೇಲಿನ ಒತ್ತಡವೂ ಕಡಿಮೆಯಾಗಲಿದೆ ಎಂದಿದ್ದಾರೆ.

ಲೋಕಾಯುಕ್ತ ನೋಟಿಸ್ ಜಾರಿ

ಹೆಚ್ಚುವರಿ ಮಾಹಿತಿ ಪಡೆಯಲು ಮುಡಾದ 18 ಅಧಿಕಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿದವರು, ಕಾರ್ಯದರ್ಶಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಹಾಗೂ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೆ ನೋಟಿಸ್ ಜಾರಿಯಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಸೇರಿದ ಹಿನಕಲ್ ಗ್ರಾಮದ ಸರ್ವೆ ನಂ.89ರಲ್ಲಿ 7.18 ಎಕರೆ ಜಾಗವನ್ನು ಹಿನಕಲ್ ಮಂಡಲ ಪಂಚಾಯ್ತಿ ಅಧ್ಯಕ್ಷರು, ಪ್ರಧಾನರು, 1990–92ನೇ ಸಾಲಿನಲ್ಲಿದ್ದ ಸದಸ್ಯರು ಬಡಾವಣೆ ನಿರ್ಮಿಸಲು ಸಭೆಯಲ್ಲಿ ತೀರ್ಮಾನಿಸಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಗಂಗರಾಜು ದೂರಿನಲ್ಲಿ ಆರೋಪಿಸಿದ್ದರು.

ತಮ್ಮ ಭೂಮಿ ಅತಿಕ್ರಮಿಸಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿದ್ದರೂ, ಸಂಬಂಧಪಟ್ಟವರ ವಿರುದ್ಧ ಕ್ರಮ ವಹಿಸಲು ಮುಡಾ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿ ಭೂಗಳ್ಳರಿಗೆ ಸಹಕರಿಸಿರುವುದರಿಂದ ಅವರ ವಿರುದ್ಧವೂ ಕ್ರಮ ವಹಿಸುವಂತೆ ದೂರಿನಲ್ಲಿ ಕೋರಲಾಗಿತ್ತು.

ಈ ಬಾರಿ ವಿಪರೀತ ಚಳಿ

ಪರಿಣಾಮವೂ ವಿಭಿನ್ನವಾಗಿರಲಿದೆ. ಅಂದರೆ ಕೆಲವು ಪ್ರದೇಶಗಳಲ್ಲಿ ಅತಿಯಾದ ಚಳಿ ಇರಲಿದ್ದು, ಇನ್ನು ಕೆಲವೆಡೆ ಮಧ್ಯಮ ಪ್ರಮಾಣದಲ್ಲಿ ಶೀತ ವಾತಾವರಣ ಇರಲಿದೆ ಎಂದು ಇಲಾಖೆ ಹೇಳಿದೆ.

ಹವಾಮಾನದಲ್ಲಿ ಉಂಟಾಗಬಹುದಾದ ವೈಪರೀತ್ಯದ ಕಾರಣದಿಂದ ಚಳಿಗಾಲಕ್ಕೆ ಅಗತ್ಯವಿರುವ ಬೆಚ್ಚಗಿನ ಬಟ್ಟೆ, ಹೀಟರ್‌ಗಳು ಸೇರಿದಂತೆ ಚಳಿಗೆ ಅಗತ್ಯವಿರುವ ವಸ್ತುಗಳನ್ನು ಮುಂಚೆಯೇ ಖರೀದಿಸಿಟ್ಟುಕೊಳ್ಳಿ, ಹವಾಮಾನ ಬದಲಾವಣೆಯ ವರದಿಯನ್ನು ಗಮನಿಸುತ್ತಿರಿ ಎಂದು ಜನರಿಗೆ ಇಲಾಖೆ ಸಲಹೆ ನೀಡಿದೆ.

ಪೆಸಿಫಿಕ್ ಪ್ರದೇಶದ ಮೇಲ್ಮೈನಲ್ಲಿ ಕಡಿಮೆ ತಾಪಮಾನದಿಂದಾಗಿ ಲಾ ನಿನಾ ವಿದ್ಯಮಾನವು ಸಂಭವಿಸುತ್ತದೆ, ಇದು ಮಳೆ ಮತ್ತು ತೀವ್ರ ಚಳಿಗಾಲದಂತಹ ಹವಾಮಾನ ಬದಲಾವಣೆಗೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಲಾ ನಿನಾ ಏಪ್ರಿಲ್ ಮತ್ತು ಜೂನ್‌ನಲ್ಲಿ ಆರಂಭವಾಗಿ, ಅಕ್ಟೋಬರ್‌ನಿಂದ ಫೆಬ್ರವರಿ ತಿಂಗಳಲ್ಲಿ ತೀವ್ರಗೊಳ್ಳುತ್ತದೆ. ಈ ಬಾರಿ ಲಾ ನಿನಾ ಮಳೆಗಾಲದಲ್ಲಿಯೇ ತನ್ನ ಪ್ರಭಾವವನ್ನು ತೋರಿದೆ. ಅದಕ್ಕೆ ಉದಾಹರಣೆ ಎಂದರೆ ದೇಶದಲ್ಲಿ ಮಳೆಗಾಲ ಇನ್ನೂ ಮುಂದುವರಿದಿರುವುದು. ಲಾ ನಿನಾ ವಿದ್ಯಮಾನವು ಪೂರ್ವದ ಮಾರುತಗಳಿಂದ ತಳ್ಳಲ್ಪಡುತ್ತದೆ, ಇದು ಸಮುದ್ರದ ನೀರನ್ನು ಪಶ್ಚಿಮಕ್ಕೆ ತಳ್ಳುತ್ತದೆ, ಇದರಿಂದ ಸಮುದ್ರದ ಮೇಲ್ಮೈಯನ್ನು ತಂಪಾಗಿಸುತ್ತದೆ.

ನಿಧನ




ಆರ್.ಆಂಥೋಣಿ ರಾಜ್

ಮೈಸೂರು, ಸೆ. 10– ಮೈಸೂರಿನ ಹಳೇ ಕೆಸರೆ ನಿವಾಸಿ ಆರ್. ಆಂಥೋಣಿ ರಾಜ್ (62) ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನಾಳೆ ಅಥವಾ ನಾಳಿದ್ದು ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಸಬೆಲ್ಲಾ ಮೆಥಾಯ್ಸ್




ಮೈಸೂರಿನ ಸರಸ್ವತಿಪುರಂ 6ನೇ ಕ್ರಾಸ್, 8ನೇ ಮುಖ್ಯ ರಸ್ತೆ ನಿವಾಸಿ ಕಾಮಿಲ್ ಸಲ್ಡಾನಾ ಅವರ ಪತ್ನಿ ಇಸಬೆಲ್ಲಾ ಮೆಥಾಯ್ಸ್ (85) ಸೋಮವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಳವಾಡಿಯಲ್ಲಿರುವ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಸಿದ್ದಮ್ಮ

ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದ ಸಿದ್ದಮ್ಮ ಇಂದು ನಿಧನರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ತೊಂಡವಾಡಿಯಲ್ಲಿರುವ ಅವರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿರೀಶ್



ಹುಣಸೂರು, ಸೆ.10– ನಗರದ ಸ್ಟೋರ್ ಬೀದಿ ನಿವಾಸಿ, ಮೋಹನ್ ಶಾಮಿಯಾನದ ಮಾಲೀಕ ಗಿರೀಶ್ (52) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಪ್ರದೀಪ್

ಹುಣಸೂರು, ಸೆ.10– ನಗರದ ಕಲ್ಕುಣಿಕೆ ನಿವಾಸಿ, ಆಟೋ ಚಾಲಕರ ಸಂಘದ ಮಾಜಿ ಅಧ್ಯಕ್ಷ ದಿ.ನಾಗರಾಜ್ ಅವರ ಪುತ್ರ, ಛಾಯಾಗ್ರಾಹಕ ಪ್ರದೀಪ್ (38) ಮಂಗಳವಾರ ನಿಧನರಾದರು. ಮೃತರು ತಾಯಿ, ಪತ್ನಿ, ಸಹೋದರ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಕಲ್ಕುಣಿಕೆ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಉಪಗ್ರಹ ಆಧಾರಿತ ಟೋಲ್: 20 ಕಿ.ಮೀವರೆಗೆ ಶುಲ್ಕ ಇಲ್ಲ

ನವದೆಹಲಿ: ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಅನುಷ್ಠಾನಗೊಳ್ಳುವ ರಾಷ್ಟ್ರೀಯ ಹೆದ್ದಾರಿ ಹಾಗೂ ಎಕ್ಸ್‌ಪ್ರೆಸ್ ವೇನಲ್ಲಿ ಖಾಸಗಿ ವಾಹನಗಳು ಶುಲ್ಕ ಪಾವತಿಸದೆ ಪ್ರತಿದಿನ 20 ಕಿ.ಮೀ.ವರೆಗೆ ಸಂಚರಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅವಕಾಶ ಕಲ್ಪಿಸಿದೆ.



ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275 ಮತ್ತು ಹರಿಯಾಣದ ಪಾಣಿಪತ್–ಹಿಸಾರ್ ರಾಷ್ಟ್ರೀಯ ಹೆದ್ದಾರಿ 709ರಲ್ಲಿ ಟೋಲ್ ಪ್ಲಾಜಾಗಳ ಬದಲಾಗಿ ಪ್ರಾಯೋಗಿಕವಾಗಿ ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಜಾರಿಗೊಳಿಸಲು ಸಚಿವಾಲಯ ನಿರ್ಧರಿಸಿದೆ.

ಈ ಕುರಿತು ಮಂಗಳವಾರ ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ದರಗಳು ಮತ್ತು ಸಂಗ್ರಹಣೆಯ ನಿರ್ಣಯ) ನಿಯಮಗಳು 2008ಕ್ಕೆ ತಿದ್ದುಪಡಿ ತಂದಿದೆ. ಇದರಿಂದ ಹೆದ್ದಾರಿ ಬದಿಯ ಗ್ರಾಮಗಳ ವಾಹನ ಚಾಲಕರಿಗೆ ಅನುಕೂಲವಾಗಲಿದೆ. ಹೊಸ ನಿಯಮಾವಳಿ ಪ್ರಕಾರ, ಖಾಸಗಿ ವಾಹನ ಚಾಲಕರು ರಾಷ್ಟ್ರೀಯ ಹೆದ್ದಾರಿ, ಬೈಪಾಸ್ ಅಥವಾ ಸುರಂಗ ಮಾರ್ಗದಲ್ಲಿ ನಿಗದಿಪಡಿಸಿರುವ ದೂರದವರೆಗೆ ಉಚಿತವಾಗಿ ಸಂಚರಿಸಬಹುದಾಗಿದೆ.

ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಜಿಎನ್‌ಎಸ್‌ಎಸ್–ಇಟಿಸಿ ವ್ಯವಸ್ಥೆಯು ಅನುಷ್ಠಾನಗೊಳ್ಳಲಿದೆ. ಕೆಲವು ದಿನಗಳವರೆಗೆ ಹಾಲಿ ಇರುವ ಆರ್‌ಎಫ್‌ಐಡಿ–ಇಟಿಸಿ (ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಮತ್ತು ಹೊಸ ವ್ಯವಸ್ಥೆ ಎರಡೂ ಜಾರಿಯಲ್ಲಿ ಇರುತ್ತವೆ. ಬಳಿಕ ದೇಶದ ಆಯ್ದ ಹೆದ್ದಾರಿಗಳಲ್ಲಿ ಹಂತ ಹಂತವಾಗಿ ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ (ಇಟಿಸಿ) ಅನುಷ್ಠಾನಗೊಳಿಸುವುದಾಗಿ ತಿಳಿಸಿದೆ. ಜಿಎನ್‌ಎಸ್‌ಎಸ್ ಸಕ್ರಿಯಗೊಳಿಸಿದ ಆನ್ ಬೋರ್ಡ್ ಯೂನಿಟ್‌ಗಳನ್ನು (ಒಬಿಯು) ಹೊಂದಿದ ವಾಹನಗಳಿಗೆ ಅವು ಹೆದ್ದಾರಿಯಲ್ಲಿ ಪ್ರಯಾಣಿಸುವ ದೂರ ಆಧರಿಸಿ ಶುಲ್ಕ ವಿಧಿಸಲಾಗುತ್ತದೆ. ಮೊದಲ 20 ಕಿ.ಮೀ.ವರೆಗೆ ಯಾವುದೇ ಶುಲ್ಕ ಇರುವುದಿಲ್ಲ

ವಾಹನಕ್ಕೆ ಒಬಿಯು ಅಳವಡಿಸಿಕೊಂಡರೆ ಹೆದ್ದಾರಿಯಲ್ಲಿನ ಸಂಚಾರದ ಬಗ್ಗೆ ಟ್ರ್ಯಾಕ್ ಮಾಡಿ ಉಪಗ್ರಹಕ್ಕೆ ಮಾಹಿತಿ ರವಾನಿಸಲಿದೆ. ನೀವು ಎಷ್ಟು ದೂರ ಸಂಚರಿಸಿದ್ದೀರಿ ಎಂಬುದನ್ನು ಜಿಎನ್ ಎಸ್‌ಎಸ್ ಲೆಕ್ಕ ಹಾಕಲಿದೆ. ಆದರೆ, ಜಿಎನ್‌ಎಸ್‌ಎಸ್ ಸಕ್ರಿಯಗೊಳಿಸಿದ ಆನ್ ಬೋರ್ಡ್ ಯೂನಿಟ್‌ಗಳನ್ನು ಹೊಂದಿಲ್ಲದಿರುವ ವಾಹನಗಳ ಚಾಲಕರು ಟೋಲ್ ಪ್ಲಾಜಾದಲ್ಲಿ ನೇರವಾಗಿ ಅಥವಾ ಆರ್‌ಎಫ್‌ಐಡಿ–ಇಟಿಸಿ ಮೂಲಕ ಶುಲ್ಕ ಪಾವತಿಸಬೇಕಾಗುತ್ತದೆ.

ರಾಜ್ಯದಲ್ಲಿ ಸಿಎಂ ಖುರ್ಚಿಗಾಗಿ ಕಿತ್ತಾಟ

ರಾಹುಲ್ ಗಾಂಧಿಗೆ ಪತ್ರ ಬರೆದ ಹಿರಿಯ 'ಕೈ' ನಾಯಕರು



ಬೆಂಗಳೂರು, ಸೆ.10– ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್‌ನ ಕೆಲ ಸಚಿವರು ಸಿಎಂ ಸ್ಥಾನದ ಆಕಾಂಕ್ಷೆ ಹೇಳಿಕೆ ನೀಡುತ್ತಿದ್ದಾರೆ. ಈ ಹಿನ್ನೆಲೆ ಸಚಿವರಿಗೆ ಕಡಿವಾಣ ಹಾಕುವಂತೆ 15ಕ್ಕೂ ಹೆಚ್ಚು ಕಾಂಗ್ರೆಸ್‌ನ ನಾಯಕರು ಸಂಸದ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

'ನಾವು ಹೋರಾಡಬೇಕಾಗಿರುವುದು ಬಿಜೆಪಿ–ಜೆಡಿಎಸ್ ವಿರುದ್ಧ, ಆದರೆ ಬಿಜೆಪಿ–ಜೆಡಿಎಸ್ ವಿರುದ್ಧ ಹೋರಾಡುವುದನ್ನು ಮರೆತಿದ್ದಾರೆ. ಅದರ ಬದಲು ಸಚಿವರಿಂದ ಸಿಎಂ ಸ್ಥಾನದ ಕುರಿತು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಇದರಿಂದ ಕಾರ್ಯಕರ್ತರು, ಜನರಿಗೆ ನಮ್ಮ ಕಾಂಗ್ರೆಸ್ ಸರ್ಕಾರದ ಮೇಲೆ ನಂಬಿಕೆ ಹೋಗುತ್ತಿದೆ. ಕೂಡಲೇ ಸಚಿವರಿಗೆ ಸೂಚಿಸಿ ಗೊಂದಲಕಾರಿ ಹೇಳಿಕೆಗೆ ಕಡಿವಾಣ ಹಾಕಿ ಎಂದು ರಾಹುಲ್ ಗಾಂಧಿಗೆ ಬಿ.ಎಲ್. ಶಂಕರ್, ವಿ.ಎಸ್.ಉಗ್ರಪ್ಪ, ಬಿ.ಎನ್. ಚಂದ್ರಪ್ಪ, ಎಲ್.ಹನುಮಂತಯ್ಯ, ರಾಣಿ ಸತೀಶ್, ವಿ.ಆರ್.ಸುದರ್ಶನ್, ಹೆಚ್.ಎಂ. ರೇವಣ್ಣ, ಹೆಚ್.ಡಿ. ಅಮರನಾಥ್, ಸಿ.ಎಸ್. ದ್ವಾರಕನಾಥ್, ಪಿ.ಆರ್. ರಮೇಶ್ ಸೇರಿದಂತೆ ಪ್ರಮುಖ ನಾಯಕರೇ ರಾಹುಲ್ ಅವರಿಗೆ ಪತ್ರ ಬರೆದಿದ್ದಾರೆ.

ಇನ್ನು ಈ ಕುರಿತು ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಂಜುನಾಥ್ ಭಂಡಾರಿ ಸೇರಿ ಸಿಎಂ ಕುರ್ಚಿ ಬಗ್ಗೆ ಬಹಿರಂಗವಾಗಿ ಹೇಳಿಕೆ ನೀಡುವುದನ್ನು ನಿಲ್ಲಿಸುವಂತೆ ನಿರ್ದೇಶನ ನೀಡಿ ಎಂದು ಖರ್ಗೆ ಅವರಿಗೆ ಪತ್ರ ಬರೆದಿದ್ದರು. ಪಕ್ಷದ ನಿಯಮ ಉಲ್ಲಂಘಿಸಿ ಬಹಿರಂಗವಾಗಿಯೇ ಸಚಿವರು ಸಿಎಂ ಸ್ಥಾನದ ಆಕಾಂಕ್ಷೆ ಹೇಳಿಕೆ ನೀಡುತ್ತಿದ್ದಾರೆ. ಸಚಿವರ ಲಗಾಮಿಲ್ಲದ ಹೇಳಿಕೆಗಳಿಂದ ಪಕ್ಷಕ್ಕೆ ಡ್ಯಾಮೇಜ್ ಆಗುತ್ತಿದೆ. ಅಷ್ಟೇ ಅಲ್ಲದೆ ಈ ಹೇಳಿಕೆಗಳಿಂದ ಸರ್ಕಾರ ಅಭದ್ರವಾಗುವ ಸಾಧ್ಯತೆ ಇದೆ ಎಂದು ಪತ್ರದ ಮೂಲಕ ತಿಳಿಸಿದ್ದರು.

ಇಂದು ಸುಗಮ ಸಂಗೀತ ತರಬೇತಿ ಕಾರ್ಯಕ್ರಮ


ಮೈಸೂರು, ಸೆ.10– ನಕ್ಷತ್ರ ಅಕಾಡೆಮಿ ಆಫ್ ಆರ್ಟ್ಸ್ ಮಲ್ಟಿ ಟ್ಯಾಲೆಂಟ್ ಕ್ರಿಯೇಟರ್ಸ್ ವತಿಯಿಂದ ಸುಗಮ ಸಂಗೀತ ತರಬೇತಿ ಕಾರ್ಯಕ್ರಮ ಉದ್ಘಾಟನೆ ಹಾಗೂ ಕಲಾವಿದರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಸೆ. 11 ರಂದು ಬೆಳಗ್ಗೆ 10.30ಕ್ಕೆ ಕುವೆಂಪುನಗರ ಒಂದನೇ ಹಂತದ ಸರಸ್ವತಿ ರಸ್ತೆಯ ನಕ್ಷತ್ರ ಸಭಾಂಗಣದಲ್ಲಿ ಏರ್ಪಡಿಸಿದೆ. ರಾಗ ಕ್ರಿಯೇಷನ್ಸ್ ಅಧ್ಯಕ್ಷ ಆನಂದಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸುವರು. ಸ್ತ್ರೀರೋಗ ತಜ್ಞೆ ಡಾ. ರೇಖಾ ಅರುಣ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮುಖ್ಯ ಅತಿಥಿಗಳಾಗಿರುವರು. ಮನೋಶಾಸ್ತ್ರಜ್ಞೆ ಡಾ. ರೇಖಾ ಮನಶಾಂತಿ, ಕೆಪಿಎ ಡಿವೈಎಸ್ಪಿ ಕುಮಾರ, ಜಯದೇವ ಆಸ್ಪತ್ರೆ ವೈದ್ಯ ಡಾ.ಕೆ.ಆರ್. ಮಂಜುನಾಥ್, ಖ್ಯಾತ ಗಾಯಕ ಅಮ್ಮರಾಮಚಂದ್ರ ವಿಶೇಷ ಆಹ್ವಾನಿತರಾಗಿರುವರು.

ನಿವಾಸಿಗಳ ಸಮಸ್ಯೆ ವಾರದಲ್ಲಿ ನಿವಾರಣೆಗೆ ಶಾಸಕ ಶ್ರೀವತ್ಸ ಪಾಲಿಕೆ ಅಧಿಕಾರಿಗಳಿಗೆ ತಾಕೀತು

62ನೇ ವಾರ್ಡ್ ವ್ಯಾಪ್ತಿಯಲ್ಲಿ ಪಾದಯಾತ್ರೆ ಮೂಲಕ ಅಹವಾಲು ಸ್ವೀಕಾರ

ಮೈಸೂರು, ಸೆ.10– ಮೈಸೂರು ನಗರ ಪಾಲಿಕೆ 62ನೇ ವಾರ್ಡ್ ವ್ಯಾಪ್ತಿಯ ವಿದ್ಯಾರಣ್ಯಪುರಂ, ಜೆಪಿ ನಗರವೂ ಸೇರಿದಂತೆ ಇದಕ್ಕೆ ಹೊಂದಿಕೊಂಡ ಬಡಾವಣೆಯ ಖಾಲಿ ನಿವೇಶನಗಳಲ್ಲಿ ಗಿಡ–ಗಂಟಿಗಳು ಬೆಳೆದು ಕ್ರಿಮಿ–ಕೀಟಗಳ ಆವಾಸ ಸ್ಥಾನವಾಗಿದೆ. ಪ್ಲಾಸ್ಟಿಕ್ ಕವರ್‌ಗಳಲ್ಲಿ ಮನೆ ಕಸವನ್ನು ಹಾಕುವುದಕ್ಕೆ ಕಡಿವಾಣ ಹಾಕಿ... ಈ ವ್ಯಾಪ್ತಿಯ ಪಾರ್ಕ್‌ಗಳ ಅಭಿವೃದ್ಧಿಪಡಿಸುವಂತೆ ನಿವಾಸಿಗಳು, ಪಾದಯಾತ್ರೆ ವೇಳೆ ಶಾಸಕ ಟಿ.ಎಸ್.ಶ್ರೀವತ್ಸಗೆ ಮನವಿ ಮಾಡಿದರು.

ಈ ಸಮಸ್ಯೆಗೆ ವಾರದೊಳಗೆ ಮುಕ್ತಿ ನೀಡುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ತಾಕೀತು ಮಾಡಿದ್ದಾರೆ. ವಾರ್ಡ್ ನಂ.62ರ ವ್ಯಾಪ್ತಿಯಲ್ಲಿರುವ ಮೂರು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಬೇಕು. ಸಾರ್ವಜನಿಕರು ವಿಹರಿಸಲು ಅನುಕೂಲವಾಗುವಂತೆ ಇಂಟರ್‌ಲಾಕಿಂಗ್ ವ್ಯವಸ್ಥೆ, ಮಕ್ಕಳಿಗೆ ಮನರಂಜನಾ ಸಾಮಗ್ರಿಗಳ ಅಳವಡಿಕೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.



ಮೈಸೂರುನಗರ ಪಾಲಿಕೆ 62ನೇ ವಾರ್ಡ್ ವ್ಯಾಪ್ತಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿ, ಅಹವಾಲು ಸ್ವೀಕಾರ ಮಾಡಿದರು.

ಅಲ್ಲದೆ, ಈ ಮೂರು ಉದ್ಯಾನವನ ಜಾಗವನ್ನು ಒತ್ತುವರಿ ಮಾಡಲಾಗಿದೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿದೆ. ಕೂಡಲೇ ಈ ಜಾಗದ ದಾಖಲೆಗಳನ್ನು ಪರಿಶೀಲಿಸಿ, ಉದ್ಯಾನವನದ ಜಾಗ ರಕ್ಷಿಸುವಂತೆ ದೂರವಾಣಿ ಮೂಲಕ ಮುಡಾ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಈ ವಾರ್ಡ್‌ನ 17ನೇ ಮುಖ್ಯ ರಸ್ತೆಯ ಯುಜಿಡಿ ಲೈನ್ ಸಂಪೂರ್ಣ ಹಾಳಾಗಿದೆ. ಮಳೆ ಬಂದಾಗ ಈ ಮಾರ್ಗದ ಮ್ಯಾನ್ ಹೋಲ್‌ಗಳಲ್ಲಿ ಯುಜಿಡಿ ನೀರಿಗೆ, ಮಳೆ ನೀರು ಮಿಶ್ರಣಗೊಂಡು ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ ಈ ರಸ್ತೆಯಲ್ಲಿ 2–3 ದಿನ ಓಡಾಡಲು ಸಾಧ್ಯವಾಗುವುದಿಲ್ಲ ಎಂದು ನಿವಾಸಿಗಳು ಶಾಸಕರ ಬಳಿ ತಮ್ಮ ಅಳಲು ತೋಡಿಕೊಂಡರು.

ಸ್ಥಳದಲ್ಲಿದ್ದ ಪಾಲಿಕೆ ಇಂಜಿನಿಯರ್ ಮಧ್ಯ ಪ್ರವೇಶಿಸಿ, ಈ ಮಾರ್ಗದ ಯುಜಿಡಿ ಪೈಪ್‌ಲೈನ್ ಬದಲಿಸಲು ಸರ್ಕಾರದಿಂದ 60 ಲಕ್ಷ ರೂ. ಕ್ರಿಯಾ ಯೋಜನೆ ರೂಪಿಸಲಾಗಿದೆ. ನೀವು (ಟಿ.ಎಸ್. ಶ್ರೀವತ್ಸ) ಅನುಮತಿಕೊಟ್ಟರೆ ತಕ್ಷಣ ಕಾಮಗಾರಿ ಆರಂಭಿಸಲಾಗುವುದು. ಇದಕ್ಕೆ ಶಾಸಕರು, ಕೆಡಿಪಿ ಸಭೆಯಲ್ಲಿ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿ ಅನುಮತಿ ನೀಡಲಾಗುವುದು ಎಂದು ನಿವಾಸಿಗಳಿಗೆ ಭರವಸೆ ನೀಡಿದರು.

ಈ ವೇಳೆ ಮೈಸೂರು ನಗರಪಾಲಿಕೆ ಮಾಜಿ ಸದಸ್ಯೆ ಶಾಂತಮ್ಮ, ಮುಖಂಡರಾದ ಎಂ.ವಡಿವೇಲು, ದೇವರಾಜೇಗೌಡ ಮತ್ತಿತರರು ಹಾಜರಿದ್ದರು. 62ನೇ ವಾರ್ಡಿನ ಜೆ.ಪಿ.ನಗರದ ವಿವಿಧ ಬಡಾವಣೆಗಳಲ್ಲಿ ಮಂಗಳವಾರ ಶಾಸಕ ಟಿ.ಎಸ್. ಶ್ರೀವತ್ಸ ಅವರು ಪಾದಯಾತ್ರೆ ನಡೆಸಿ ಸಾರ್ವಜನಿಕರ ಮನವಿಗಳನ್ನು ಆಲಿಸಿದರು.

ಮನೆಗೆ ಹಕ್ಕುಪತ್ರ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಚಾಮುಂಡಿಬೆಟ್ಟದ ಪೌರಕಾರ್ಮಿಕರು ಪ್ರತಿಭಟನೆ



ವಿವಿಧ ಬೇಡಿಕೆಗಳ ಈಡೇರಿಕೆಗೆ ಚಾಮುಂಡಿಬೆಟ್ಟದ ಪೌರಕಾರ್ಮಿಕರು ಮೈಸೂರು ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ.10(ಎಸ್‌ಪಿಎನ್)– ಚಾಮುಂಡಿಬೆಟ್ಟದಲ್ಲಿ ವಾಸ ನೆಲೆಸಿರುವ ಪೌರಕಾರ್ಮಿಕರು ತಮ್ಮ ಮನೆಗಳಿಗೆ ಹಕ್ಕುಪತ್ರ, ಸ್ಮಶಾನಕ್ಕೆ ದಾರಿ ಹಾಗೂ ಸಮುದಾಯ ಭವನ ಕಲ್ಪಿಸುವಂತೆ ಒತ್ತಾಯಿಸಿ ಮೈಸೂರು ತಾಲೂಕು ಕಚೇರಿ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಪೌರಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ನೇತೃತ್ವದಲ್ಲಿ ಜಿಲ್ಲಾಡಳಿತದ ವಿರುದ್ಧ ಧಿಕ್ಕಾರ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಚಾಮುಂಡಿ ದೇವಸ್ಥಾನ, ಚಾಮುಂಡಿ ಬೆಟ್ಟದ ಗ್ರಾಪಂ ಸೇರಿದಂತೆ ಇತರೆಡೆ ಕಾರ್ಯ ನಿರ್ವಹಿಸುತ್ತಿರುವ 70ಕ್ಕೂ ಹೆಚ್ಚು ಪೌರಕಾರ್ಮಿಕರು, ಹಲವು ವರ್ಷಗಳಿಂದ ಚಾಮುಂಡಿಬೆಟ್ಟದಲ್ಲಿ ವಾಸವಾಗಿದ್ದಾರೆ. ತಾವು ವಾಸವಿರುವ ಮನೆಗಳ ಹಕ್ಕುಪತ್ರ ವನ್ನು ಜಿಲ್ಲಾಡಳಿತ ಇಲ್ಲಿಯವರೆಗೂ ನೀಡಿಲ್ಲ.

ಈಗಾಗಲೇ ಪೌರಕಾರ್ಮಿಕರ ಸ್ಮಶಾನ ಅಭಿವೃದ್ಧಿಗೆ ಶಾಸಕ ಜಿ.ಟಿ.ದೇವೇಗೌಡರು ತಮ್ಮ ಶಾಸಕರ ಅನುದಾನದಲ್ಲಿ 50 ಲಕ್ಷ ಬಿಡುಗಡೆಗೆ ಶಿಫಾರಸ್ಸು ಮಾಡಿದ್ದಾರೆ. ಈ ಸ್ಮಶಾನಕ್ಕೆ ಹೋಗಲು ದಾರಿ ಕಲ್ಪಿಸಬೇಕಾಗಿದೆ. ಇದಕ್ಕೆ ಖಾಸಗಿ ಟ್ರಸ್ಟ್‌ನ ಪದಾಧಿಕಾರಿಗಳು ಅಡ್ಡಿಪಡಿಸುತ್ತಿದ್ದು, ಈ ಸಮಸ್ಯೆ ಬಗೆಹರಿಸುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು. ಈ ವೇಳೆ ಪೌರಕಾರ್ಮಿಕ ಮುಖಂಡರಾದ ಎನ್.ಮಾರ, ಶ್ರೀನಿವಾಸ್, ಸಿ.ಆರ್. ವಿಜಯ್, ಸಣ್ಣ ಬೋರಯ್ಯ, ಮಂಚಯ್ಯ, ಕುಮಾರಸ್ವಾಮಿ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.

ಜಿಮ್ ತರಬೇತುದಾರನ ಮೇಲೆ ಹಲ್ಲೆ ಆರೋಪ: ನಟ ಧ್ರುವ ಸರ್ಜಾ ಮ್ಯಾನೇಜರ್ ಬಂಧನ

ಬೆಂಗಳೂರು: ಜಿಮ್ ತರಬೇತುದಾರ ಪ್ರಶಾಂತ್ ಪೂಜಾರಿ ಮೇಲಿನ ಹಲ್ಲೆ ಪ್ರಕರಣದಲ್ಲಿ ನಟ ಧ್ರುವಸರ್ಜಾ ಮ್ಯಾನೇಜರ್ ಅಶ್ವಿನ್ ಸೇರಿ ನಾಲ್ವರನ್ನು ಬಂಧಿಸಲಾಗಿದೆ.

ನಟ ಧ್ರುವ ಸರ್ಜಾಗೆ ಆಪ್ತರಾಗಬೇಕು ಎಂಬ ಉದ್ದೇಶದಿಂದ ವೈಯಕ್ತಿಕ ಕಾರಣಕ್ಕೆ ಪ್ರಶಾಂತ ಪೂಜಾರಿ ಮೇಲೆ ಹಲ್ಲೆ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ಮ್ಯಾನೇಜರ್ ಅಶ್ವಿನ್, ಚಾಲಕ ನಾಗೇಂದ್ರ, ಹರ್ಷ ಮತ್ತು ಸುಬ್ಬು ಅವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು. ಪ್ರಶಾಂತ್ ಪೂಜಾರಿ ಅವರು ಧ್ರುವ ಸರ್ಜಾಗೆ ಆಪ್ತರಾಗಿದ್ದರು. ಇಬ್ಬರ ನಡುವಿನ ಆಪ್ತತೆಯನ್ನು ನಾಗೇಂದ್ರ ಹಾಗೂ ಅಶ್ವಿನ್‌ಗೆ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ ಮೇ 26ರ ರಾತ್ರಿ ಬೈಕ್‌ನಲ್ಲಿ ಬಂದ ಹರ್ಷ ಮತ್ತು ಸುಭಾಷ್, ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದ ಪ್ರಶಾಂತ್ ಮೇಲೆ ಬೇಸ್‌ಬಾಲ್ ಬ್ಯಾಟ್, ಮಚ್ಚಿನಿಂದ ಹಲ್ಲೆ ಮಾಡಿದ್ದರು.

ಬಿಜೆಪಿ ಆಡಳಿತ ಅವಧಿಯ ವಿವಿಧ ಹಗರಣಗಳ ತನಿಖೆ ಪ್ರಗತಿ ಪರಿಶೀಲನೆಗೆ ಸಮಿತಿ ರಚನೆ

ಡಾ. ಪರಮೇಶ್ವರ್ ನೇತೃತ್ವದ ನಾಲ್ವರು ಸಚಿವರ ಒಳಗೊಂಡ ಸಮಿತಿ ರಚಿಸಿ ಸಿಎಂ ಆದೇಶ

ಬೆಂಗಳೂರು, ಸೆ.10–ಸರ್ಕಾರದ ಮತ್ತು ತನಿಖಾ ಸಂಸ್ಥೆಗಳ ಹಂತದಲ್ಲಿ ಚಾಲ್ತಿಯಲ್ಲಿರುವ ವಿವಿಧ ಹಗರಣಗಳ ತನಿಖೆಗಳ ಪ್ರಗತಿ, ಸಮನ್ವಯ ಮುಂತಾದ ಕಾರ್ಯಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಗೃಹ ಸಚಿವ ಡಾ. ಜಿ.ಪರಮೇಶ್ವರ್ ನೇತೃತ್ವದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ್, ಕಂದಾಯ ಸಚಿವ ಕೃಷ್ಣಬೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಒಳಗೊಂಡ ಸಮಿತಿ ನೇಮಕ ಮಾಡಿದ್ದಾರೆ. ಸದರಿ ಸಮಿತಿಯು ಮುಂದಿನ ಎರಡು ತಿಂಗಳಲ್ಲಿ ತನಗೆ ವಹಿಸಿರುವ ಜವಾಬ್ದಾರಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.



ಡಾ. ಪರಮೇಶ್ವರ್

ಹಗರಣಗಳ ತನಿಖೆ: ಬಿಜೆಪಿ ಆಡಳಿತ ಅವಧಿಯ ಹಗರಣಗಳ ಸಂಬಂಧ ನನ್ನ ಅಧ್ಯಕ್ಷತೆಯಲ್ಲಿ ಸಿಎಂ ಸಮಿತಿ ರಚಿಸಿದ್ದಾರೆ. ಈಗಾಗಲೇ 26 ಪ್ರಕರಣಗಳ ಪಟ್ಟಿ ಮಾಡಿ, ಮಾಹಿತಿ ಸಂಗ್ರಹಿಸಲಾಗಿದೆ. ಆದಷ್ಟು ಬೇಗ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿಯವರ ವಿಚಾರದಲ್ಲಿ ನಾವು ಸಾಫ್ಟ್‌ಕಾರ್ನರ್ ತೋರಿಲ್ಲ. ಎಲ್ಲಾ ಹಗರಣಗಳ ಸಂಬಂಧ ತನಿಖೆ ನಡೆಯುತ್ತಿದೆ. ಸಂಪೂರ್ಣ ವರದಿ ಬಂದ ಬಳಿಕ ಕ್ರಮ ಕೈಗೊಳ್ಳುತ್ತೇವೆ. ದ್ವೇಷದ ರಾಜಕಾರಣ ಮಾಡಬಾರದು ಎಂಬುದು ನಮ್ಮ ಉದ್ದೇಶ. ಬಿಜೆಪಿಯವರು ದ್ವೇಷದ ರಾಜಕಾರಣ ಮುಂದುವರಿಸಿದರೆ, ನಾವು ಅದನ್ನೇ ಮಾಡಬೇಕಾಗುತ್ತದೆ ಎಂದು ಸಚಿವ ಡಾ. ಪರಮೇಶ್ವರ್ ಹೇಳಿದರು. ವಾಲ್ಮೀಕಿ ನಿಗಮ ಹಗರಣ ಪ್ರಕರಣದಲ್ಲಿ ಇಡಿ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಮಾಜಿ ಸಚಿವ ನಾಗೇಂದ್ರ ಅವರ ಹೆಸರು ಇರುವುದು ಗೊತ್ತಿಲ್ಲ. ಇ.ಡಿ.ಯಿಂದ ನಮ್ಮ ಇಲಾಖೆಗೆ ವರದಿ ಬಂದಿಲ್ಲ ಎಂದರು.

ಭಾರತೀಯ ಪರಂಪರೆ ಉಳಿವಿಗೆ ಕರಕುಶಲ ಕಲೆ ಅನಿವಾರ್ಯ

ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ ಅಭಿಮತ

ಮೈಸೂರು, ಸೆ.10(ಎಸ್‌ಪಿಎನ್)– ಭಾರತೀಯ ಪರಂಪರೆ ಉಳಿವಿಗೆ ಇಂದಿನ ಯುವ ಸಮೂಹ ಕರಕುಶಲ ಕಲೆಗಳ ಕಲಿಕೆಗೆ ಮುಂದಾಗಬೇಕು ಎಂದು ಮೈಸೂರು ಜಿಲ್ಲಾ ಕೈಗಾರಿಕೆ ಕೇಂದ್ರ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ ಸಲಹೆ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಉತ್ಪಾದಕರ ಸಂಘದ ವತಿಯಿಂದ ಆಯೋಜಿಸಿದ್ದ ವುಡ್‌ಇನ್ಲೆ ಕರಕುಶಲ ತರಬೇತಿಯ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಕಳೆದ 9 ತಿಂಗಳಿಂದ ವುಡ್‌ಇನ್ಲೆ ಕರಕುಶಲ ತರಬೇತಿಯನ್ನು 29 ಮಹಿಳೆಯರು ಪಡೆದುಕೊಂಡಿದ್ದಾರೆ. ಇಂತಹ ಕಲೆಗಳ ಪ್ರೋತ್ಸಾಹಕ್ಕಾಗಿ ಕೇಂದ್ರ ಸರ್ಕಾರ ವಿಶ್ವಕರ್ಮ ಯೋಜನೆ ಜಾರಿಗೆ ತಂದಿದೆ. ಇದರಲ್ಲಿ ಸಿಗುವ ಆರ್ಥಿಕ ಸವಲತ್ತುಗಳನ್ನು ಪಡೆದುಕೊಂಡು ಯುವಕ–ಯುವತಿಯರು ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.



ವುಡ್‌ಇನ್ಲೆ ಕರಕುಶಲ ಕಲಿಕೆಗೆ ತರಬೇತಿ ಪಡೆದ 25 ಮಂದಿ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.


ಮೈಸೂರು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ನಾರಾಯಣಮೂರ್ತಿ ಮಾತನಾಡಿ, ವುಡ್‌ಇನ್ಲೆ ಕರಕುಶಲ ಕಲೆ ಒಳ್ಳೆಯ ಕಲೆ. ಈ ಕಲೆ ಕಲಿಯುವ ಆಸಕ್ತ 25 ಮಂದಿ ಮಹಿಳೆಯರಿಗೆ 9 ತಿಂಗಳು ತರಬೇತಿ ನೀಡಿ ಪ್ರಮಾಣ ಪತ್ರ ವಿತರಣೆ ಮಾಡಲಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರ ಸಹಯೋಗದೊಂದಿಗೆ 150ಕ್ಕೂ ವಿವಿಧ ವಿಷಯಗಳ ಕೌಶಲಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

25 ಮಂದಿಗೆ ಪ್ರಮಾಣ ಪತ್ರ ವಿತರಣೆ: 9 ತಿಂಗಳ ತರಬೇತಿ ಪಡೆದು ಪ್ರಮಾಣ ಪತ್ರ ಪಡೆದ ಆರ್.ರವಿ, ಶಬ್ರೀನ್ ತಾಜ್, ವೈ.ಎಂ.ಸುವರ್ಣ, ಎಂ.ಕೆ.ಮೋನಿಷ. ಎಚ್.ಎಸ್.ಮೀನಾಕ್ಷಿ, ಎಸ್.ಲಾವಣ್ಯ, ನಯೀಮ ಬೇಗಂ, ರೂಪ, ಕೆ.ಮಮತ, ಎ.ದಿವ್ಯ, ಎಚ್.ಎನ್.ಮಮತ, ಡಿ.ಭವ್ಯ, ಎಸ್.ಸುಧಾ, ಕೆ.ಜಿ.ರಂಜಿತ, ಕಾವ್ಯ, ಸಿ.ದಿಕ್ಷಿತ, ಎಚ್.ಎಂ.ಅನುಷಾ, ಟಿ.ಎಲ್.ಶ್ವೇತ, ಎ. ಫಾತಿಮಾ ಬೇಗಂ, ಎಸ್.ಮೋನಿಕ, ಎಸ್.ದಿವ್ಯ, ಹಿನ, ಶೀಲ, ಗೀತ, ಸಂಗೀತ ಸೇರಿದಂತೆ ಒಟ್ಟು 25 ಮಂದಿಗೆ ಪ್ರಮಾಣ ಪತ್ರ ನೀಡಲಾಯಿತು.

ವೇದಿಕೆಯಲ್ಲಿ ಕರ್ನಾಟಕ ರಾಜ್ಯ ಆರ್ಟ್ಸ್ ಅಂಡ್ ಕ್ರಾಫ್ಟ್ ಕಾವೇರಿ ಎಂಪೋರಿಯಂ ವ್ಯವಸ್ಥಾಪಕ ನಾಗೇಂದ್ರಪ್ಪ ಡಿಸಿಎಚ್‌ನ ನಿವೃತ್ತ ಉಪನಿರ್ದೇಶಕ ಎಸ್.ಸಿ.ದೇವರಮಣಿ, ಸಂಪನ್ಮೂಲ ವ್ಯಕ್ತಿಗಳಾದ ವಿ. ಗೌರಯ್ಯ, ಸುನಿತ, ಅಮೀರ್‌ಖಾನ್, ಅಶ್ವಥ್ ನಾರಾಯಣ್, ಕರ್ನಾಟಕ ರಾಜ್ಯ ಕರಕುಶಲ ವಸ್ತುಗಳ ಉತ್ಪಾದಕರ ಸಂಘದ ಅಧ್ಯಕ್ಷ ಎಸ್.ರಾಮು, ಪರಶುರಾಮಪ್ಪ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಪ್ರಜಾಪ್ರಭುತ್ವ ದಿನಾಚರಣೆ ಯಶಸ್ವಿಗೆ ಕೈಜೋಡಿಸಿ

ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮನವಿ

ಮಡಿಕೇರಿ, ಸೆ.10– ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸೆ.15ರಂದು ಹಮ್ಮಿಕೊಂಡಿದ್ದು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಸೇರಿದಂತೆ ಎಲ್ಲರೂ ಕಾರ್ಯಕ್ರಮದ ಯಶಸ್ವಿಗೆ ಕೈಜೋಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮನವಿ ಮಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಬೀದರ್‌ನಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ನಿರ್ಮಿಸುವ ಮೂಲಕ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಹಂತದಲ್ಲಿ ಅಗತ್ಯ ಸಹಕಾರ ಕೋರಲಾಗಿದೆ ಎಂದರು.

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಸಂಪಾಜೆಯಿಂದ ಶಿರಂಗಾಲದ ಕಡುವಿನ ಹೊಸಹಳ್ಳಿ ಗಡಿಭಾಗದವರೆಗೆ ಮಾನವ ಸರಪಳಿ ನಡೆಸಲು ಉದ್ದೇಶಿಸಲಾಗಿದ್ದು, ಕೊಡಗು ಅರಣ್ಯ ಪ್ರದೇಶ ಹೊಂದಿರುವುದರಿಂದ ಕೆಲವು ವಿನಾಯಿತಿಯನ್ನು ನೀಡಲಾಗಿದೆ. ಪ್ರಜಾಪ್ರಭುತ್ವ ದಿನವನ್ನು ರಾಷ್ಟ್ರೀಯ ಹಬ್ಬ ಮಾದರಿಯಲ್ಲಿ ಯಶಸ್ಸುಗೊಳಿಸಬೇಕಿದೆ. ಸದ್ಯ ಆಯಾ ಗ್ರಾಮ, ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಮಾನವ ಸರಪಳಿ ಅಥವಾ ರಿಲೇ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ಮಾತನಾಡಿ, ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಕೊಡಗು ಜಿಲ್ಲೆಯಲ್ಲಿ 10 ಲಕ್ಷ ಗಿಡ ನೆಡಲು ಉದ್ದೇಶಿಸಲಾಗಿದೆ ಎಂದರು.

ಪ್ರಮುಖರಾದ ಕೆ.ಟಿ.ಬೇಬಿಮ್ಯಾಥ್ಯೂ, ರೇವತಿ ರಮೇಶ್, ಮುನೀರ್ ಅಹ್ಮದ್, ಎಚ್.ಎಲ್. ದಿವಾಕರ, ವೀರಭದ್ರಯ್ಯ, ಜಗದೀಶ್ ಮಾತನಾಡಿದರು. ಜಿಲ್ಲಾ ಶಿಕ್ಷಣಾಧಿಕಾರಿ ಎಂ.ಮಹದೇವಸ್ವಾಮಿ, ಪ್ರಮುಖರಾದ ಚಂದ್ರಪ್ರಸಾದ್, ಪ್ರಾಂಶುಪಾಲ ವಿಜಯ್, ಅಧಿಕಾರಿಗಳಾದ ಹೊನ್ನೇಗೌಡ, ಪ್ರವೀಣ್ ಕುಮಾರ್, ಕವಿತಾ, ಶಿವಶಂಕರ, ಬಾಲಕೃಷ್ಣ ರೈ ಇತರರು ಇದ್ದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿದರು.

ನಸ್ರೀನ್ ಆಸಿಫ್‌ಗೆ ಅತ್ಯುತ್ತಮ ಸಮುದಾಯ ಶಿಕ್ಷಕಿ ಪ್ರಶಸ್ತಿ ಪ್ರದಾನ



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸ್ಪೀಕರ್ ಯು.ಟಿ.ಖಾದರ್ ವಿ.ಎಸ್.ನಸ್ರೀನ್ ಆಸಿಫ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮಡಿಕೇರಿ, ಸೆ.10–ಬೆಂಗಳೂರಿನ ಗ್ಲೋಬಲ್ ಜ್ಞಾನ ಅಕಾಡೆಮಿಯ 5ನೇ ಜಾಗತಿಕ ಅತ್ಯುತ್ತಮ ಸಮುದಾಯ ಶಿಕ್ಷಕಿ ಪ್ರಶಸ್ತಿಗೆ ಮಡಿಕೇರಿಯ ವಿ.ಎಸ್.ನಸ್ರೀನ್ ಆಸಿಫ್ ಭಾಜನರಾಗಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಸ್ಪೀಕರ್ ಯು.ಟಿ.ಖಾದರ್ ವಿ.ಎಸ್.ನಸ್ರೀನ್ ಆಸಿಫ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮ್ಮದ್, ಉಪಕುಲಪತಿ ಪ್ರೊ.ಸುಬ್ರಹ್ಮಣ್ಯ ಯಡಪಡಿತ್ತಾಯ, ಗ್ಲೋಬಲ್ ಜ್ಞಾನ ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕ ಡಾ.ರುಕ್ಸಾನಾ ಹಾಸನ ಮತ್ತಿತರರು ಉಪಸ್ಥಿತರಿದ್ದರು.

ಸುಮಾರು 1 ಸಾವಿರ ಶಿಕ್ಷಕರಲ್ಲಿ 100 ಮೆರಿಟ್ ಲಿಸ್ಟ್‌ನಲ್ಲಿ ಸ್ಥಾನ ಪಡೆದುಕೊಂಡ ವಿ.ಎಸ್.ನಸ್ರೀನ್ ಆಸಿಫ್ ಅವರು ಆಯ್ಕೆಯಾದ 15 ಅತ್ಯುತ್ತಮ ಶಿಕ್ಷಕರಲ್ಲಿ ಮೊದಲ ಸ್ಥಾನ ಗಳಿಸಿದರು.

ನಸ್ರೀನ್ ಆಸಿಫ್, ದಕ್ಷಿಣಕನ್ನಡ ಮಂಗಳೂರು ಶ್ರೀನಿವಾಸ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧಕಿಯಾಗಿದ್ದು, ಇವರು ಮಡಿಕೇರಿಯ ಕೊಹಿನೂರು ರಸ್ತೆ ನಿವಾಸಿ ವಿ.ಎಸ್. ಮೊಹಮ್ಮದ್ ಆಸಿಫ್ ಹಾಗೂ ವಿ.ಎಸ್. ನಸೀಮಾ ದಂಪತಿ ಪುತ್ರಿಯಾಗಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಸೆ.10– ಪೊನ್ನಂಪೇಟೆ ಹಾಗೂ ಶ್ರೀಮಂಗಲ ವಿದ್ಯುತ್ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಸೆ.11ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಉಪವಿಭಾಗ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.


ಗೋಣಿಕೊಪ್ಪ, ಪೊನ್ನಂಪೇಟೆ, ತಿತಿಮತಿ, ದೇವರಪುರ, ಮಾಯಮುಡಿ, ಕುಂದ, ಕಿರುಗೂರು, ಹಾತೂರು, ಕುತ್ತಾಡು, ಹೊಸೂರು, ಬಾಳೆಲೆ, ದೇವನೂರು, ಕಾನೂರು, ಹುದಿಕೇರಿ, ಶ್ರೀಮಂಗಲ, ಕುಟ್ಟ, ಬಿರುನಾಣಿ, ಬೀರುಗ, ನಾಲ್ಕೇರಿ, ಟಿ.ಶೆಟ್ಟಿಗೇರಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಸೆಸ್ಕ್ ಸಿಬ್ಬಂದಿ ಕ್ರೀಡಾಕೂಟ

ಮಡಿಕೇರಿ, ಸೆ.10–ಸೆಸ್ಕ್ ಮಡಿಕೇರಿ ಉಪವಿಭಾಗ ಮತ್ತು ವಿಭಾಗದ ವತಿಯಿಂದ 55ನೇ ವರ್ಷದ ಗಣೇಶೋತ್ಸವ ಹಿನ್ನೆಲೆ ಮಂಗಳವಾರ ನಗರದ ಗಾಂಧಿ ಮೈದಾನದಲ್ಲಿ ಕ್ರೀಡಾಕೂಟ ನಡೆಯಿತು.

ವಿದ್ಯುತ್ ಗುತ್ತಿಗೆದಾರರ ಸಹಕಾರದೊಂದಿಗೆ ನಡೆದ ಕ್ರೀಡಾಕೂಟಕ್ಕೆ ಸೆಸ್ಕ್ ಎಇಇ ವಿನಯ್ ಕುಮಾರ್ ಚಾಲನೆ ನೀಡಿ, ಕ್ರೀಡಾಪಟುಗಳಿಗೆ ಶುಭ ಕೋರಿದರು.

ಸೆಸ್ಕ್ ಸಹಾಯಕ ಇಂಜಿನಿಯರ್ ಸಂಪತ್ ಮಾತನಾಡಿ, ಹಿಂದಿನಿಂದಲೂ ಗಣೇಶೋತ್ಸವವನ್ನು ಸೆಸ್ಕ್ ಸಿಬ್ಬಂದಿ ಆಚರಿಸುತ್ತಿದ್ದಾರೆ. ಈ ಬಾರಿ ಉತ್ಸವದ ಅಂಗವಾಗಿ ಸಿಬ್ಬಂದಿಗೆ ಕ್ರೀಡಾಕೂಟ ಆಯೋಜಿಸಲಾಗಿದೆ. ವಿದ್ಯುತ್ ಸಮಸ್ಯೆ ಬಗೆಹರಿಸಲು ಅವಿರತವಾಗಿ ಶ್ರಮಿಸುವ ಸಿಬ್ಬಂದಿ ಮನರಂಜನೆ ಮತ್ತು ನಿತ್ಯದ ಒತ್ತಡಗಳಿಂದ ಹೊರಬರಲು ಕ್ರೀಡಾ ಚಟುವಟಿಕೆ ಸಹಕಾರಿಯಾಗಿದೆ ಎಂದರು. ವಾಲಿಬಾಲ್, ಗುಂಡು ಎಸೆತ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕ್ರೀಡಾಕೂಟದಲ್ಲಿ ಸೆಸ್ಕ್ ಮಡಿಕೇರಿ ಉಪವಿಭಾಗದ ಸುಮಾರು 150 ಸಿಬ್ಬಂದಿ ಮತ್ತು ವಿಭಾಗದ 50ಕ್ಕೂ ಹೆಚ್ಚಿನ ಸಿಬ್ಬಂದಿ ಪಾಲ್ಗೊಂಡಿದ್ದರು. ಸೆಸ್ಕ್ ಅಧಿಕಾರಿ ಶಿವಾನಂದ ಶೆಟ್ಟಿ, ಕೊಡಗು ಜಿಲ್ಲಾ ವಿದ್ಯುತ್ ಗುತ್ತಿಗೆದಾರರ ಸಂಘದ ಕಾರ್ಯದರ್ಶಿ ಮಮತಾ ರಾಜು ಉಪಸ್ಥಿತರಿದ್ದರು.



ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಸೆಸ್ಕ್ ಸಿಬ್ಬಂದಿ

ಪ್ರಾಮಾಣಿಕತೆ ಮೆರೆದ ಆಟೋ ಚಾಲಕ



ಮಡಿಕೇರಿ, ಸೆ.10–ಆಟೋದಲ್ಲೇ ಬಿಟ್ಟು ಹೋಗಿದ್ದ ಮೊಬೈಲ್ ಅನ್ನು ಪ್ರಯಾಣಿಕರಿಗೆ ಹಿಂದಿರುಗಿಸುವ ಮೂಲಕ ಚಾಲಕ ಪ್ರಾಮಾಣಿಕತೆ ಮೆರೆದಿದ್ದಾರೆ. ಚಾಲಕ ಅಮಿತ್ ತನ್ನ ಆಟೋದಲ್ಲಿ ಪ್ರಯಾಣಿಕರೊಬ್ಬರನ್ನು ನಗದ ಹಳೇ ಬಸ್ ನಿಲ್ದಾಣದಿಂದ ಮಹದೇವಪೇಟೆಗೆ ಕರೆದೊಯ್ದಿದ್ದಾರೆ. ಆದರೆ, ಪ್ರಯಾಣಿಕ ಆಟೋದಲ್ಲೇ ಮೊಬೈಲ್ ಬಿಟ್ಟು ಹೋಗಿದ್ದರು. ನಂತರ ಚಾಲಕ ಅಮಿತ್‌ಗೆ ಆಟೋದಲ್ಲಿ ಮೊಬೈಲ್ ಸಿಕ್ಕಿದೆ. ಇದೇ ಸಂದರ್ಭ ಮೊಬೈಲ್‌ಗೆ ಬಂದ ಕರೆ ಸ್ವೀಕರಿಸಿ ಮಾತನಾಡಿದ ಚಾಲಕ ಅಮಿತ್ ಮಾಹಿತಿ ಪಡೆದು ಪ್ರಯಾಣಿಕರ ಮನೆಗೆ ತೆರಳಿ ಮೊಬೈಲ್ ವಾಪಸ್ ನೀಡಿದ್ದಾರೆ. ಚಾಲಕನ ಕಾರ್ಯಕ್ಕೆ ಸಾರ್ವಜನಿಕರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಪ್ರಗತಿ ಸಾಧಿಸದ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ನೋಟಿಸ್

ಮಂಡ್ಯ,ಸೆ.10– ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಎರಡು ಅಥವಾ ಮೂರು ಪ್ರಗತಿ ಪರಿಶೀಲನೆ ಸಭೆ ನಡೆಸಿ ಪ್ರಗತಿ ಸಾಧಿಸಲು ಸೂಚನೆ ನೀಡಲಾಗಿತ್ತು. ಆದರೆ ನಿಗದಿಪಡಿಸಿದ ಗುರಿ ಸಾಧಿಸದ ಮುಖ್ಯಸ್ಥರಿಗೆ ನೋಟೀಸ್ ಜಾರಿ ಮಾಡುವಂತೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ ನೀಡಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಸಾರ್ವಜನಿಕ ಕೆಲಸಕ್ಕಾಗಿ ಬಿಡುಗಡೆಯಾಗುವ ಅನುದಾನ ಸಂಪೂರ್ಣವಾಗಿ ಪಾರದರ್ಶಕವಾಗಿ ವೆಚ್ಚವಾಗಬೇಕು ಎಂದರು.

ಕುಡಿಯುವ ನೀರಿನ ಪರೀಕ್ಷೆ ನಿಯಮಿತವಾಗಿ ನಡೆಸಬೇಕು. ಪರೀಕ್ಷೆಯ ವರದಿಯನ್ನು ಪಡೆದುಕೊಳ್ಳಬೇಕು. ಕಲುಷಿತ ನೀರಿನಿಂದ ಯಾವುದಾದರೂ ತೊಂದರೆಯಾದಲ್ಲಿ ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದರು.

ಸ್ವಚ್ಛತಾ ಹೀ ಸೇವಾ ಆಂದೋಲನವನ್ನು ಸೆಪ್ಟಂಬರ್ 15 ರಿಂದ ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಸಾರ್ವಜನಿಕ ಶೌಚಾಲಯ (Auspicious toilet) ಗಳು ಪೂರ್ಣಗೊಳಿಸಿ ಉದ್ಘಾಟನೆಗೊಳಿಸಿದರೆ ಅರ್ಥಯುತವಾಗಿರುತ್ತದೆ ಎಂದರು.



ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಕುಮಾರ್

ಸರ್ಕಾರದಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳಿಗೆ ಆಸ್ತಿ ತೆರಿಗೆಯನ್ನು ಕಟ್ಟಿಸಿಕೊಳ್ಳಲಾಗುತ್ತಿದೆ. ಆಸ್ತಿ ತೆರಿಗೆಯ ಪ್ರಗತಿ ಶೇ 56 ರಷ್ಟಿದ್ದು ಸಂಗ್ರಹಣೆಯ ಕೆಲಸ ಚುರುಕುಗೊಳಿಸಬೇಕು ಎಂದರು.

ಪೈಪ್‌ಲೈನ್ ಮೂಲಕ ಎಲ್‌ಪಿಜಿ ಅನಿಲ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪೈಪ್ ಲೈನ್ ಹಾಕುವ ಕಾಮಗಾರಿಗೆ ಎ.ಜಿ.ಅಂಡ್ ಪಿ ಪ್ರಥಮ್ ಸಂಸ್ಥೆಯವರು ಮಂಡ್ಯ ನಗರಸಭೆಯಿಂದ ಅನುಮತಿ ಪಡೆಯುವುದು ಕಡ್ಡಾಯ ಎಂದರು.

ಸಾರ್ವಜನಿಕರಿಗೆ ಸೌಲಭ್ಯ ಒದಗಿಸಲು ಕುಡಿಯುವ ನೀರಿನ ಪೈಪ್, ಯುಜಿಡಿ ಪೈಪ್‌ಲೈನ್ ಇರುತ್ತದೆ. ಎಲ್‌ಪಿಜಿ ಪೈಪ್ ಲೈನ್ ಕಾಮಗಾರಿಯಿಂದ ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕಾಮಗಾರಿ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪೂರ್ಣಗೊಂಡ ನಂತರ ಅಗೆದಿರುವ ರಸ್ತೆಯನ್ನು ಸರಿಪಡಿಸಿರುವ ಬಗ್ಗೆ ಖಾತ್ರಿ ಪಡೆಸಿಕೊಳ್ಳಬೇಕು ಎಂದರು.

ಮಂಡ್ಯ ನಗರ ಪ್ರದೇಶದಲ್ಲಿ ಪೈಪ್ ಲೈನ್ ಮೂಲಕ ಎಲ್‌ಪಿಜಿ ಅನಿಲ ವಿತರಣೆ ಯೋಜನೆಯಡಿ 6500 ಸಂಪರ್ಕ ನೀಡುವ ಗುರಿ ಹೊಂದಿದ್ದು, ಶೀಘ್ರದಲ್ಲೇ ಮಂಡ್ಯ ನಗರಸಭೆಯ ಎರಡು ವಾರ್ಡ್‌ಗಳಿಗೆ ಒದಗಿಸಲು ಯೋಜಿಸಲಾಗಿದೆ ಎಂದು ಎ.ಜಿ. ಅಂಡ್ ಪಿ ಪ್ರಥಮ್ ಸಂಸ್ಥೆಯ ಉಪವಲಯ ಮುಖ್ಯಸ್ಥರು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಪೈಪ್ ಲೈನ್ ಮೂಲಕ ಎಲ್‌ಪಿಜಿ ಅನಿಲ ವಿತರಣೆಯ ಅನುಕೂಲತೆಯ ಬಗ್ಗೆ ಸಂಸ್ಥೆಯವರು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಕಾಮಗಾರಿ ನಡೆಯುವ ಸಂದರ್ಭದಲ್ಲಿ ಮಂಡ್ಯ ನಗರಸಭೆಯೊಂದಿಗೆ ನಿರಂತರವಾಗಿ ಎ.ಜಿ.ಅಂಡ್ ಪಿ ಪ್ರಥಮ್ ಸಂಸ್ಥೆಯ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿ ಒಬ್ಬರು ಸ್ಥಳೀಯ ಅಧಿಕಾರಿಯನ್ನು ನಿಯೋಜಿಸಬೇಕು ಎಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷರಾ ಮಣಿ, ಎ.ಜಿ ಅಂಡ್ ಪಿ ಪ್ರಥಮ್ ಸಂಸ್ಥೆಯ ಸಂಜಿತ್, ಚರಣ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಪಾಸ್‌ಪೋರ್ಟ್ ಕೇಂದ್ರ ಸ್ಥಾಪನೆಗೆ ಒತ್ತಾಯ

ಮಂಡ್ಯ: ಮಂಡ್ಯ ಜಿಲ್ಲಾ ಕೇಂದ್ರದಲ್ಲಿ ಪಾಸ್‌ಪೋರ್ಟ್ ಕೇಂದ್ರವನ್ನು ಸ್ಥಾಪಿಸಬೇಕೆಂದು ಮೈಶುಗರ್ ಕಬ್ಬು ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಎಸ್.ಎಂ.ವೇಣುಗೋಪಾಲ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಸ್‌ಪೋರ್ಟ್ ಕೇಂದ್ರವನ್ನು ಮಂಡ್ಯ ಜಿಲ್ಲೆಗೆ ತಂದಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಆದರೆ ಈ ಕಚೇರಿ ಸಹಜವಾಗಿ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸುವುದು ಸೂಕ್ತವಾಗಿದೆ. ಆದ್ದರಿಂದ ಈ ಕೇಂದ್ರವನ್ನು ಜಿಲ್ಲಾ ಕೇಂದ್ರದಲ್ಲಿಯೇ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.


ಮದ್ದೂರಿನಲ್ಲಿ ಪಾಸ್‌ಪೋರ್ಟ್ ಕೇಂದ್ರವನ್ನು ಸ್ಥಾಪಿಸುವುದರಿಂದ ಇತರೆ ತಾಲೂಕುಗಳಿಂದ ಸಾರ್ವಜನಿಕರು ಅಲ್ಲಿಗೆ ಹೋಗಲು ಸಾರಿಗೆ ಸೌಲಭ್ಯಗಳಿಲ್ಲ. ಬೇರೆ ತಾಲೂಕುಗಳಿಂದ ಮದ್ದೂರು ತಾಲೂಕಿಗೆ ನೇರವಾದ ಸಾರಿಗೆ ಸಂಪರ್ಕದ ಕೊರತೆ ಇದೆ. ಆದರೆ ಜಿಲ್ಲಾ ಕೇಂದ್ರಕ್ಕೆ ನೇರ ಸಾರಿಗೆ ಸಂಪರ್ಕ ಇರುವುದರಿಂದ ಇಲ್ಲಿಯೇ ಪಾಸ್‌ಪೋರ್ಟ್ ಕಚೇರಿಯನ್ನು ಸ್ಥಾಪಿಸಬೇಕು ಎಂದರು.

ಮಂಡ್ಯ ನಗರದಲ್ಲಿ ಆಡಳಿತಾತ್ಮಕ ಮತ್ತು ಸೇವಾ ವಲಯಕ್ಕೆ ಸಂಬಂಧಿಸಿದಂತೆ ಪ್ರಧಾನ ಕಚೇರಿಗಳು ಇವೆ. ಆದ್ದರಿಂದ ನಾಗರಿಕರಿಗೆ ಸೌಲಭ್ಯಗಳು ಸಿಗುತ್ತವೆ ಹಾಗಾಗಿ ಸಾರ್ವಜನಿಕರ ಹಿತಾಸಕ್ತಿಗೆ ಅನುಕೂಲವಾಗುವಂತೆ ಜಿಲ್ಲಾ ಕೇಂದ್ರದಲ್ಲಿ ಕಚೇರಿಯನ್ನು ಸ್ಥಾಪಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಎಸ್.ಕೃಷ್ಣ, ಗ್ರಾಮೀಣ ಕನ್ನಡಿಗರ ಸಂಘಟನೆ ಮುಖಂಡ ಅಭಿಗೌಡ, ಜೈ ಕರ್ನಾಟಕ ಪರಿಷತ್ತಿನ ಎಸ್.ಪಿ. ನಾರಾಯಣಸ್ವಾಮಿ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಶಿವಳ್ಳಿ ಚಂದ್ರಶೇಖರ್ ಉಪಸ್ಥಿತರಿದ್ದರು.

ನ್ಯೂ ಜೆರ್ಸಿಯಲ್ಲಿ ಕಾಲಭೈರವೇಶ್ವರ ದೇವಸ್ಥಾನ

ಶ್ರೀರಂಗಪಟ್ಟಣ,ಸೆ.10– ಶ್ರೀಕ್ಷೇತ್ರ ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾರಥ್ಯದಲ್ಲಿ ಅಮೆರಿಕಾದ ನ್ಯೂಜೆರ್ಸಿಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಕಾಮಗಾರಿಯನ್ನು ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ವೀಕ್ಷಿಸಿ, ಮತ್ತಷ್ಟು ಅಭಿವೃದ್ಧಿಗೆ ಮನವಿ ಮಾಡಿದ್ದಾರೆ.

ಅಮೆರಿಕಾದ ನ್ಯೂಜೆರ್ಸಿ ಆದಿಚುಂಚನಗಿರಿ ಶಾಖಾ ಮಠದ ಆವರಣದಲ್ಲಿ 80 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಕಾರ್ಯ ಅಮೇರಿಕಾದಲ್ಲಿ ನೆಲೆಸಿರುವ ಕನ್ನಡಿಗರು, ಭಾರತೀಯರ ಸಹಕಾರದೊಂದಿಗೆ ನಡೆಯುತ್ತಿದೆ. ಭಾರತವನ್ನು ಪ್ರತಿನಿಧಿಸುವಂತಹ ಇಂತಹ ಮತ್ತಷ್ಟು ಸತ್ಕಾರ್ಯಗಳು ಜರುಗುವಂತಾಗಲಿ. ಆದಿಚುಂಚನಗಿರಿ ಮಠದ ಇಂತಹ ಧಾರ್ಮಿಕ ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸುವ ಮೂಲಕ ಪುಣ್ಯ ಪ್ರಾಪ್ತಿಗಾಗಿ ಮಠದ ಜೊತೆಗೆ ಶ್ರಮಿಸೋಣ ಎಂದು ಮನವಿ ಮಾಡಿದ್ದಾರೆ.



ಲಕ್ಷ್ಮಿ ನರಸಿಂಹಸ್ವಾಮಿ ಮಹಾ ಕುಂಭಾಭಿಷೇಕ ಯಶಸ್ವಿ

ಶ್ರೀರಂಗಪಟ್ಟಣ: ವಿಶ್ವಮಂಗಳ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ ಮಹಾಕುಂಭಾಭಿಷೇಕವು 200 ವೈದಿಕರು, ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿತು. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಈ ಪ್ರಸಿದ್ಧ ದೇವಸ್ಥಾನದ ಸಂಸ್ಥಾಪಕರು ಆಚಾರ್ಯರ ನೇತೃತ್ವದಲ್ಲಿ ಲೋಕ ಕಲ್ಯಾಣದ ಸಂಕಲ್ಪದೊಂದಿಗೆ ದೇಗುಲ ಲೋಕಾರ್ಪಣೆಗೊಂಡಿತು.

ಬೆಳಗ್ಗೆ 6 ಗಂಟೆಯಿಂದಲೇ ಸುಪ್ರಭಾತ, ನಿತ್ಯ ಹೋಮ, ದೇವತಾ ಹೋಮ, ಮಹಾಪೂರ್ಣಾಹುತಿ ಜರುಗಿತು. ಕುಂಭ ಪ್ರದಕ್ಷಣಾ ಪೂರ್ವಕ ಬಳಿಕ ಕುಂಭಾಭಿಷೇಕ ನೇರವೇರಿತು. ದೇಶವಲ್ಲದೇ ವಿದೇಶದಿಂದಲೂ ಬಹಳಷ್ಟು ಭಕ್ತರು ಬಂದಿದ್ದು ವಿಶೇಷವಾಗಿತ್ತು. ಇದರ ಜೊತೆ ಶ್ರೀ ಕ್ಷೇತ್ರದಲ್ಲಿ ಲೋಕಕಲ್ಯಾಣಕ್ಕಾಗಿ 12 ವರ್ಷಗಳ ಕಾಲ ನಿತ್ಯ ದೀರ್ಘ ಸತ್ರ ಮಹಾಯಾಗ ನಡೆಯುತ್ತಿದ್ದು, ಈಗಾಗಲೇ 2 ವರ್ಷಗಳನ್ನು ಪೂರೈಸಿರುವುದು ಪ್ರಮುಖವಾಗಿದೆ.

ಬೆಳಗೊಳದ ವಿಶ್ವಮಂಗಲ ಲಕ್ಷ್ಮಿನರಸಿಂಹಸ್ವಾಮಿ ದೇಗುಲ ನಿರ್ಮಾಣಕ್ಕೆ ಕೈ ಹಾಕಿ ಹದಿನೈದು ವರ್ಷಗಳಾಗಿದೆ. ಇವತ್ತು ಶ್ರಾವಣ ಸ್ವಾತಿ ನಕ್ಷತ್ರ ಲಕ್ಷ್ಮಿ ನರಸಿಂಹನ ನಕ್ಷತ್ರವಾಗಿದೆ. ಇಂದೆ ದೇವರ ದಯೆಯೊಂದಿಗೆ ಪರಿಪೂರ್ಣ ಲೋಕಕಲ್ಯಾಣ ಸಂಕಲ್ಪದೊಂದಿಗೆ ದೇವಾಲಯ ಲೋಕಾರ್ಪಣೆಗೊಳ್ಳುತ್ತಿದೆ ಪೂರ್ವ ಪಶ್ಚಿಮ ರಾಜಗೋಪುರ, ಪ್ರದಕ್ಷಿಣಾ ಪ್ರಾಕಾರ, ಮಹಾಮಂಟಪ ಸೇರಿ ದೇಗುಲದ ಎಲ್ಲ ಕಡೆ ಕುಂಭಾಭಿಷೇಕ ನೆರವೇರಿದೆ. ಸರ್ವೇ ಜನ ಸುಖಿನೋ ಭವಂತೂ ಎಂಬ ಧ್ಯೇಯದೊಂದಿಗೆ ಪೂಜೆ ಪುನಸ್ಕಾರ ನೆರವೇರಿಸಲಾಗಿದೆ ಎಂದು ದೇವಸ್ಥಾನದ ಸಂಸ್ಥಾಪಕ ಆಚಾರ್ಯ ಲಕ್ಷ್ಮಿನಾರಾಯಣ ತಿಳಿಸಿದರು.



ದೇವಸ್ಥಾನದ ರಾಜಗೋಪುರಕ್ಕೆ ಪೂಜೆ ನೆರವೇರಿಸುತ್ತಿರುವ ವೈದಿಕರು

ಹನೂರಿನಲ್ಲಿ ಮನೆ ಬಾಗಿಲು ಮುರಿದು

308 ಗ್ರಾಂ ಚಿನ್ನಾಭರಣ, 20 ಲಕ್ಷ ನಗದು ಕಳವು



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಟಿ.ಕವಿತಾ ಭೇಟಿ ನೀಡಿ, ಪರಿಶೀಲಿಸಿದರು.

ಹನೂರು, ಸೆ.10–ಸೋಮವಾರ ತಡರಾತ್ರಿ ಪಟ್ಟಣದ ಮನೆಯೊಂದರ ಬಾಗಿಲು ಮುರಿದು ಕಳ್ಳರು, ಮಗಳ ಮದುವೆಗೆ ಕೂಡಿಟ್ಟಿದ್ದ 308 ಗ್ರಾಂ ಚಿನ್ನಾಭರಣ ಹಾಗೂ 20 ಲಕ್ಷ ರೂ. ನಗದನ್ನು ಕದ್ದೊಯ್ದಿದ್ದಾರೆ.

ಪಟ್ಟಣದ 11ನೇ ವಾರ್ಡ್‌ನ ಚಿನ್ನದೊರೆ ಅವರ ಮನೆಯಲ್ಲಿ ಕಳ್ಳತನವಾಗಿದೆ. ಒಂದೇ ಕಟ್ಟಡದಲ್ಲಿ ಐದು ಮನೆಗಳಿದ್ದು, ಚಿನ್ನದೊರೆ ಅವರು ಗ್ರೌಂಡ್‌ಫ್ಲೋರ್‌ನಲ್ಲಿ ಬಾಡಿಗೆ ಪಡೆದು ವಾಸವಿದ್ದರು. ಆದರೆ, ಇವರು ತಮ್ಮ ಕುಟುಂಬದೊಂದಿಗೆ ತಮಿಳುನಾಡಿನ ವಡ್ಡನಭತ್ರ ಗ್ರಾಮಕ್ಕೆ ಐದು ದಿನಗಳ ಹಿಂದೆ ತೆರಳಿದ್ದರು. ಸೋಮವಾರ ತಡರಾತ್ರಿ ಮನೆಗೆ ಬಂದಾಗ ಕಳ್ಳತನವಾಗಿರುವುದು ಪತ್ತೆಯಾಗಿದೆ.

ಕಳ್ಳರು ಕಟ್ಟಡದ ಮೇಲಂತಸ್ತಿನ ನಾಲ್ಕು ಮನೆಗಳಿಗೂ ನಿವಾಸಿಗಳು ಹೊರಬರದಂತೆ ಬಾಗಿಲ ಚಿಲಕ ಹಾಕಿ ನಗದು ಚಿನ್ನಾಭರಣ ಕಳ್ಳತನ ಮಾಡಿದ್ದಾರೆ.

ಮಗಳ ಮದುವೆಗೆ ಕೂಡಿಟ್ಟಿದ್ದ ಹಣ, ಚಿನ್ನಾಭರಣ: ಚಿನ್ನದೊರೆ ಅವರು ಹಲವಾರು ವರ್ಷಗಳಿಂದ ಪಟ್ಟಣದಲ್ಲಿ ವಾಸವಾಗಿದ್ದು, ಕಂತು ವ್ಯವಹಾರ ನಡೆಸುತ್ತಿದ್ದರು. ಆದರೆ, ತಮ್ಮ ಮಗಳ ಮದುವೆಗೆಂದು ತಮಿಳುನಾಡಿನ ವಡ್ಡನಭತ್ರ ಗ್ರಾಮದಲ್ಲಿದ್ದ ಜಮೀನನ್ನು ಮಾರಾಟ ಮಾಡಿ 308 ಗ್ರಾಂ ಚಿನ್ನಾಭರಣ ಹಾಗೂ 20 ಲಕ್ಷ ರೂ. ನಗದನ್ನು ಕೂಡಿಟ್ಟಿದ್ದರು.

ಎಸ್ಪಿ ಭೇಟಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಟಿ.ಕವಿತಾ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಭೇಟಿ ನೀಡಿ, ಪರಿಶೀಲಿಸಿ ಕಳ್ಳತನದ ಬಗ್ಗೆ ಚಿನ್ನದೊರೆರಿಂದ ಮಾಹಿತಿ ಪಡೆದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯರು ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿ

ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಅಶ್ವಥ್‌ನಾರಾಯಣ್ ಹೇಳಿಕೆ

ಚಾಮರಾಜನಗರ, ಸೆ.10– ಮಹಿಳೆಯರು ರಾಷ್ಟ್ರದ ಶಕ್ತಿಯಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಆಡಳಿತವನ್ನು ಬೆಂಬಲಿಸುವ ಜೊತೆಗೆ ಹೆಚ್ಚಿನ ರೀತಿಂ ಮಹಿಳಾ ಸದಸ್ಯತ್ವ ಹೊಂದಿ ಸಕ್ರಿಯವಾಗಿ ಪಕ್ಷ ಸಂಘಟನೆಯಲ್ಲಿ ಪಾಲ್ಗೊಳ್ಳಬೇಕು ಎಂದು ಬಿಜೆಪಿ ರಾಜ್ಯ ವಕ್ತಾರ ಅಶ್ವಥ್ ನಾರಾಯಣ್ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಮಹಿಳಾ ಮೋರ್ಚಾದಿಂದ ನಡೆದ ಸದಸ್ಯತ್ವ ಅಭಿಯಾನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಮಹಿಳೆಯರಿಗೆ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಪ್ರತಿ ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯ ಪಾತ್ರವನ್ನು ಹೆಚ್ಚು ಮಾಡುತ್ತಿದೆ. ಈ ನಿಟ್ಟಿನಲ್ಲಿ ಅಭಿಯಾನದಲ್ಲಿ ಮಹಿಳೆಯರು ಬಿಜೆಪಿ ಸದಸ್ಯತ್ವ ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದರು.



ಚಾಮರಾಜನಗರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಹಿಳಾ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು, ಮಂಡಲ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಅಭಿಯಾನ ವೇಳೆ ಪ್ರತಿ ಮನೆ ಮನೆಗೆ ಭೇಟಿ ನೀಡಿ ಬಿಜೆಪಿ ಕಾರ್ಯಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು. ನಾವು ಏಕೆ ಬಿಜೆಪಿ ಬೆಂಬಲಿಸಬೇಕು? ಹಾಗೂ ಸದಸ್ಯತ್ವ ಪಡೆದುಕೊಳ್ಳಬೇಕು? ಎಂಬುದರ ಬಗ್ಗೆ ಸವಿವರವಾಗಿ ತಿಳಿಸಬೇಕು ಎಂದರು.

ಉಜ್ವಲ ಗ್ಯಾಸ್ ಯೋಜನೆ, ಲಕ್ಷಾಧಿಪತಿ ದೀದಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಹೆಣ್ಣು ಮಕ್ಕಳ ರಕ್ಷಣೆ ಕುರಿತು ವಿವಿಧ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹೆಣ್ಣು ಮಕ್ಕಳ ವಿಮೆ, ಸೈಕಲ್ ವಿತರಣೆ ಮಾಡಿದ್ದರಿಂದ ಗ್ರಾಮಾಂತರ ಪ್ರದೇಶದ ಬಹಳಷ್ಟು ಹೆಣ್ಣು ಮಕ್ಕಳು ಇಂದು ಪದವಿ ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ ಮಾತನಾಡಿ, ಜಿಲ್ಲೆಯಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಪ್ರತಿ ಮಂಡಲ ಅಧ್ಯಕ್ಷರು, ಪದಾಧಿಕಾರಿಗಳು ಬೂತ್ ಹಾಗೂ ಶಕ್ತಿ ಕೇಂದ್ರಗಳಲ್ಲಿ ಮಿಸ್‌ಕಾಲ್ ಮೂಲಕ ಬಿಜೆಪಿ ಸದಸ್ಯತ್ವ ಪಡೆದುಕೊಳ್ಳಬೇಕು. ಆಯಾ ಮಂಡಲ ಅಧ್ಯಕ್ಷರು ಜವಾಬ್ದಾರಿ ತೆಗೆದುಕೊಂಡು ಹೆಚ್ಚು ಮಹಿಳೆಯರಿಗೆ ಪಕ್ಷದ ಪ್ರಾಥಮಿಕ ಸದಸ್ಯತ್ವ ನೀಡುವ ಮೂಲಕ ಪ್ರಧಾನಿ ಮೋದಿ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಾಗಾರದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ್ ಕಾರ್ಯದರ್ಶಿಗಳಾದ ಮೂಡ್ಲಾಕೂಡು ಪ್ರಕಾಶ್, ಹೊನೂರು ಮಹದೇವಸ್ವಾಮಿ, ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯೆ ಜಯಶೀಲಾ ರಾಜಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಲಾ, ಕಾರ್ಯದರ್ಶಿ ಪದ್ಮ, ಮಂಡಲದ ಅಧ್ಯಕ್ಷರಾದ ಚಾ.ನಗರ ಮಹೇಶ್ವರಿ ಮತ್ತಿತರರು ಹಾಜರಿದ್ದರು.

ಮಾನವ ಸರಪಳಿ ಅಚ್ಚುಕಟ್ಟಾಗಿ ನಿರ್ವಹಿಸಿ

ಚಾಮರಾಜನಗರ, ಸೆ.10–ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಮಾನವ ಸರಪಳಿ ಯಶಸ್ವಿಯಾಗಿ ರಚಿಸಿರುವ ವಿವಿಧ ಉಪಸಮಿತಿಗಳು ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಮಂಗಳವಾರ ನಡೆದ ಪ್ರಜಾಪ್ರಭುತ್ವ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದಿನಾಚರಣೆ ಅಂಗವಾಗಿ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿಹಿಡಿಯುವ ಮಹತ್ತರ ಕಾರ್ಯಕ್ರಮ ಇದಾಗಿದೆ. ಸೆ.15 ರಂದು ಬೀದರ್‌ನ ಬಸವಕಲ್ಯಾಣದಿಂದ ದಕ್ಷಿಣದ ಗಡಿಜಿಲ್ಲೆ ಚಾಮರಾಜನಗರವರೆಗೆ ಮಾನವ ಸರಪಳಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮಲ್ಲಿ ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಎಲ್ಲಾ ಸರ್ಕಾರಿ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘ–ಸಂಸ್ಥೆಗಳು ಸೇರಿದಂತೆ ಪ್ರತಿಯೊಬ್ಬರು ಭಾಗವಹಿಸಬೇಕು ಎಂದರು.

ಮೂಗೂರು ಕ್ರಾಸ್‌ನಿಂದ ನಗರದ ಪಚ್ಚಪ್ಪ ವೃತ್ತದವರೆಗೆ 24 ಕಿ.ಮೀ. ಅಂತರದ ಮಾನವ ಸರಪಳಿ ಏರ್ಪಡಿಸಲಾಗಿದೆ. ಕಾರ್ಯಕ್ರಮ ನಿರ್ವಹಣೆಗೆ ಶಿಷ್ಟಾಚಾರ, ಶುಚಿತ್ವ ಧ್ವಜ, ರಂಗೋಲಿ, ವೇಷಭೂಷಣ, ಆರೋಗ್ಯ, ಸಾಂಸ್ಕೃತಿಕ, ಸ್ಕೂಲ್ ಬ್ಯಾಂಡ್ ಸಮಿತಿ ಇತರೆ ಉಪಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪಕಾರ್ಯದರ್ಶಿ ಪಿ.ಲಕ್ಷ್ಮೀ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಬಿಂದ್ಯಾ, ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಚಾಮರಾಜನಗರದ ಜಿಪಂ ಕಚೇರಿಯಲ್ಲಿ ನಡೆದ ಪ್ರಜಾಪ್ರಭುತ್ವ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಸಿಇಓ ಮೋನಾ ರೋತ್ ಮಾತನಾಡಿದರು.

ಅಕ್ರಮ ಮದ್ಯ ಮಾರಾಟಕ್ಕೆ ಸಾಥ್: ಪೇದೆಗಳಿಬ್ಬರ ಅಮಾನತು

ಕೊಳ್ಳೇಗಾಲ, ಸೆ.10– ಹನೂರು ತಾಲೂಕಿನ ಮಹದೇಶ್ವರ ಬೆಟ್ಟದಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸಹಕಾರ ನೀಡಿದ ಆರೋಪದ ಮೇರೆಗೆ ಮಹದೇಶ್ವರಬೆಟ್ಟ ಠಾಣೆಯ ಇಬ್ಬರು ಮುಖ್ಯಪೇದೆಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮಹದೇಶ್ವರಬೆಟ್ಟ ಠಾಣೆಯ ಮುಖ್ಯಪೇದೆ ಅಣ್ಣಾದೊರೆ ಮತ್ತು ಮುತ್ತುರಾಜು ಅಮಾನತುಗೊಂಡವರು. ಬೆಟ್ಟದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ತಿಳಿದಿದ್ದರೂ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಮುಖ್ಯಪೇದೆ ಅಣ್ಣಾದೊರೆ, ಸ್ಥಳೀಯರು ದೂರು ನೀಡಿದ ಹಿನ್ನೆಲೆಯಲ್ಲಿ ಮತ್ತೋರ್ವ ಮುಖ್ಯಪೇದೆ ಮುತ್ತುರಾಜು ಅವರನ್ನು ಅಮಾನತು ಮಾಡಲಾಗಿದೆ.

ಹೆಮ್ಮೆಯ 'ಮೈಸೂರು ಆಕಾಶವಾಣಿ'ಗೆ 90ರ ಸಂಭ್ರಮ

■ ಸಂಸ್ಥಾಪಕರ ಕುಟುಂಬದಿಂದ ಗಿಡ ನೆಟ್ಟು ಸಡಗರ ಕ್ಷಣಕ್ಕೆ ಸಾಂಕೇತಿಕ ಚಾಲನೆ ■ ಎಂ.ವಿ.ಗೋಪಾಲಸ್ವಾಮಿ, ನಾ.ಕಸ್ತೂರಿ, ಪ್ರೊ.ಎ.ಎನ್.ಮೂರ್ತಿರಾಯರು, ಡಾ.ಎ.ಎಂ.ನಟೇಶ್ ಪರಿಶ್ರಮದ ಫಲಶ್ರುತಿ; ಅಸಂಖ್ಯಾತ ಶ್ರೋತೃಗಳ ಅಚ್ಚುಮೆಚ್ಚು ■ ವೈವಿಧ್ಯಮಯ ಕಾರ್ಯಕ್ರಮದ ಮೂಲಕ ಎಂದೂ ಕುಗ್ಗದ ಜನಪ್ರಿಯತೆ

ಮೈಸೂರು, ಸೆ.10(ಎಸ್‌ಬಿಡಿ)– ಬಹುಮಾಧ್ಯಮಗಳ ಸವಾಲಿನ ನಡುವೆಯೂ ತನ್ನ ಶ್ರೋತೃ ವರ್ಗವನ್ನು ಆಯಸ್ಕಾಂತದಂತೆ ಹಿಡಿದಿಟ್ಟುಕೊಂಡಿರುವ ಹೆಮ್ಮೆಯ 'ಮೈಸೂರು ಆಕಾಶವಾಣಿ'ಗೆ 90ರ ಸಂಭ್ರಮ.

ದೇಶದ ಪ್ರಸಾರ ವ್ಯವಸ್ಥೆಗೆ 'ಆಕಾಶವಾಣಿ' ಹೆಸರು ನೀಡಿದ ಮೈಸೂರು ಆಕಾಶವಾಣಿ ಕೇಂದ್ರ ಮಂಗಳವಾರ 89 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ, 90ನೇ ವರ್ಷಕ್ಕೆ ಸಂಭ್ರಮದಿಂದ ಅಡಿಯಿಟ್ಟಿದೆ. ವಾಣಿಜ್ಯೀಕರಣ, ಜಾಗತೀಕರಣ, ಬಹುಮಾಧ್ಯಮ ಸವಾಲುಗಳ ನಡುವೆಯೂ ತನ್ನತನವನ್ನು ಬಿಟ್ಟುಕೊಡದೆ ಕೇಳುಗರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯೂರಿದೆ. ಅದೆಷ್ಟೋ ಖಾಸಗಿ ಎಫ್‌ಎಂಗಳ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಿ, ಶ್ರೋತೃ ವರ್ಗವನ್ನು ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕೇಳುಗರಿಗೆ ಪ್ರಿಯವಾಗುವ ಹಾಗೂ ಸಮಾಜಕ್ಕೆ ಅನುಕೂಲವಾಗುವ ವಿಭಿನ್ನ ಕಾರ್ಯಕ್ರಮಗಳ ಮೂಲಕ ಮುನ್ನಡೆಯುತ್ತಿರುವ 'ಮೈಸೂರು ಆಕಾಶವಾಣಿ' ಕೇಳುಗರ ಮೆಚ್ಚಿನ ಮಾಧ್ಯಮವಾಗಿ ಶತಕಗಳ ಕಾಲ ಉಳಿದು, ಬೆಳಗುವ ವಿಶ್ವಾಸ ಹೆಚ್ಚಿಸಿಕೊಂಡಿದೆ.

ದೇಶದ ಮೊದಲ ಬಾನುಲಿ: ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಮನೋವಿಜ್ಞಾನ ಪ್ರಾಧ್ಯಾಪಕರಾಗಿದ್ದ ಎಂ.ವಿ.ಗೋಪಾಲಸ್ವಾಮಿ ಅವರು ಮೈಸೂರಿನ ತಮ್ಮ ಮನೆಯಲ್ಲೇ 1935ರ ಸೆಪ್ಟೆಂಬರ್ 10ರಂದು ಬಾನುಲಿ ಕೇಂದ್ರ ಆರಂಭಿಸಿದರು. ಇದು ದೇಶದ ಮೊದಲ ರೇಡಿಯೋ ಬಾನುಲಿ ಕೇಂದ್ರ ಎನ್ನುವುದು ಹೆಮ್ಮೆಯ ವಿಶೇಷ. ರಾಷ್ಟ್ರಕವಿ ಕುವೆಂಪು ಅವರ ಕವಿವಾಣಿ ಮೂಲಕ ಪ್ರಸಾರ ಕಾರ್ಯಕ್ರಮ ಆರಂಭಗೊಂಡಿತು. ತ್ಯಾಗರಾಜರ ನೇರ ಶಿಷ್ಯರಾದ ಮೈಸೂರು ವಾಸುದೇವಾಚಾರ್ಯರ ಗಾಯನ ಮೊದಲ ಸಂಗೀತ ಕಾರ್ಯಕ್ರಮವಾಗಿ ಪ್ರಸಾರಗೊಂಡಿತು.

ಸರ್ಕಾರಿ ಸಂಸ್ಥೆಯಾಯಿತು: ಎಂ.ವಿ.ಗೋಪಾಲಸ್ವಾಮಿ ಅವರ ಮನೆಯಲ್ಲಿ ಆರಂಭವಾದ ಈ ಖಾಸಗಿ ಬಾನುಲಿ ಕೇಂದ್ರವು ನಂತರ ಈಗಿನ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಕಟ್ಟಡಕ್ಕೆ ಸ್ಥಳಾಂತರವಾಯಿತು. ಬಳಿಕ ಅದನ್ನು ಮೈಸೂರು ನಗರಪಾಲಿಕೆಗೆ ವಹಿಸಿಕೊಡಲಾಯಿತು. ನಂತರ ಮೈಸೂರು ಸಂಸ್ಥಾನದ ಮಹಾರಾಜರ ಸರ್ಕಾರ ಮುನ್ನಡೆಸಿತು. ಗೋಪಾಲಸ್ವಾಮಿ ಅವರ ನಂತರದಲ್ಲಿ ನಾ.ಕಸ್ತೂರಿ ಅವರು ಕೇಂದ್ರದ ಮುಖ್ಯಸ್ಥರಾದರು. ವಿನೂತನ ಕಾರ್ಯಕ್ರಮಗಳ ಮೂಲಕ ಕೇಂದ್ರದ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿದರು. ನಂತರದ ವರ್ಷಗಳಲ್ಲಿ ಆಕಾಶವಾಣಿ, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿತು. ಆಗ ಪ್ರೊ.ಎ.ಎನ್.ಮೂರ್ತಿರಾಯರು ಕೇಂದ್ರದ ಮುಖ್ಯಸ್ಥರಾಗಿ ಸೃಜನಶೀಲ ಕಾರ್ಯಕ್ರಮಗಳನ್ನು ಸಂಯೋಜಿಸಿದರು. ಬಳಿಕ ಡಾ.ಎ.ಎಂ.ನಟೇಶ್ ನವೀನತೆಗೆ ಒತ್ತುಕೊಟ್ಟರು. ವಿಶಾಲ ಕರ್ನಾಟಕ ರಚನೆ ನಂತರ 1955 ನ.2ರಿಂದ ಬೆಂಗಳೂರಿಗೆ ಸ್ಥಳಾಂತರವಾಗಿತ್ತಾದರೂ 1974ರ ನ.14ರಂದು ಮತ್ತೆ ಮೈಸೂರಿನಿಂದ ಕಾರ್ಯಾರಂಭ ಮಾಡಿತು.

ವೈವಿಧ್ಯಮಯ ಕಾರ್ಯಕ್ರಮಗಳ ಹೂರಣ: ಮೈಸೂರು ಆಕಾಶವಾಣಿ ಕೇಂದ್ರದ ಹಲವು ಪ್ರಯೋಗಗಳು ಯಶಸ್ವಿಯಾಗಿ, ರಾಷ್ಟ್ರ ಮಟ್ಟದ ಪ್ರಶಸ್ತಿಗಳಿಗೆ ಭಾಜನವಾಗಿವೆ. ಸಮೂಹ ಮಾಧ್ಯಮಗಳ ಪ್ರಭಾವವನ್ನು ಮೀರಿ 'ಬಹುಜನ ಹಿತಾಯ, ಬಹುಜನ ಸುಖಾಯ' ಧ್ಯೇಯವಾಕ್ಯದೊಂದಿಗೆ ಇಂದಿಗೂ ತನ್ನತನವನ್ನು ಕಾಯ್ದುಕೊಂಡಿದೆ. ಸಾಹಿತ್ಯ, ಸಂಗೀತ, ರೂಪಕ, ನಾಟಕ, ಶಿಕ್ಷಣ, ಆರೋಗ್ಯ, ಚಲನಚಿತ್ರ, ಕ್ರೀಡೆ, ಕೃಷಿ ಸೇರಿದಂತೆ ಹತ್ತು ಹಲವು ಸದಭಿರುಚಿಯ ಕಾರ್ಯಕ್ರಮಗಳ ಮೂಲಕ ಎಲ್ಲರಿಗೂ ಅಚ್ಚುಮೆಚ್ಚಾಗಿದೆ. ಮೌಲ್ವಿಕ ಕಾರ್ಯಕ್ರಮಗಳ ಮೂಲಕ ಸಮಾಜದ ಒಳಿತಿಗೂ ಶ್ರಮಿಸುತ್ತಿದೆ. ಕಾಫಿ–ತಿಂಡಿ, ಬೆಳ್ಳಿ–ಬೆರಗು, ವೀಣೆಯ ಬೆಡಗು ನಾದದ ಸೊಬಗು, ಅರಿವಿನ ಶಿಖರ, ಲಯ ಸಂಭ್ರಮ, ಹಾಡು ಹೇಳಿದ ಕಥೆ, ತೋರಣ ಹೂರಣ, ಕನ್ನಡ ಭಾರತಿ, ಡಾಕ್ಟರ್ ಸಮಯ, ಮಹಿಳಾ ರಂಗ, ಯುವ ರಂಗ, ಬಾಲಜಗತ್, ರಸಪ್ರಶ್ನೆ, ರಂಗಬಾನುಲಿ, ಚಿಲಿಪಿಲಿ, ಚಟ್‌ಪಟ್ ಚುರುಮುರಿ, ಉದ್ಯೋಗ ವಾರ್ತೆ, ಕೃಷಿ ರಂಗ, ಮಹಿಳಾ ರಂಗ, ಕೇಳುಗರ ಕೋರಿಕೆ–ನಿಮ್ಮ ಮೆಚ್ಚಿನ ಚಿತ್ರಗೀತೆಗಳು, ನಾಟಕಗಳು, ಚಲನಚಿತ್ರ ಧ್ವನಿವಾಹಿನಿ, ಮಿತ್ರ ಮಾಧುರ್ಯ, ಗೇಮ್ ಶೋ, ಕಥೆಯಲ್ಲಿದೆ ಉತ್ತರ, ಕೇಳುಗರೊಂದಿಗೆ ಅನಿಸಿಕೆ, ಕಾಡಿನ ರೋಚಕ ಕಥೆಗಳು, ಸಂಗೀತ ಸಂಭ್ರಮ, ಟ್ರಿಣ್ ಟ್ರಿಣ್ ಸೈಕಲ್ ಸವಾರಿ–ಮಾತಿನ ಲಹರಿ, ನಮ್ಮೂರ ಹೆಸರು, ಕಾದಂಬರಿ ವಿಹಾರ, ಹೀಗಿದೆ ನಮ್ ಜೋಡಿ, ಹಾದಿಯಲ್ಲಿ ಕಂಡ ಮುಖ, ಕೇಳಿ ಗಿಳಿಗಳೇ, ಮಕ್ಕಳ ಮಂಟಪ, ನೆನಪಿನಂಗಳ, ಸಂಧ್ಯಾರಾಗ, ವೈದ್ಯರೊಂದಿಗೆ ಭೇಟಿ, ಆರೋಗ್ಯ ಕಾರ್ಯಕ್ರಮ, ನೇರ ಫೋನ್‌ಇನ್, ವಾರ್ತೆಗಳು ಸೇರಿದಂತೆ ವಿಭಿನ್ನ ಕಾರ್ಯಕ್ರಮಗಳ ಜೊತೆಗೆ ಕ್ರಿಕೆಟ್ ಕಾಮೆಂಟರಿ, ದಸರಾ ವೀಕ್ಷಕ ವಿವರಣೆ ಜನಪ್ರಿಯವಾಗಿವೆ.

ಮೈಸೂರು ಬ್ರ್ಯಾಂಡ್: ಮೈಸೂರು ದಸರಾ, ಮೈಸೂರು ಮಲ್ಲಿಗೆ, ಮೈಸೂರು ಶ್ರೀಗಂಧ, ಮೈಸೂರು ಪಾಕ್, ಮೈಸೂರು ರೇಷ್ಮೆಯಂತೆಯೇ ಮೈಸೂರು ಆಕಾಶವಾಣಿಯೂ ಬ್ರ್ಯಾಂಡ್ ಆಗಿದೆ. ಕೆಆರ್‌ಎಸ್ ರಸ್ತೆ ಯಾದವಗಿರಿಯ ಪಾರಂಪರಿಕ ಕಟ್ಟಡದಲ್ಲಿರುವ ಮೈಸೂರು ಆಕಾಶವಾಣಿ ಕೇಂದ್ರದಿಂದ ಮುಂಜಾನೆ 5.55 ರಿಂದ ರಾತ್ರಿ 11ರವರೆಗೆ ನಿರಂತರ ಕಾರ್ಯಕ್ರಮಗಳ ಪ್ರಸಾರವಾಗುತ್ತಿವೆ. ಪ್ರಚಲಿತ ಸುದ್ದಿಗಳ ಮೊದಲ ಸಂಗಾತಿ ರೇಡಿಯೋ ಇಂದಿಗೂ ವಿಶ್ವಾಸಾರ್ಹ. ಮನರಂಜನೆ, ಮಾಹಿತಿ, ಕಲೆ–ಸಂಸ್ಕೃತಿ ಸಂರಕ್ಷಣೆ ಜೊತೆಗೆ ಉತ್ತಮ ಪರಿಸರ, ಆರೋಗ್ಯ, ಸ್ವಚ್ಛತೆ, ಮತದಾನದ ಬಗ್ಗೆಯೂ ಜಾಗೃತಿ ಮೂಡಿಸುವ ಸಾಮಾಜಿಕ ಜವಾಬ್ದಾರಿಯನ್ನೂ ಮರೆತಿಲ್ಲ. ಕೋವಿಡ್ ಕಾಲದಲ್ಲೂ ಮೈಸೂರು ಆಕಾಶವಾಣಿ ಜನತೆಗೆ ನೆರವಾಗಿದೆ. ನೆಚ್ಚಿನ ಕೇಳುಗರೂ ಬಳಗ ರಚಿಸಿಕೊಂಡು ಆಕಾಶವಾಣಿ ಮುಖ್ಯಸ್ಥರ ಸಹಕಾರದೊಂದಿಗೆ ಹಲವು ಸಾರ್ವಜನಿಕ ಕಾರ್ಯಕ್ರಮಗಳನ್ನು ಕೂಡ ಸಂಘಟಿಸುತ್ತಿದ್ದಾರೆ.





ಮೈಸೂರು ಆಕಾಶವಾಣಿ 90ರ ಸಂಭ್ರಮದ ಹಿನ್ನೆಲೆಯಲ್ಲಿ ಮಂಗಳವಾರ ಕೇಂದ್ರದ ಆವರಣದಲ್ಲಿ ಗಿಡ ನೆಡಲಾಯಿತು.

ಅನರ್ಘ್ಯ ರತ್ನಗಳ ಭಂಡಾರ

ಸಾಹಿತಿಗಳಾದ ಕುವೆಂಪು, ಎ.ಎನ್.ಮೂರ್ತಿರಾವ್, ಪುತಿನ, ಆರ್.ಕೆ.ನಾರಾಯಣ್, ರಾಜಾರಾವ್, ಹಾ.ಮಾ.ನಾಯಕ, ಎಚ್ಚೆಸ್ಕೆ, ಎಸ್.ಎಲ್.ಭೈರಪ್ಪ, ಯು.ಆರ್.ಅನಂತಮೂರ್ತಿ, ಸೇನಾನಿ ಜನರಲ್ ಕಾರ್ಯಪ್ಪ, ವಿಜ್ಞಾನಿ ರಾಜಾರಾಮಣ್ಣ, ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್, ಸಂಗೀತಗಾರರಾದ ಆರ್.ಕೆ.ಶ್ರೀಕಂಠನ್, ಟಿ.ನಾಗಮ್ಮ, ತಿಟ್ಟೆ ಕೃಷ್ಣ ಅಯ್ಯಂಗಾರ್, ಚಲನಚಿತ್ರ ನಿರ್ದೇಶಕ ಜಿ.ವಿ.ಅಯ್ಯರ್, ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಎನ್.ಜೋಯಿಸ್ ಸೇರಿದಂತೆ ಹೆಸರಾಂತ ನಾಟಕಕಾರರು, ಸಂಗೀತಗಾರರು, ಸಾಹಿತಿಗಳು, ವಿಜ್ಞಾನಿಗಳ ಸಂದರ್ಶನಗಳನ್ನು ಆಕಾಶವಾಣಿ ಕೇಂದ್ರ ದಾಖಲು ಮಾಡಿದೆ. ನಾ.ಕಸ್ತೂರಿ, ಹೆಚ್.ಕೆ.ರಂಗನಾಥ್, ಎಸ್.ಪುಟ್ಟತಾಯಮ್ಮ, ವೈ.ವೆಂಕಟರಾಮಯ್ಯ, ದೇಜಗೌ, ವಿ.ಬಸವರಾಜ್, ತ.ಸು.ಶಾಮರಾವ್, ಸರ್ ಸಿ.ವಿ.ರಾಮನ್, ತರಾಸು, ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರಂತಹ ಗಣ್ಯರ ಭಾಷಣಗಳು ಆಕಾಶವಾಣಿಯ ಭಂಡಾರದಲ್ಲಿವೆ. ಜಿ.ಪಿ.ರಾಜರತ್ನಂ, ಜಿ.ವೆಂಕಟಸುಬ್ಬಯ್ಯ, ಪ್ರಭುಶಂಕರ, ಕೆ.ಬಿ.ಪ್ರಭುಪ್ರಸಾದ್, ನ.ರತ್ನ, ಎಂ.ಎಸ್.ನಾಗರಾಜರಾವ್, ಬಿ.ವಿ.ಸುಂದರೇಶನ್, ಸಿ.ನಾಗಣ್ಣ, ಡಾ.ಸಿ.ಶರತ್ ಕುಮಾರ್ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರು ಆಕಾಶವಾಣಿಯೊಂದಿಗಿನ ತಮ್ಮ ಮಧುರ ಬಾಂಧವ್ಯವನ್ನು ನೆನೆದಿದ್ದಾರೆ.

90ರ ಸಂಭ್ರಮದ ಅರ್ಥಪೂರ್ಣ ಆಚರಣೆ

ಮೈಸೂರು: 'ಮೈಸೂರು ಆಕಾಶವಾಣಿ'ಯ 90ರ ಸಂಭ್ರಮವನ್ನು ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು. ಆಕಾಶವಾಣಿ ಸಂಸ್ಥಾಪಕ ಎಂ.ವಿ.ಗೋಪಾಲಸ್ವಾಮಿ ಅವರ ಮರಿಮೊಮ್ಮಗಳು ಪವಿತ್ರಾ ಹಾಗೂ ನಾ.ಕಸ್ತೂರಿ ಅವರ ಮೊಮ್ಮಗ ರಾಜಾರಾಂ ಅವರು ಯಾದವಗಿರಿಯ ಆಕಾಶವಾಣಿ ಕೇಂದ್ರದ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶೇಷ ಕಾರ್ಯಕ್ರಮಗಳಿಗೆ ವಿಧ್ಯುಕ್ತ ಚಾಲನೆ ನೀಡಿದರು. ಈ ವೇಳೆ ಮೈಸೂರು ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್.ಉಮೇಶ್ ಮಾತನಾಡಿ, ಗೋಪಾಲಸ್ವಾಮಿ ಅವರ ನೇತೃತ್ವದಲ್ಲಿ 1935ರ ಸೆ.10ರಂದು ಆರಂಭವಾದ ಮೈಸೂರು ಆಕಾಶವಾಣಿಯನ್ನು ಮೈಸೂರು ಸಂಸ್ಥಾನ ಮುಂದುವರೆಸಿತು. ನಂತರ ಕೇಂದ್ರ ಸರ್ಕಾರ ಜವಾಬ್ದಾರಿ ತೆಗೆದುಕೊಂಡಿತು. ರಾಷ್ಟ್ರಕವಿ ಕುವೆಂಪು ಅವರ ಕಾವ್ಯ ವಾಚನದ ಮೂಲಕ ಆರಂಭವಾದ ಕಾರ್ಯಕ್ರಮದ ಸರಣಿ ಅನೇಕ ಸಾಹಿತಿಗಳಿಗೆ ವೇದಿಕೆ ನೀಡಿದೆ. ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಇಂದಿಗೂ ಜನಪ್ರೀತಿ ಉಳಿಸಿಕೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕರಾದ ಅಬ್ದುಲ್ ರಶೀದ್, ಟಿ.ಬಿ.ವಿದ್ಯಾಶಂಕರ್, ಪ್ರಸಾರ ನಿರ್ವಾಹಕ ಬಿ.ಶಾಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

90ರ ವರ್ಷಾಚರಣೆ ಹಿನ್ನೆಲೆಯಲ್ಲಿ ಇಂದು ದಿನವಿಡೀ ವಿಶೇಷ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು.

ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಗಾಯನ; ಸಂಗೀತಾಸಕ್ತರ ಮೋಡಿ



63ನೇ ಪಾರಂಪರಿಕ ಸಂಗೀತೋತ್ಸವದ ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರು ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿಕೊಟ್ಟರು.

ಮೈಸೂರು, ಸೆ.10(ಎಸ್‌ಪಿಎನ್)– ಮೈಸೂರು ವಿವಿ ಮೊಹಲ್ಲಾ 8ನೇ ಅಡ್ಡರಸ್ತೆಯಲ್ಲಿ ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದ 63ನೇ ಪಾರಂಪರಿಕ ಸಂಗೀತೋತ್ಸವದ ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರು ಶಾಸ್ತ್ರೀಯ ಸಂಗೀತ ನೆರೆದವರಿಗೆ ಮುದ ನೀಡಿತು.

ಮೊದಲಿಗೆ ಗಣಪತಿ ಕುರಿತು ವಾತಾಪಿ ಗಣಪತಿ ಗಾಯನದ ಮೂಲಕ ಸಂಗೀತ ಕಛೇರಿ ಆರಂಭಿಸಿದ ವಿದ್ವಾನ್ ಹರೀಶ್, ನಂತರ ಎಂಥ ಮುದ್ದು, ಎಂಥ ಸೊಗಸು' ಹಾಗೂ ಕರ್ನಾಟಕ ಸಂಗೀತ ಮಜಲುಗಳನ್ನು ಮನೋಜ್ಞವಾಗಿ ಹಾಡಿ ಸಭಿಕರನ್ನು ರಂಜಿಸಿದರು. ಈ ವೇಳೆ ವಿದ್ವಾನ್ ಕಾರ್ತಿಕ್ ನಾಗರಾಜ್ (ವಯೋಲಿನ್), ವಿದ್ವಾನ್ ಉಮಯಾಳಪುರಂ ಸಿವರಾಮನ್ (ಮೃದಂಗ), ವಿದ್ವಾನ್ ಅರುಣ್ ಕುಮಾರ್ (ರಿದಂ ಪ್ಯಾಡ್) ನುಡಿಸಿ, ಹರೀಶ್ ಶಿವರಾಮಕೃಷ್ಣನ್ ಅವರ ಗಾಯನಕ್ಕೆ ಸಾಥ್ ನೀಡಿದರು. ಇದಕ್ಕೂ ಮುನ್ನ 'ದೇವೀ ಭಾಗವತ' ಕಾವ್ಯವನ್ನು ವಿದುಷಿ ಧರಿಶ್ರೀ ಆನಂದರಾವ್ ವಾಚನ ಮಾಡಿದರು. ಈ ಕುರಿತು ಡಾ.ಎನ್.ಕೆ.ರಾಮಶೇಷನ್ ವ್ಯಾಖ್ಯಾನಿಸಿದರು.

ಮೈಸೂರು ರೋಟರಿ ಐವರಿ ಸಿಟಿಯಿಂದ ಮಾರ್ಗದರ್ಶಕ ಪ್ರಶಸ್ತಿ ಪ್ರದಾನ



ಮೈಸೂರು ನಗರದ ರೋಟರಿ ಐವರಿ ಸಿಟಿ ಅಫ್ ಮೈಸೂರು ವತಿಯಿಂದ ಜಯಲಕ್ಷ್ಮೀಪುರಂನ ಸತ್ಯ ಸಾಯಿಬಾಬಾ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷ ಪ್ರೊ.ಕೆ.ಬಿ.ಪ್ರಭುಪ್ರಸಾದ್ ಅವರಿಗೆ ಮಾರ್ಗದರ್ಶಕ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಈ ವೇಳೆ ಕಾಮಾಕ್ಷಿ ಆಸ್ಪತ್ರೆಯ ಮೂತ್ರಶಾಸ್ತ್ರ ವಿಭಾಗದ ತಜ್ಞ ಡಾ.ಪ್ರಕಾಶ್ ಕೆ.ಪ್ರಭು ಅವರಿಗೆ ರೋಟರಿ ಐವರಿ ಸಿಟಿಯ ಗೌರವ ಸದಸ್ಯತ್ವ ನೀಡಿ, ಸನ್ಮಾನಿಸಲಾಯಿತು. ರೋಟರಿ ಐವರಿ ಸಿಟಿ ಅಧ್ಯಕ್ಷ ರೊ.ಕೆ.ಶಶಿಧರ್, ಮಾಜಿ ಅಧ್ಯಕ್ಷ ರೊ.ಸಂಜಯ್ ಅರಸ್, ರೊ.ಸುನಿಲ್ ಬಾಳಿಗ, ಕಾರ್ಯದರ್ಶಿ ರೊ.ಶೋಭ ನಾಗರಾಜ್, ರೊ.ಎಂ.ಕೆ.ಸಚ್ಚಿದಾನಂದನ್, ರೊ.ಎಂ.ಕೆ.ಮುಖೇಶ್, ರೊ.ಇಫ್ತಿಕರ್ ಅಹಮದ್, ರೊ.ಕೇಶವ್ ಬಿ.ಕಾಂಚನ್ ಮತ್ತಿತರರು ಉಪಸ್ಥಿತರಿದ್ದರು.

ದಸರಾ: ಕೈ ತೋಟಗಳ ಸ್ಪರ್ಧೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.10–ತೋಟಗಾರಿಕೆ ಇಲಾಖೆ, ಜಿಲ್ಲಾ ತೋಟಗಾರಿಕೆ ಸಂಘ, ಕರ್ಜನ್ ಪಾರ್ಕ್ ಸಂಯುಕ್ತಾಶ್ರಯದಲ್ಲಿ 2024–25ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನದ ಭಾಗವಾಗಿ ಮೈಸೂರು ನಗರ ವ್ಯಾಪ್ತಿಯ ಸಾರ್ವಜನಿಕ, ಖಾಸಗಿ ಮನೆ, ಕೈಗಾರಿಕೆ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಡಳಿತಾಧಿಕಾರಿ ಕಚೇರಿ, ಆಸ್ಪತ್ರೆ ಅಪಾರ್ಟ್‌ಮೆಂಟ್, ಹೋಟೆಲ್ ಕೈ ತೋಟಗಳು ಸೇರಿದಂತೆ ಇತರೆ ಕೈ ತೋಟಗಳ ಸ್ಪರ್ಧೆಗೆ ಅರ್ಜಿ ಆಹ್ವಾನಿಸಲಾಗಿದೆ. ಕರ್ಜನ್ ಪಾರ್ಕ್ ಆವರಣದಲ್ಲಿರುವ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ಸೆ.2ರಿಂದ 20ರವರೆಗೆ ಅರ್ಜಿಗಳನ್ನು ವಿತರಿಸಲಾಗುವುದು. ಆಸಕ್ತರು ನಿಗದಿತ ಶುಲ್ಕವನ್ನು ಗೂಗಲ್ ಪೇ/ಫೋನ್ ಪೇ/ಚೆಕ್/ಡಿಡಿ/ಅಥವಾ ಇನ್ಯಾವುದೇ ರೀತಿಯ ಇ–ಪೇಮೆಂಟ್ ಮೋಡ್ ಮೂಲಕ ಮಾತ್ರ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿ ಹೆಸರು ನೋಂದಾಯಿಸಿಕೊಳ್ಳಬಹುದು. ದೂ.ಸಂ: 0821–2977572 ಅನ್ನು ಸಂಪರ್ಕಿಸಬಹುದು.

ರೈಲ್ವೆ ನಿಲ್ದಾಣ ಆಹಾರ ಮಳಿಗೆಗಳ ಆಹಾರ ಗುಣಮಟ್ಟ ತಪಾಸಣೆ

ಮೈಸೂರು, ಸೆ.10(ಬಿಎಲ್‌ಯು)– ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ರಾಜ್ಯದ ಎಲ್ಲಾ ರೈಲ್ವೆ ನಿಲ್ದಾಣಗಳ ಆಹಾರ ಮಳಿಗೆಗಳಲ್ಲಿ ಸೆಪ್ಟೆಂಬರ್ 12ರಂದು ಆಹಾರ ಗುಣಮಟ್ಟ ಪರೀಕ್ಷೆ ಮಾಡಲಾಗುವುದು.

ಅಂದು ರಾಜ್ಯಾದ್ಯಂತ ರೈಲ್ವೆ ನಿಲ್ದಾಣದಲ್ಲಿರುವ ಆಹಾರ ಮಳಿಗೆಗಳ ತಪಾಸಣೆ ನಡೆಸುವ ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದೆ. ಆಹಾರ ಸುರಕ್ಷತಾಧಿಕಾರಿಗಳು ರೈಲ್ವೆ ನಿಲ್ದಾಣದ ಆಹಾರ ಮಳಿಗೆಗಳ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪರೀಕ್ಷೆ ಮಾಡಲಿದ್ದಾರೆ. ಈ ವೇಳೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ನಿಯಮಾವಳಿ ಪಾಲಿಸಲಾಗುತ್ತಿದೆಯೇ ಎಂಬ ಬಗ್ಗೆ ತಪಾಸಣೆ ಕೈಗೊಳ್ಳಲಿದ್ದಾರೆ. ತಪಾಸಣೆ ವೇಳೆ ಲೋಪ ಕಂಡು ಬಂದರೆ ನಿಯಮಾನುಸಾರ ಕ್ರಮ ಕೈಗೊಂಡು ಕೇಂದ್ರ ಕಚೇರಿಗೆ ವರದಿ ಸಲ್ಲಿಸುವಂತೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತರು ಇಲಾಖೆಯ ಜಿಲ್ಲಾ ಅಂಕಿತಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಯುವ ಜನಾಂಗದ ಸಮರ್ಪಕ ಬಳಕೆಯಿಂದ ಸದೃಢ ಭಾರತ ನಿರ್ಮಾಣ ಸಾಧ್ಯ

ಉಪನ್ಯಾಸಕಿ ಡಾ.ನಮಿತಾ ತಿಮ್ಮಯ್ಯ ಅಭಿಮತ

ಮೈಸೂರು, ಸೆ. 10– ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಡಾ.ನವಿತಾ ತಿಮ್ಮಯ್ಯ ಅವರು, ಪ್ರಪಂಚದ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದೆ ಮತ್ತು ಅದರ ಒಟ್ಟು ದೇಶೀಯ ಉತ್ಪನ್ನ $3.41 ಟ್ರಿಲಿಯನ್ ಆಗಿದ್ದು, ಭಾರತದ ಆರ್ಥಿಕ ಬೆಳವಣಿಗೆಗೆ ಇದು ದೊಡ್ಡ ಲಾಭಾಂಶವಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಭಾರತದಲ್ಲಿ ಯುವ ಪೀಳಿಗೆ ಎದುರಿಸುತ್ತಿರುವ ನಿರುದ್ಯೋಗದ ಸನ್ನಿವೇಶವನ್ನು ತಗ್ಗಿಸಲು ಸೂಕ್ತವಾದ ಶಿಕ್ಷಣ, ತರಬೇತಿ ಮತ್ತು ಸಂಶೋಧನಾ ಅವಕಾಶಗಳನ್ನು ವಿಸ್ತರಿಸಲು ಹೆಚ್ಚು ಒತ್ತುಕೊಡಬೇಕೆಂದರು. ಬೆಳೆಯುತ್ತಿರುವ ಜನಸಂಖ್ಯೆಯೊಂದಿಗೆ ಭಾರತ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು, ಕೃಷಿ ಉತ್ಪಾದನೆ, ಕೈಗಾರಿಕೆ ಅಭಿವೃದ್ಧಿಯನ್ನು ಸೇನಾ ಕ್ಷೇತ್ರದ ಜೊತೆಯಲ್ಲಿ ಬಲಪಡಿಸಬೇಕೆಂದರು. ಹಾಗೆ ಬಡತನ ಮತ್ತು ನಿರುದ್ಯೋಗಗಳನ್ನು ತಗ್ಗಿಸಲು ಎಂಎಸ್‌ಎಂಇ ಕ್ಷೇತ್ರಗಳನ್ನು ವಿಸ್ತರಿಸಬೇಕು ಮತ್ತು ಅದರ ಪ್ರಯೋಜನಗಳನ್ನು ಯುವ ಜನಾಂಗಕ್ಕೆ ತಲುಪಿಸುವಂತಾಗಬೇಕೆಂದು ಅಭಿಪ್ರಾಯಪಟ್ಟರು. ಬಲಿಷ್ಠ ಜೀವನ ಮಟ್ಟ, ಆರೋಗ್ಯ, ಶಿಕ್ಷಣ, ತರಬೇತಿ, ಡಿಜಿಟಲ್ ಸರಕು ಸೇವೆಗಳ ವ್ಯಾಪಾರದ ವಿಸ್ತರಣೆ ಇವೆಲ್ಲವೂ ಭಾರತದ ಆರ್ಥಿಕತೆಯ ಸಾಧನಗಳಾಗಬೇಕೆಂದು ವಿವರಿಸಿದರು.



ವಿಶ್ವದಲ್ಲಿ 4ನೇ ದೊಡ್ಡ ಆರ್ಥಿಕತೆಯಾಗಿ ಭಾರತ ಇಂದು ಹೊರಹೊಮ್ಮಿದ್ದು, ಸ್ವದೇಶಿ ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಬಡತನ, ನಿರುದ್ಯೋಗ ಮತ್ತು ಅಸಮಾನತೆಯ ಪ್ರಮಾಣಗಳನ್ನು ತಗ್ಗಿಸುವಲ್ಲಿ ಭಾರತದ ಆರ್ಥಿಕತೆ ದಾಪುಗಾಲು ಇಡುತ್ತಿದೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ವೆಂಕಟಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕರಾದ ಡಾ.ಪುಷ್ಪರಾಣಿ ಪಿ.ಜಿ., ಚಲುವೇಗೌಡ ಎಸ್.ಎಂ ಉಪಸ್ಥಿತರಿದ್ದರು.

ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿಗೆ ಕಾರ್ಯಪ್ರವೃತ್ತರಾಗಬೇಕು

ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ

ಮೈಸೂರು,ಸೆ.10(ಪಿಎಂ)– ಜಿಲ್ಲೆಯಲ್ಲಿ ಕಳೆದ ಬಾರಿಗಿಂತಲೂ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಮಾಡಿಸಿ, ಪಟ್ಟಿಯನ್ನು ರಾಜ್ಯ ಘಟಕಕ್ಕೆ ಕಳುಹಿಸಿಕೊಡುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗಬೇಕು ಎಂದು ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೇಳಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸದಸ್ಯತ್ವ ಅಭಿಯಾನ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಸದಸ್ಯತ್ವ ಅಭಿಯಾನ ನಡೆಯುತ್ತಿದ್ದು, ಅಂತೆಯೇ ಯುವ ಮೋರ್ಚಾ ಪದಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗಳಲ್ಲಿ ಟೋಲ್‌ಫ್ರೀ (88000 02024) ನಂಬರ್‌ಗೆ ಮಿಸ್ಡ್‌ಕಾಲ್ ಕೊಡಿಸುವ ಮೂಲಕ ಯುವಜನರಿಗೆ ಬಿಜೆಪಿಗೆ ಸದಸ್ಯತ್ವ ಮಾಡಿಸುವಲ್ಲಿ ಕಾರ್ಯಪ್ರವೃತ್ತರಾಗಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ವಿಕಸಿತ ಭಾರತದ ಪರಿಕಲ್ಪನೆ ದೊಡ್ಡ ಕನಸು ನನಸಾದರೆ ನಮ್ಮ ಭಾರತ ವಿಶ್ವಗುರು ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ಕಳೆದೆರಡು ಅವಧಿಯಲ್ಲಿ ಪ್ರಧಾನಿ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಹಾಗೂ ಜನಪರ ಯೋಜನೆಗಳಿಗೆ ನಾಂದಿ ಹಾಡಿತು. ಇದರಿಂದ 2024ರ ಲೋಕಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ದೇಶದ ಜನತೆಯ ಆಶೀರ್ವಾದದಿಂದ ನರೇಂದ್ರ ಮೋದಿ ಮೂರನೇ ಬಾರಿಗೆ ಭಾರತದ ಪ್ರಧಾನಿಯಾದರು. ಆ ಮೂಲಕ ಅವರ ನಾಯಕತ್ವ ಮತ್ತಷ್ಟು ಗಟ್ಟಿಗೊಂಡಿತು ಎಂದರು. ದೇಶದ ಆರ್ಥಿಕ ಅಭಿವೃದ್ಧಿ, ರಾಷ್ಟ್ರೀಯ ಭದ್ರತೆ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ಆದ್ಯತೆ ನೀಡಿದೆ. ರಾಜ್ಯದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರ ಹೆಚ್ಚು ಕಾಲ ಉಳಿಯುವುದಿಲ್ಲ. ಹಾಗಾಗಿ ನಮ್ಮ ನಾಯಕರಾದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಪಕ್ಷ ಸಂಘಟಿಸಲು ಶ್ರಮಿಸಬೇಕು. ಈಗಾಗಲೇ ರಾಜ್ಯದ ಜನ ಬಿ.ವೈ.ವಿಜಯೇಂದ್ರ ಅವರ ಸಂಘಟನಾ ಸಾಮರ್ಥ್ಯ ಮೆಚ್ಚಿ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು. ಯುವ ಮೋರ್ಚಾ ರಾಜ್ಯ ಪ್ರಕೋಷ್ಠ ಪ್ರತಿನಿಧಿ ಪ್ರಣಯ್.ಎಂ ಹಂಗಳ ಮಾತನಾಡಿ, ನಾವೆಲ್ಲರೂ ಅತೀ ಹೆಚ್ಚು ಯುವಕರನ್ನು ಸದಸ್ಯತ್ವ ಮಾಡಿಸುವ ಮೂಲಕ ಯುವ ಮೋರ್ಚಾ ಸಾಮರ್ಥ್ಯ ತೋರಿಸಬೇಕು. ಇದರೊಟ್ಟಿಗೆ ಪಕ್ಷದ ಮುಖ್ಯ ಕಮಿಟಿ ಪದಾಧಿಕಾರಿಗಳ ಸಲಹೆಗಳು ಹಾಗೂ ಅವರ ಸೂಚನೆಗಳಂತೆ ನಾವೆಲ್ಲರೂ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಮಾತನಾಡಿ, ಪಕ್ಷ ನೀಡಿರುವ ಜವಾಬ್ದಾರಿಯನ್ನು ನಿರೀಕ್ಷೆಗೂ ಮೀರಿ ನಿರ್ವಹಿಸಬೇಕು. ಪಕ್ಷದ ಜಿಲ್ಲಾ ಪದಾಧಿಕಾರಿಗಳ ಮಾರ್ಗದರ್ಶನದಲ್ಲಿ ಸದಸ್ಯತ್ವ ಅಭಿಯಾನದಲ್ಲಿ ಕಾರ್ಯನಿರ್ವಹಿಸಬೇಕಿದೆ. ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರ ನೇತೃತ್ವದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದರು. ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿವೇಕ್, ಮಧುರಾಜ್, ಎಲ್ಲಾ ಮಂಡಲದ ಅಧ್ಯಕ್ಷರು, ಪದಾಧಿಕಾರಿಗಳು ಹಾಜರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸದಸ್ಯತ್ವ ಅಭಿಯಾನ ಕಾರ್ಯಾಗಾರ ನಡೆಯಿತು

ರಾಜ್ಯಮಟ್ಟದ ನಾದ ಕಿಶೋರೋತ್ಸವ ಸ್ಪರ್ಧೆ ವಿಜೇತರು

ಮೈಸೂರು,ಸೆ.10–ಮೈಸೂರಿನ ಗಾನಕಮಲ ಭಾಸ್ಕರ ಜಿ.ಆರ್.ದಾಸಪ್ಪ ಭವನದಲ್ಲಿ ಶ್ರೀ ನಾದಬ್ರಹ್ಮ ಸಂಗೀತ ಸಭಾ ನಡೆಸಿದ ರಾಜ್ಯಮಟ್ಟದ ನಾದ ಕಿಶೋರೋತ್ಸವ ಸ್ಪರ್ಧೆಯಲ್ಲಿ ಕೆಳಕಂಡವರು ಬಹುಮಾನ ಪಡೆದಿದ್ದಾರೆ. ವಿದುಷಿ ಅಕ್ಷತಾ ರುದ್ರಪಟ್ಟಣ (ಕರ್ನಾಟಕ ಶಾಸ್ತ್ರೀಯ ಗಾಯನ)– ಪ್ರಥಮ 'ನಾದಕಿಶೋರಿ'; ವಿದುಷಿ ಪ್ರಜ್ಞಾ ಅಡಿತ (ಕರ್ನಾಟಕ ಶಾಸ್ತ್ರೀಯ ಗಾಯನ)– ದ್ವಿತೀಯ, ವಿದ್ವಾನ್ ಕೆ.ಪಿ.ಪ್ರಣವ್ ಮತ್ತು ವಿದ್ವಾನ್ ಸಾತ್ವಿಕ್ ಎಸ್.ಎಸ್. (ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ)– ತೃತೀಯ ಬಹುಮಾನ; ಟಿ.ಆರ್.ಕೆ.ಬ್ರದರ್ಸ್ ವಿದ್ವಾನ್ ಆರ್.ವಿ.ಅಕ್ಷಯ್ ಮತ್ತು ಆರ್.ವಿ.ಅಭಿಷೇಕ್–ಬಳ್ಳಾರಿ ಎಂ.ವೆಂಕಟೇಶಾಚಾರ್ ಮೆಮೋರಿಯಲ್ ಅತ್ಯುತ್ತಮ ಗಾಯಕ ಪ್ರಶಸ್ತಿ; ವಿದ್ವಾನ್ ಆದಿತ್ಯ ಮಣಿ ಕರ್ಣಿಕೆ–ಅತ್ಯುತ್ತಮ ಪಿಟೀಲು ವಾದಕ; ವಿದ್ವಾನ್ ಪ್ರಣವ್ ಸುಬ್ರಹ್ಮಣ್ಯ–ಅತ್ಯುತ್ತಮ ಮೃದಂಗ ವಾದಕ. ಡಾ.ಮಂಜುಳಾ ಶ್ರೀರಾಮ್, ವಿದುಷಿ ಕೆ.ಗೌರಿ, ಡಾ.ಪದ್ಮಾವತಿ ನರಸಿಂಹನ್ ತೀರ್ಪುಗಾರರಾಗಿದ್ದರು.

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಖಂಡಿಸಿ ಪ್ರತಿಭಟನೆ

ತಿ.ನರಸೀಪುರ, ಸೆ.10– ಹಿಂದುಳಿದ ವರ್ಗಗಳ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ ಎಂದು ಖಂಡಿಸಿ ಪಟ್ಟಣದಲ್ಲಿ ಮಂಗಳವಾರ ಕರ್ನಾಟಕ ಪ್ರದೇಶ ದಲಿತ ಜಾಗೃತ ಸಮಿತಿ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ಲೋಕೋಪಯೋಗಿ ಅತಿಥಿ ಗೃಹದಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು, ತಾಲೂಕು ಕಚೇರಿಗೆ ತೆರಳಿ ಒಂದು ಗಂಟೆಗೂ ಹೆಚ್ಚು ಕಾಲ ಧರಣಿ ನಡೆಸಿ, ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದರು. ನಂತರ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.


ಕರ್ನಾಟಕ ಪ್ರದೇಶ ದಲಿತ ಜಾಗೃತಿ ಸಮಿತಿ ಸದಸ್ಯರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ತಾಪಂ ಮಾಜಿ ಅಧ್ಯಕ್ಷ, ಭೂ ನ್ಯಾಯ ಮಂಡಳಿ ಸದಸ್ಯ ಅಂದಾನಿ ಮಾತನಾಡಿ, ಸಂವಿಧಾನಕ್ಕೆ ವಿಧೇಯರಾಗಿರುವ ಸಿದ್ದರಾಮಯ್ಯ ಅವರು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಟ್ಟ ಕಳಂಕರಹಿತ ರಾಜಕಾರಣಿ. ಮುಡಾ ನಿವೇಶನ ಹಂಚಿಕೆಯಲ್ಲಿ ಯಾವುದೇ ಸಂಬಂಧವಿಲ್ಲದಿದ್ದರೂ ಸಿಎಂ ಹುದ್ದೆಯಿಂದ ಕೆಳಗಿಳಿಸಲು ಕೇಂದ್ರ ಸರ್ಕಾರ ಸಾಂವಿಧಾನಿಕ ಮಾನ್ಯತೆ ಇರುವ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇಂತಹ ಸಂದರ್ಭ ಕೋಮುವಾದಿಗಳ ಹುನ್ನಾರದ ವಿರುದ್ಧ ಹೋರಾಟ ನಡೆಸಬೇಕು ಎಂದು ತಿಳಿಸಿದರು.

ಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್ ಮಾತನಾಡಿ, ವಿಪಕ್ಷಗಳು ದೂರಿರುವಂತೆ ಮುಡಾ ಹಗರಣದಲ್ಲಿ ಸಿದ್ದರಾಮಯ್ಯನವರ ಪಾತ್ರವಿಲ್ಲ. ಅವರನ್ನು ಕಾನೂನಿನ ಕುಣಿಕೆಗೆ ಸಿಕ್ಕಿಸುವ ಯಾವ ಸಾಕ್ಷ್ಯಗಳು ಇಲ್ಲದಿದ್ದರೂ ಅನವಶ್ಯಕವಾಗಿ ಸಿದ್ದರಾಮಯ್ಯರನ್ನು ಮೂಲೆಗುಂಪು ಮಾಡಿ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಹಾಗೂ ಚಾರಿತ್ರ್ಯವಧೆ ಮಾಡುವ ಮೂರ್ಖತನದ ಕೆಲಸವನ್ನು ವಿಪಕ್ಷಗಳು ರಾಜ್ಯಪಾಲರ ಮೂಲಕ ಮಾಡಿಸುತ್ತಿವೆ. ಸಮರ್ಥ ನಾಯಕತ್ವಕ್ಕೆ ಕುಂದು ತರುವ ಕೆಲಸ ಮಾಡುವುದನ್ನು ರಾಜ್ಯದ ಜನತೆ ಎಂದಿಗೂ ಸಹಿಸುವುದಿಲ್ಲ. ಹಿಂದುಳಿದವರ, ದೀನ ದಲಿತರ ಪರವಾಗಿ ಧ್ವನಿ ಎತ್ತುತ್ತಾರೆ ಎಂಬ ಕಾರಣಕ್ಕೆ ಈ ರೀತಿ ಬೆನ್ನ ಹಿಂದೆ ಹಲ್ಲೆ ನಡೆಸುವ ಪ್ರಯತ್ನವನ್ನು ಖಂಡಿಸುವುದಾಗಿ ಕಿಡಿಕಾರಿದರು.

ಪ್ರತಿಭಟನೆಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಕಿರಗಸೂರು ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ನಿಂಗೇಗೌಡನಹುಂಡಿ ಪಿಎಸಿಸಿ ಅಧ್ಯಕ್ಷ ರೇವಣ್ಣ, ತಾಪಂ ಮಾಜಿ ಸದಸ್ಯ ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಚುಂಚೇಗೌಡ, ಮಾಜಿ ಸದಸ್ಯ ಸಿದ್ದರಾಜು, ಮುದ್ದ ಬೀರನಹುಂಡಿ ಗುರುಸ್ವಾಮಿ, ತಾಯೂರು ಮಧುಸೂದನ್, ಡಿ.ಆರ್.ಮೂರ್ತಿ, ಗುತ್ತಿಗೆದಾರ ಕೃಷ್ಣಪ್ಪ ಎಂ.ಎಂ.ಜಗದೀಶ್, ಟಿ.ಎ.ಅಭಿಲಾಶ್, ಈಶ್ವರಗೌಡನಹಳ್ಳಿ ರೇವಣ್ಣ, ಎಂ.ಡಿ.ಮಹದೇವಸ್ವಾಮಿ, ತುಂಬಲ ಸೋಮಣ್ಣ ಪುಟ್ಟರಾಜು, ಕೆಂಪಯ್ಯನಹುಂಡಿ ಮಾಧು, ಭೈರಾಪುರ ಮಹದೇವಮ್ಮ, ಕೆ.ಎನ್.ಮಹದೇವ, ನಿಂಗಪ್ಪ, ಮರಯ್ಯ, ತಿಮ್ಮೇಗೌಡ, ಕುಮಾರ, ನಂಜುಂಡಸ್ವಾಮಿ, ನಂಜಯ್ಯ, ಆನಂದ್ ಸೇರಿದಂತೆ ಮತ್ತಿತರರಿದ್ದರು.

ಚಿರತೆ ದಾಳಿಗೆ ಮೇಕೆ ಬಲಿ



ಹೆಚ್.ಡಿ.ಕೋಟೆ, ಸೆ.10– ಚಿರತೆ ದಾಳಿಗೆ ಮೇಕೆ ಬಲಿಯಾಗಿರುವ ಘಟನೆ ಪಟ್ಟಣದಲ್ಲಿ ಸೋಮವಾರ ನಡೆದಿದೆ.

ಪಟ್ಟಣದ ನಿವಾಸಿ ಸೋಮಣ್ಣ ಅವರಿಗೆ ಸೇರಿದ ಮೇಕೆ ಬಲಿಯಾಗಿದೆ. ಸೋಮಣ್ಣನವರು ಸೋಮವಾರ ಮಧ್ಯಾಹ್ನ ವೀರೇಂದ್ರ ಅವರ ಜಮೀನಿನ ಬಳಿ ಮೇಕೆಗಳನ್ನು ಮೇಯಿಸುತ್ತಿದ್ದ ವೇಳೆ ಚಿರತೆ ಏಕಾಏಕಿ ದಾಳಿ ನಡೆಸಿ ಕೊಂದುಹಾಕಿ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಈ ವೇಳೆ ಚಿರತೆ ಸೆರೆ ಹಿಡಿದು, ಸೂಕ್ತ ಪರಿಹಾರ ಕೊಡಿಸುವಂತೆ ಸೋಮಣ್ಣ ಒತ್ತಾಯಿಸಿದರು.

ಎಂ. ಮಹೇಶಗೆ ಪಿಹೆಚ್.ಡಿ



ಮೈಸೂರು, ಸೆ. 10–ಡಾ. ಎನ್.ಎಂ. ತಳವಾರ್ ಅವರ ಮಾರ್ಗದರ್ಶನದಲ್ಲಿ ಎಂ. ಮಹೇಶ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹುಣಸೂರು ತಾಪಂ ಪ್ರಗತಿ ಪರಿಶೀಲನಾ ಸಭೆ

ಇಲಾಖೆಗಳ ಪ್ರಗತಿ ಮಂಡಿಸಿದ ಅಧಿಕಾರಿಗಳು

ಹುಣಸೂರು, ಸೆ.10– ಇಲ್ಲಿನ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಡಳಿತಾಧಿಕಾರಿ ಸಿದ್ದಗಂಗಮ್ಮ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳು ತಮ್ಮ ಇಲಾಖೆ ಪ್ರಗತಿ ಬಗ್ಗೆ ಮಾಹಿತಿ ನೀಡಿದರು.


ಹುಣಸೂರು ತಾಪಂನಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವು ಮಾತನಾಡಿ, ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳ 10070 ವಿದ್ಯಾರ್ಥಿಗಳು, 10511 ವಿದ್ಯಾರ್ಥಿನಿಯರು ಸೇರಿದಂತೆ 20581 ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಮತ್ತು ಸಾಕ್ಸ್ ವಿತರಿಸಲಾಗಿದೆ. ಸರ್ಕಾರಿ ಶಾಲೆಗಳ ಮಕ್ಕಳು ಸೇರಿದಂತೆ ಅನುದಾನಿತ ಶಾಲೆಗಳ 1743 ವಿದ್ಯಾರ್ಥಿಗಳು, 1548 ವಿದ್ಯಾರ್ಥಿನಿಯರಿಗೂ ಬಿಸಿಯೂಟ ಮತ್ತು ಕ್ಷೀರಭಾಗ್ಯ ಕಲ್ಪಿಸಲಾಗಿದೆ ಎಂದರು.

ತಾಲೂಕಿನ ಅನೇಕ ಶಾಲೆಗಳ ಕೊಠಡಿಗಳು, ಶೌಚಾಲಯ, ಕಾಂಪೌಂಡ್ ನಿರ್ಮಾಣ, ದುರಸ್ತಿಯಾಗಬೇಕಿದೆ. 110 ಶಾಲೆಗಳ 232 ಕೊಠಡಿಗಳು ಸಣ್ಣ ಪ್ರಮಾಣದಲ್ಲಿ ದುರಸ್ತಿಯಾಗಬೇಕಿದೆ. 72 ಶಾಲೆಗಳ 127 ಕೊಠಡಿಗಳು ದೊಡ್ಡ ಪ್ರಮಾಣದಲ್ಲಿ ದುರಸ್ತಿಯಾಗಬೇಕಿದೆ. 55 ಶಾಲೆಗಳ 105 ಕೊಠಡಿಗಳು ಸಂಪೂರ್ಣ ಹಾಳಾಗಿದ್ದುನೆಲಸಮ ಆಗಬೇಕಿದೆ. 45 ಶಾಲೆಗಳ 80 ಕೊಠಡಿಗಳು ಮರು ನಿರ್ಮಾಣವಾಗಬೇಕಿದೆ ಎಂದರು.

68 ಶಾಲೆಗಳಲ್ಲಿ ಅಡುಗೆ ಮನೆ ದುರಸ್ತಿ, 23 ಶಾಲೆಗಳಲ್ಲಿ ಅಡುಗೆ ಮನೆ ನಿರ್ಮಾಣವಾಗಬೇಕಿದೆ. ಅಲ್ಲದೆ 88 ಶಾಲೆಗಳಲ್ಲಿ 122 ಶೌಚಾಲಯ ನಿರ್ಮಾಣವಾಗಬೇಕಿದೆ. 46 ಶಾಲೆಗಳಲ್ಲಿ 8311 ಮೀಟರ್ ಕಾಂಪೌಂಡ್ ನಿರ್ಮಾಣವಾಗಬೇಕಿದ್ದು, 18 ಶಾಲೆಗಳಲ್ಲಿ 2485 ಮೀಟರ್ ಕಾಂಪೌಂಡ್ ದುರಸ್ತಿಯಾಗಬೇಕಿದೆ ಎಂದರು.

ತಾಲೂಕಿನ ಪ್ರಾಥಮಿಕ ಶಾಲೆಗಳಿಗೆ 970 ಶಿಕ್ಷಕರ ಅಗತ್ಯವಿದ್ದು, ಪ್ರಸ್ತುತ 747 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. 220 ಶಿಕ್ಷಕರ ಕೊರತೆ ಇದ್ದು, ಅದನ್ನು ಸರಿದೂಗಿಸಿಕೊಳ್ಳಲು 124 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಪ್ರೌಢಶಾಲೆ ವಿಭಾಗದಲ್ಲಿ 238 ಶಿಕ್ಷಕರ ಅಗತ್ಯವಿದ್ದು, 200 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, 38 ಶಿಕ್ಷಕರ ಕೊರತೆ ನೀಗಿಸಲು 36 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ ಎಂದರು.

ಸಾಮಾಜಿಕ ಅರಣ್ಯ ಇಲಾಖೆ ಆರ್‌ಎಫ್‌ಓ ಮಾತನಾಡಿ, ರಸ್ತೆಬದಿ, ಕೆರೆಕಟ್ಟೆ ಅಂಗಳದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲಾಗುತ್ತಿದೆ ಎಂದಾಗ ತಾಲೂಕಿನ ಬಿಳಿಕೆರೆಯಲ್ಲಿ ಈಗ ನೀರು ತುಂಬುತ್ತಿದ್ದು, ಕೆರೆ ಸುತ್ತಲಿನ ಪ್ರದೇಶದಲ್ಲಿ ಗಿಡಮರ ಬೆಳೆಸಿ ಅಭಿವೃದ್ಧಿಗೊಳಿಸಿ ಎಂದು ಆಡಳಿತಾಧಿಕಾರಿ ಸಿದ್ದಗಂಗಮ್ಮ ಅರಣ್ಯ ಇಲಾಖೆಗೆ ತಿಳಿಸಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜು ಮಾತನಾಡಿ, ನಮ್ಮ ಇಲಾಖೆಯಿಂದ ರೈತರಿಗೆ ತರಬೇತಿ ಮತ್ತಿತರ ಕಾರ್ಯಕ್ರಮ ನಡೆಸಲಾಗುತ್ತಿದೆ. ಸದ್ಯದಲ್ಲೇ ಶುಂಠಿ ಬೆಳೆಗಾರರಿಗೆ ಅರಿವು ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದ ಅವರು, ತಾಲೂಕಿನಲ್ಲಿ 6 ಸಾವಿರ ಜಾಬ್ ಕಾರ್ಡ್‌ಗಳನ್ನು ಮಾಡಲಾಗಿದೆ. ತಾಲೂಕಿನ 4 ಹೋಬಳಿಗಳಿಂದ 25,600 ಮಾನವ ದಿನಗಳ ಗುರಿ ಹೊಂದಲಾಗಿತ್ತು. ಈ ಪೈಕಿ 4868 ಮಾನವ ದಿನಗಳ ಗುರಿ ಸಾಧಿಸಲಾಗಿದೆ ಎಂದರು.

ಪಶು ಇಲಾಖೆಯ ಡಾ.ಚನ್ನಬಸಪ್ಪ ಮಾತನಾಡಿ, ಜಾನುವಾರುಗಳಿಗೆ ಗಂಟು, ಕಾಲುಬಾಯಿ ಜ್ವರಕ್ಕೆ ಮುನ್ನೆಚ್ಚರಿಕೆಯಾಗಿ ಲಸಿಕೆ ನೀಡುತ್ತಿದ್ದೇವೆ. ಅಲ್ಲದೇ ಶಾಲೆಗಳಲ್ಲಿ ರೇಬೀಸ್ ಕಾಯಿಲೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲಾಗುತ್ತಿದೆ. ಇಲಾಖೆಯಲ್ಲಿ ಪಶು ಪರಿವೀಕ್ಷಕರು ಸೇರಿದಂತೆ ಸಿಬ್ಬಂದಿ ಕೊರತೆ ಇದ್ದು ಈ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿದರು.

ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆ, ಕೃಷಿ, ಅರಣ್ಯ, ಸಹಕಾರ ಸೇರಿದಂತೆ ಎಲ್ಲಾ ಇಲಾಖೆ ಮುಖ್ಯಸ್ಥರು ತಮ್ಮ ಇಲಾಖೆ ಪ್ರಗತಿ ಮಂಡಿಸಿದರು.

ಸಭೆಯಲ್ಲಿ ತಾಪಂ ಇಓ ಹೊಂಬಯ್ಯ, ಕಚೇರಿ ವ್ಯವಸ್ಥಾಪಕ ಎಂ.ಎಸ್.ರಾಜೇಶ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಕನಕ, ಉಪ್ಪಾರ ಸಮುದಾಯ ಭವನಕ್ಕೆ ಭೂಮಿ ಪೂಜೆ

ನಂಜನಗೂಡು/ಮಲ್ಕುಂಡಿ, ಸೆ.10– ತಾಲೂಕಿನ ಶಿರಮಳ್ಳಿಯಲ್ಲಿ 5 ಲಕ್ಷ ರೂ. ವೆಚ್ಚದ ನೂತನ ಕನಕ ಸಮುದಾಯ ಭವನ ಹಾಗೂ 5 ಲಕ್ಷ ರೂ. ವೆಚ್ಚದ ಭಗೀರಥ ಸಮುದಾಯ ಭವನದ ಮುಂದುವರಿದ ಕಾಮಗಾರಿಗೆ ಮಂಗಳವಾರ ಶಾಸಕ ದರ್ಶನ್ ಭೂಮಿಪೂಜೆ ನೆರವೇರಿಸಿದರು.


ಕನಕ, ಉಪ್ಪಾರ ಸಮುದಾಯ ಭವನ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ನೀಡಿದ ಭರವಸೆಯಂತೆ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಕನಕ ಸಮುದಾಯ ಭವನ ನಿರ್ಮಾಣವಾಗಲಿದ್ದು ಪ್ರಸ್ತುತ 5 ಲಕ್ಷ ಅನುದಾನ ಬಿಡುಗಡೆಯಾಗಿದೆ. ಮುಂದಿನ ದಿನಗಳಲ್ಲಿ 20 ಲಕ್ಷ ನೀಡುವ ಮೂಲಕ ಸಮುದಾಯ ಭವನ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಅಲ್ಲದೆ ಗ್ರಾಮದಲ್ಲಿ ಉಪ್ಪಾರ ಭವನದ ಮುಂದುವರೆದ ಕಾಮಗಾರಿಗೆ 5 ಲಕ್ಷ ಅನುದಾನ ನೀಡಲಾಗಿದೆ. ಇನ್ನೂ ಹೆಚ್ಚಿನ ಅನುದಾನ ನೀಡಿ ಗ್ರಾಮದಲ್ಲಿ ಉಪ್ಪಾರ ಸಮುದಾಯ ಭವನಗಳನ್ನು ಸುಸಜ್ಜಿತವಾಗಿ ನಿರ್ಮಿಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ರಾಪಂ ಅಧ್ಯಕ್ಷೆ ಭಾಗ್ಯ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಸಿ.ಎಂ. ಶಂಕರ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕುರಿಹುಂಡಿ ರಾಜು, ಅಶೋಕ್, ಸ್ವಾಮಿಗೌಡ, ಬೆಳ್ಳಶೆಟ್ಟಿ, ಮೊಳ್ಳೆಗೌಡ, ನಾಗರಾಜ್, ಬಸವೇಗೌಡ, ಮಹೇಶ್, ಶಿವಣ್ಣಶೆಟ್ಟಿ, ಗುರುಸ್ವಾಮಿ ಶರಣ್, ಇಂಜಿನಿಯರ್ ಕಾವ್ಯ, ಪುರುಷೋತ್ತಮ್ ಸೇರಿದಂತೆ ಇನ್ನಿತರರಿದ್ದರು.

ನಗರಸಭೆ ಅಧ್ಯಕ್ಷ ಶರವಣ ಅಧಿಕಾರ ಸ್ವೀಕಾರ



ಹುಣಸೂರು, ಸೆ.10– ನಗರಾಭಿವೃದ್ಧಿ ನನ್ನ ಕನಸಾಗಿದ್ದು, ನಗರದ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ನೂತನ ನಗರಸಭಾಧ್ಯಕ್ಷ ಶರವಣ ತಿಳಿಸಿದರು.

ಮಂಗಳವಾರ ನಗರಸಭೆ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು ನಗರದ ಹಲವು ರಸ್ತೆಗಳು ಹದಗೆಟ್ಟಿದ್ದು, ಯುಜಿಡಿ, ಬೀದಿದೀಪ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ನಗರಸಭೆಗೆ ಪ್ರಥಮವಾಗಿ ಸಣ್ಣ ಸಮುದಾಯವಾದ ಗಾಣಿಗ ಸಮಾಜದ ನನಗೆ ಅಧಿಕಾರ ನೀಡಿದ ಶಾಸಕರಾದ ಜಿ.ಡಿ.ಹರೀಶ್‌ಗೌಡ ಹಾಗೂ ಬಿಜೆಪಿ ಸಂಸದ ಯದುವೀರ್ ಮತ್ತು ಸಹಕಾರ ನೀಡಿದ ಎಲ್ಲಾ ಸದಸ್ಯರಿಗೆ ಇದೇ ವೇಳೆ ಕೃತಜ್ಞತೆ ಸಲ್ಲಿಸಿದರು.

ಘನತ್ಯಾಜ್ಯ ವಿಲೇವಾರಿ ಘಟಕ ಕಾಮಗಾರಿಗೆ ಚಾಲನೆ


ಘನತ್ಯಾಜ್ಯ ವಿಲೇವಾರಿ ಘಟಕದ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಸೆ.10– ನಂಜನಗೂಡನ್ನು ಸ್ವಚ್ಛ ನಗರವಾಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 1 ಕೋಟಿ ರೂ. ವೆಚ್ಚದಲ್ಲಿ ಆಧುನಿಕ ಘನ ತ್ಯಾಜ್ಯ ವಿಲೇವಾರಿ ಘಟಕದ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಇಲ್ಲಿನ ಮಹದೇವನಗರ ಬಳಿಯ ತ್ಯಾಜ್ಯ ವಿಲೇವಾರಿ ಘಟಕದ ಆವರಣದಲ್ಲಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 1 ಕೋಟಿ ಅನುದಾನ ಬಂದಿದ್ದು, ಅದರಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ಪ್ರಾಥಮಿಕ ಮತ್ತು ನಂತರದ ಶೆಡ್ ನಿರ್ಮಾಣ ಮತ್ತು ಆಧುನಿಕ ಯಂತ್ರಗಳನ್ನು ಒಳಗೊಂಡ ಮೆಟಿರಿಯಲ್ ರಿಕವರಿ ಸೌಲಭ್ಯಗಳನ್ನು ಅಳವಡಿಸಲಾಗುವುದು. ಇದರಿಂದ ನಗರಸಭೆ ವ್ಯಾಪ್ತಿಯಲ್ಲಿ ಸಂಗ್ರಹಣಗೊಳ್ಳುವ ಘನತ್ಯಾಜ್ಯವನ್ನು ಸಂಸ್ಕರಿಸಿ ಉಪ ಉತ್ಪನ್ನಗಳನ್ನು ಉತ್ಪಾದಿಸಲು ಸಹಕಾರಿಯಾಗಲಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವ ಮೂರ್ತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ನಗರಸಭಾ ಸದಸ್ಯರಾದ ಪ್ರದೀಪ್, ಮುಖಂಡರಾದ ಸತೀಶ್, ಅಶೋಕ್, ಗುತ್ತಿಗೆದಾರ ಸುರೇಶ್, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಎಇಇ ಮಹೇಶ್, ಅಧಿಕಾರಿಗಳಾದ ಮೈತ್ರಾದೇವಿ, ರೇಖಾ, ಕುಮಾರ್, ಇದ್ದರು.

ಪಿಡಿಓ ವಿರುದ್ಧ ಜಿಪಂ ಸಿಇಓಗೆ ಗ್ರಾಪಂ ಸದಸ್ಯರ ದೂರು

ಬಿ.ಮಟಕೆರೆ ಗ್ರಾಪಂಗೆ ಜಿಪಂ ಅಧಿಕಾರಿಗಳ ಭೇಟಿ, ಪರಿಶೀಲನೆ

ಸರಗೂರು, ಸೆ.10– ತಾಲೂಕಿನ ಬಿ.ಮಟಕೆರೆ ಗ್ರಾಪಂನಲ್ಲಿ ಹಣ ದುರುಪಯೋಗ, ಅಭಿವೃದ್ಧಿ ಕುಂಠಿತವಾಗಿರುವ ಸಂಬಂಧ ಪಿಡಿಓ ವಿರುದ್ಧ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಜಿಪಂ ಸಿಇಓಗೆ ದೂರು ನೀಡಿದ ಹಿನ್ನೆಲೆಯಲ್ಲಿ ಗ್ರಾಪಂಗೆ ಜಿಪಂ ಅಧಿಕಾರಿಗಳ ತಂಡ ಭೇಟಿ ನೀಡಿ ಕಡತಗಳನ್ನು ಪರಿಶೀಲನೆ ನಡೆಸಿತು.


ಬಿ.ಮಟಕೆರೆ ಗ್ರಾಪಂಗೆ ಜಿಪಂ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು


ಇಲ್ಲಿನ ಗ್ರಾಪಂ ಪಿಡಿಓ ಭಾಗ್ಯ ಅವರು ಬಿ.ಮಟಕೆರೆ ಅಭಿವೃದ್ಧಿ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 71 ಮನೆಗಳ ಪೈಕಿ 25 ಮನೆಗಳಿಗೆ ಸಮಯಕ್ಕೆ ಸರಿಯಾಗಿ ಜಿಪಿಎಸ್ ಅಪ್ಲೋಡ್ ಮಾಡದೇ ಮನೆಗಳು ಕೈ ಬಿಟ್ಟು ಹೋಗಿವೆ. ಗ್ರಾಪಂ ವಿಸ್ತೀರ್ಣದಲ್ಲಿ ದೊಡ್ಡದಿದ್ದು, ಜನಸಂಖ್ಯೆಯು ಹೆಚ್ಚಾಗಿದೆ. ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಾಡಿಗಳು ಹೆಚ್ಚಾಗಿದ್ದು, ಅವರಿಗೆ ಮೂಲಸೌಕರ್ಯ ಒದಗಿಸಿಲ್ಲ. ಕಸ ವಿಲೇವಾರಿ ಘಟಕ ಸ್ಥಾಪನೆಯಾಗದೆ ಕಸ ವಿಲೇವಾರಿಗೆ ತೊಂದರೆಯಾಗಿದೆ. ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಾಮಾನ್ಯ ಜನರಿಗೆ ಶೌಚಾಲಯ ಒದಗಿಸಲು ಹಣವಿದ್ದರೂ ಜಿಪಿಎಸ್ ಮಾಡದೆ ಪಿಡಿಓ ಕಾಲಹರಣ ಮಾಡುತ್ತಿದ್ದಾರೆ. ಅಮೃತ ಗ್ರಾಪಂ 2022–23ನೇ ಸಾಲಿನಲ್ಲಿ ಬಹುಮಾನವಾಗಿ ಕೊಟ್ಟ 5 ಲಕ್ಷ ರೂ. ಹಣವನ್ನು ಯಾವುದೇ ಕಾಮಗಾರಿಗೆ ಬಳಸದೇ ಹಾಗೆ ಉಳಿದಿದೆ ಈ ಬಗ್ಗೆ ಸಾಮಾನ್ಯ ಸಭೆಯಲ್ಲಿ ಸದಸ್ಯರು ಚರ್ಚಿಸಿದರೂ ಪಿಡಿಓ ಇಷ್ಟ ಬಂದ ಹಾಗೆ ನಡೆದುಕೊಂಡಿದ್ದಾರೆ. ಇದರಿಂದ ನಮ್ಮ ಗ್ರಾಪಂ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕುಂಠಿತವಾಗಿದೆ.

ಗ್ರಾಪಂ ಸಾಮಾನ್ಯ ಸಭೆ ಗಮನಕ್ಕೆ ತರದೆ 14 ಮತ್ತು 15ನೇ ಹಣಕಾಸು, ಇನ್ನಿತರ ಖಾತೆಗಳಿಂದ ಹಣ ದುರುಪಯೋಗವಾದ ಬಗ್ಗೆ ಲೆಕ್ಕಪತ್ರಗಳನ್ನು ಮಂಡಿಸಿಲ್ಲ. ಸಾಮಾನ್ಯ ಸಭೆಯಲ್ಲಿ ಕೇಳಿದರೂ ಈ ಬಗ್ಗೆ ಕ್ರಮ ವಹಿಸದೇ ಪಿಡಿಓ ಮುಂದಿನ ಸಭೆಯಲ್ಲಿ ಕೊಡುತ್ತೇನೆ ಎಂದು ಹೇಳುತ್ತಾ ಬಂದಿದ್ದು, ಇದುವರೆಗೂ ಮಂಡಿಸಿಲ್ಲ. ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯ 5 ದಿನಗಳ ಮುಂಚಿತವಾಗಿ ಸರ್ವ ಸದಸ್ಯರು ಸಹಿ ಹಾಕಿ ಅರ್ಜಿ ನೀಡಿದರೂ ಲೆಕ್ಕಪತ್ರ ಮಂಡಿಸದೇ ಸಭೆ ಮುಕ್ತಾಯಗೊಳಿಸಿದ್ದಾರೆ. ಕೆಲವೊಂದು ಸಭೆಗಳಲ್ಲಿ ಪಿಡಿಓಗೆ ಇಷ್ಟಬಂದ ಹಾಗೆ ವಿಚಾರಗಳನ್ನು ಟೈಪ್ ಮಾಡಿಸಿ ನಮ್ಮ ಬಳಿ ತಂಬ್ ತೆಗೆದುಕೊಂಡಿದ್ದಾರೆ.

> ಪರಿಶೀಲನೆಗೆ ಆಗಮಿಸಿದ ಜಿಪಂ ಅಧಿಕಾರಿಗಳಿಗೆ ಕೇಳಿದ ಕಡತಗಳನ್ನು ನೀಡಲಾಗಿದೆ. ಮತ್ತೆ ಬೇಕಾದ ಮಾಹಿತಿ ನೀಡಲಾಗುವುದು. ನಾನು ಬಂದ ನಂತರ ಗ್ರಾಪಂನಲ್ಲಿ ಯಾವುದೇ ಹಣ ದುರ್ಬಳಕೆಯಾಗಿಲ್ಲ.
> - ಭಾಗ್ಯ, ಪಿಡಿಓ.

ಹೀಗಾಗಿ ಈ ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ಪಿಡಿಓ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ತಾಪಂ ಇಓ ಹಾಗೂ ಜಿಪಂ ಸಿಇಓ ಅವರಿಗೆ ಬಿ.ಮಟಕೆರೆ ಗ್ರಾಪಂ ಅಧ್ಯಕ್ಷ ಎಂ.ನಾಗೇಂದ್ರ, ಉಪಾಧ್ಯಕ್ಷೆ ಭಾರತಿ, ಸದಸ್ಯರಾದ ದೇವದಾಸ್, ಬೆಟ್ಟಸ್ವಾಮಿ, ರಾಣಿಬಾಯಿ, ನಾಗೇಶ್, ಬೊಮ್ಮ, ರತ್ನಮ್ಮ, ಚಿನ್ನಮ್ಮ, ಎಂ.ಡಿ. ರತ್ನಯ್ಯ, ಮೀನಾಕುಮಾರಿ, ಅಶ್ವಿನಿ, ರೂಪಾಬಾಯಿ, ಗೌರಿಬಾಯಿ, ವಿನೋದ, ಸುಮತಿ, ಸುನಿತಾಬಾಯಿ ನೀಡಿದ ದೂರಿನ ಮೇರೆಗೆ ಜಿಪಂ ಅಧಿಕಾರಿಗಳ ತಂಡ ಭೇಟಿ ನೀಟಿ ಕಡತಗಳನ್ನು ಪರಿಶೀಲನೆ ನಡೆಸಿತು. ಈ ವೇಳೆ ಅಧಿಕಾರಿಗಳ ತಂಡ ಗ್ರಾಪಂನಲ್ಲಿ ಪಿಡಿಓ ಅವ್ಯವಹಾರ ನಡೆಸಿದ್ದಾರೆ. ಅಭಿವೃದ್ಧಿ ಕುಂಠಿತವಾಗಿದೆ ಎಂಬ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಮೇಲಧಿಕಾರಿಗಳ ಆದೇಶದ ಮೇರೆಗೆ ಗ್ರಾಪಂಗೆ ಭೇಟಿ ಪರಿಶೀಲನೆ ನಡೆಸಲಾಗಿದೆ. ಮೇಲಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ಮಾಹಿತಿ ನೀಡಿತು.

ಕಿತ್ತೂರು ಗ್ರಾಪಂನಲ್ಲಿ ಜಮಾಬಂದಿ ಕಾರ್ಯಕ್ರಮ


ಕಿತ್ತೂರು ಗ್ರಾಪಂನಲ್ಲಿ ಜಮಾಬಂದಿ ಕಾರ್ಯಕ್ರಮ ನಡೆಯಿತು.

ಬೆಟ್ಟದಪುರ, ಸೆ.10– ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಲು, ಗ್ರಾಪಂನಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ತಿಳಿದುಕೊಳ್ಳಲು ಇಂತಹ ಸಭೆಗಳು ಸಹಕಾರಿ ಎಂದು ನೋಡಲ್ ಅಧಿಕಾರಿ ಪ್ರದೀಪ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಿತ್ತೂರು ಗ್ರಾಪಂನಲ್ಲಿ ಮಂಗಳವಾರ ನಡೆದ ಜಮಾಬಂದಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಪಂನಲ್ಲಿ ನಡೆದಿರುವ ಕಾಮಗಾರಿಗಳು ಮತ್ತು ಆದಾಯ–ವೆಚ್ಚಗಳ ವಿವರವಾದ ಲೆಕ್ಕಪತ್ರವನ್ನು ಎಲ್ಲರೆದುರು ಪರಿಶೀಲಿಸಿ ಮಾಹಿತಿ ನೀಡುವುದು, ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳನ್ನು ಪ್ರಸ್ತಾಪಿಸುವುದು ಮತ್ತು ಚರ್ಚಿಸಲು ಸಹಾಯಕವಾಗಿದ್ದು, ಗ್ರಾಮಸ್ಥರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೇಳಿ, ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.


ಪಂಚಾಯಿತಿ ಮಟ್ಟದಲ್ಲಿ ಇಂತಹ ಸಭೆಗಳನ್ನು ಆಯೋಜಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಆಗಮಿಸಿ ನಡೆಯುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಶೋಭಾ, ಸದಸ್ಯರಾದ ದಿನೇಶ್, ಮಹದೇವ್, ದೀಪಕ್, ರಾಜಶೇಖರ್, ಕಾರ್ಯದರ್ಶಿ ಪುಟ್ಟೇಗೌಡ, ಸಿಬ್ಬಂದಿ ಮಹೇಶ್, ದಿನೇಶ್, ಮಹ ದೇವ್, ಡಿ.ಆರ್.ಮಹೇಶ್, ಹರೀಶ್, ಜ್ಯೋತಿ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಕೊಡಗಹಳ್ಳಿ ಡೈರಿಗೆ 5.24 ಲಕ್ಷ ರೂ. ನಿವ್ವಳ ಲಾಭ

ಡೈರಿ ಅಧ್ಯಕ್ಷ ಕೆ.ಎಂ.ಕರಗಯ್ಯ ಮಾಹಿತಿ

ತಿ.ನರಸೀಪುರ, ಸೆ.10– ಸರ್ವ ಸದಸ್ಯರ ಸಹಕಾರದಿಂದ ಸಂಘ ಪ್ರಸಕ್ತ ಸಾಲಿನಲ್ಲಿ 5,24,062 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಕೊಡಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆ.ಎಂ.ಕರಗಯ್ಯ ತಿಳಿಸಿದರು.



ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರನ್ನು ಸನ್ಮಾನಿಸಲಾಯಿತು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಷೇರುದಾರರ ಸಹಕಾರದಿಂದ ಸಂಘ ಪ್ರತಿ ವರ್ಷ ಲಾಭ ಗಳಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸಂಘವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಸದಸ್ಯರು ನಮಗೆ ಸಹಕಾರ ನೀಡಬೇಕು. ಸಂಘದ ಸದಸ್ಯರಿಗೆ ಒಕ್ಕೂಟದಿಂದ ಬರಬಹುದಾದ ಯಾವುದೇ ಸವಲತ್ತುಗಳನ್ನು ಕೊಡಿಸಲು ತಾವು ಶಕ್ತಿಮೀರಿ ಪ್ರಯತ್ನಿಸುವುದಾಗಿ ತಿಳಿಸಿದ ಅವರು ಮೈಮುಲ್ ಅಧ್ಯಕ್ಷರಾಗಿ ನಮ್ಮ ತಾಲೂಕಿನವರೇ ಆಯ್ಕೆಯಾಗಿರುವುದರಿಂದ ಸಂಘಕ್ಕೆ ಹೆಚ್ಚಿನ ಅನುದಾನ ನಿರೀಕ್ಷಿಸಲಾಗಿದೆ ಎಂದರು.

ಕಳೆದ ಸಭೆಯಲ್ಲಿ ಸದಸ್ಯರು ನೀಡಿದ್ದ ಕೆಲ ಸಲಹೆ ಪಾಲಿಸಲು ಸಾಧ್ಯವಾಗಿಲ್ಲ. ಹಾಗಾಗಿ ಮುಂಬರುವ ವಾರ್ಷಿಕ ಸಭೆ ವೇಳೆಗೆ ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೇ ಆಗಿರುವ ಕೆಲ ಸಣ್ಣಪುಟ್ಟ ವ್ಯತ್ಯಾಸಗಳನ್ನು ಸರಿಪಡಿಸಲಾಗುವುದು ಎಂದರು.

ಮೈಮುಲ್ ವಿಸ್ತರಣಾಧಿಕಾರಿ ಆರ್. ಪ್ರಮೋದ್ ಮಾತನಾಡಿ, ರೈತರು ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದರೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಇದರಿಂದ ರೈತರಿಗೂ ಹೆಚ್ಚಿನ ಅನುಕೂಲವಾಗಲಿದೆ. ಹೀಗಾಗಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಸುವ ಮೂಲಕ ಹೆಚ್ಚಿನ ಲಾಭ ಪಡೆದು ಆರ್ಥಿಕವಾಗಿ ಸದೃಢರಾಗುವಂತೆ ಸಲಹೆ ನೀಡಿದರು.

ಹಾಲಿನ ಗುಣಮಟ್ಟ ಕುಸಿದರೆ ಸರ್ಕಾರ ನೀಡುವ 5 ರೂ. ಪ್ರೋತ್ಸಾಹಧನ ಕಡಿತಗೊಳ್ಳುತ್ತದೆ. ಆದ್ದರಿಂದ 8.5 ಎಸ್‌ಎನ್‌ಎಫ್ ಬರುವಂತೆ ಹಾಲು ಪೂರೈಕೆ ಮಾಡಲು ಸದ್ಯಸರು ಸಹಕರಿಸಬೇಕು ಎಂದರು.

ಇದೇ ವೇಳೆ ಹಾಲು ಉತ್ಪಾದಕರು ಗ್ರಾಮಕ್ಕೆ ಹಸು ಎತ್ತುವ ಯಂತ್ರ ಕೊಡಿಸುವಂತೆ ಮಾಡಿದ ಮನವಿಗೆ ಸ್ಪಂದಿಸಿದ ಪ್ರಮೋದ್ ತಿಂಗಳೊಳಗೆ ಕೊಡಿಸುವುದಾಗಿ ಭರವಸೆ ನೀಡಿದರು. ಡೆವಿಡೆಂಟ್ ಕೊಡುವ ವಿಷಯ ಪ್ರಸ್ತಾಪವಾಗಿ ಈಗಿರುವ ಲಾಭದ ಹಣ 450 ಷೇರುದಾರರಿಗೆ ಹಂಚಿಕೆ ಮಾಡಿದರೆ 40 ರಿಂದ 50 ರೂ. ಸಿಗಲಿದ್ದು, ಡೆವಿಡೆಂಟ್ ಹಣಕ್ಕೆ ಮತ್ತಷ್ಟು ಹಣ ಸೇರಿಸಿ ಸದಸ್ಯರೆಲ್ಲರಿಗೂ ಯಾವುದಾದರೂ ಗಿಫ್ಟ್ ಕೊಡವ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಇದೇ ವೇಳೆ ಸಹಕಾರ ಸಂಘಕ್ಕೆ 9,19,165 ರೂ. ಹಾಲು ಪೂರೈಕೆ ಮಾಡಿದ ಎಂ.ಕೆಂಪೇಗೌಡ, 4,16,826 ರೂ. ಹಾಲು ಪೂರೈಕೆ ಮಾಡಿದ ಮಹದೇವು ಹಾಗೂ 2,93,995 ರೂ. ಹಾಲು ಪೂರೈಕೆ ಮಾಡಿದವರಿಗೆ 20 ಲೀಟರ್ ಹಾಲಿನ ಕ್ಯಾನ್‌ಗಳನ್ನು ನೀಡಿ ಸನ್ಮಾನಿಸಲಾಯಿತು. ಸಂಘದ ಉಪಾಧ್ಯಕ್ಷೆ ಪ್ರಭಾವತಿ, ನಿರ್ದೇಶಕರಾದ ಹೆಚ್.ನಾಗರಾಜು, ಬಿ.ಸುರೇಂದ್ರ, ತುಳಸೀಕೃಷ್ಣ, ಮಹದೇವು, ಕೆ.ಕೆಂಪೇಗೌಡ, ಕೆ.ಎಂ.ಶಂಕರ, ಮರಿಸ್ವಾಮಿ, ನಂಜಪ್ಪ ರತ್ನಮ್ಮ ಮೈಸೂರು ಹಾಲು ಒಕ್ಕೂಟದ ಮಾರ್ಗ ವಿಸ್ತರಣಾಧಿಕಾರಿ ದಿವ್ಯಶ್ರೀ, ಸಂಘದ ಇಓ ಹೆಚ್.ಶಿವಣ್ಣ, ಸಹಾಯಕ ನಾರಾಯಣಾಚಾರಿ, ಪ್ರಿಯಾಂಕ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಮತ್ತಿತರರಿದ್ದರು.

ಸಹಾಯಧನ ವಿತರಣೆ

ಹೆಚ್.ಡಿ.ಕೋಟೆ, ಸೆ.10– ತೋಟಗಾರಿಕೆಯಲ್ಲಿ ಯಾಂತ್ರೀಕರಣ ಯೋಜನೆಯಡಿ ಯಂತ್ರೋಪಕರಣಗಳ ಖರೀದಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾತಿ, ಪ.ಪಂಗಡದ ರೈತರಿಗೆ ಶೇ.50ರ ಸಹಾಯಧನ ನೀಡಲಾಗುವುದು.

ತಾಳೆ ಬೆಳೆ ಯೋಜನೆಯಡಿ ಪ್ರದೇಶ ವಿಸ್ತರಣೆ ಕಾರ್ಯಕ್ರಮಕ್ಕೆ ಶೇ.90 ಹಾಗೂ 4 ವರ್ಷಗಳವರೆಗೆ ಅಂತರ ಬೇಸಾಯಕ್ಕೆ ಹಾಗೂ ರಸಗೊಬ್ಬರ ಖರೀದಿಗೆ ಶೇ.50ರ ಸಹಾಯಧನ ನೀಡಲಾಗುವುದು. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸಾಮಾನ್ಯ, ಪರಿಶಿಷ್ಟ ಜಾತಿ ಹಾಗೂ ವರ್ಗದ ರೈತರಿಗೆ 2.00 ಹೆಕ್ಟೇರ್‌ವರೆಗೆ ಶೇ.90 ಸಹಾಯಧನ ನೀಡಲಾಗುವುದು. ಅಡಿಕೆ, ಬಾಳೆ, ತೆಂಗು, ತರಕಾರಿ, ಹೂವು ಹಾಗೂ ಇತರೆ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ಸಹಾಯಧನ ನೀಡಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಪ್ಲಾಸ್ಟಿಕ್ ಕ್ರೇಟ್ಸ್ ಹಾಗೂ ನೀರಿನಲ್ಲಿ ಕರಗುವ ಗೊಬ್ಬರಗಳು ಶೇ.50ರ ಸಹಾಯಧನದಲ್ಲಿ ನೀಡಲಾಗುವುದು. ಆಸಕ್ತ ರೈತರು ತೋಟಗಾರಿಕೆ ಇಲಾಖೆ, ಹೆಚ್.ಡಿ.ಕೋಟೆ ಕಚೇರಿ ಸಂಪರ್ಕಿಸುವಂತೆ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ನೇತ್ರಾವತಿ ತಿಳಿಸಿದ್ದಾರೆ ಕಸಬಾ 8147395394, ಹಂಪಾಪುರ 9353868838, ಅಂತರಸಂತೆ 8088657356, ಸರಗೂರು 9740463703, ಕಂದಲಿಕೆ 9880451322 ಸಂಪರ್ಕಿಸಬಹುದು.

ನ.15ರೊಳಗೆ ಕೆಂಬಾಳು ಘಟಕದಲ್ಲಿ ಹೆಚ್ಚು ಸಾಮರ್ಥ್ಯದ ಪಂಪ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಿ

ಕೆಆರ್ ಕ್ಷೇತ್ರದ ಕೆಡಿಪಿ ಸಭೆಯಲ್ಲಿ ಪಾಲಿಕೆ ಅಧಿಕಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಸೂಚನೆ

ಮೈಸೂರು,ಸೆ.10(ಪಿಎಂ)– ಕಬಿನಿ ನೀರು ಸರಬರಾಜು ಯೋಜನೆಯ ಕೆಂಬಾಳು ಕುಡಿಯುವ ನೀರು ಶುದ್ಧೀಕರಣ ಘಟಕದಲ್ಲಿ ಹೆಚ್ಚುವರಿ ಸಾಮರ್ಥ್ಯದ ಪಂಪ್‌ಸೆಟ್ ಅಳವಡಿಸುವ ಕಾಮಗಾರಿಯನ್ನು ನ.15ರೊಳಗೆ ಪೂರ್ಣಗೊಳಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಆರ್ ಕ್ಷೇತ್ರದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕ್ಷೇತ್ರದ ಐದಾರು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಇದು ಪರಿಹಾರವಾಗಬೇಕು. ಈ ನಿಟ್ಟಿನಲ್ಲಿ ಕೆಂಬಾಳು ಘಟಕದಲ್ಲಿ ಪಂಪ್‌ಸೆಟ್ ಅಳವಡಿಸುವ ಕಾಮಗಾರಿ ಪೂರ್ಣಗೊಳಿಸಿ ನೀರಿನ ಸಮಸ್ಯೆ ನೀಗಿಸಬೇಕು ಎಂದು ತಿಳಿಸಿದರು.

ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ಎ.ಎಂ.ಮೊಹಮ್ಮದ್ ಮುಸ್ತಾಫ ಮಾತನಾಡಿ, ಕಬಿನಿ ನೀರು ಸರಬರಾಜು ಯೋಜನೆಯ ಕೆಂಬಾಳು ಶುದ್ಧೀಕರಣಗಾರ ಘಟಕದಲ್ಲಿ ಹೆಚ್ಚುವರಿ ಸಾಮರ್ಥ್ಯದ ಪಂಪ್‌ಸೆಟ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಸದ್ಯ ಇಲ್ಲಿ 600 ಹೆಚ್‌ಪಿ ಪಂಪ್ ಇದ್ದು, ಈಗ 2,500 ಹೆಚ್‌ಪಿ ಪಂಪ್ ಅಳವಡಿಸಲಾಗುತ್ತಿದೆ. ಇದಾದ ಬಳಿಕ ಇಡೀ ಮೈಸೂರಿಗೆ 105 ಎಂಎಲ್‌ಡಿ ನೀರು ಪೂರೈಕೆ ಸಾಧ್ಯವಾಗಲಿದೆ. ಆ ಮೂಲಕ 40 ಎಂಎಲ್‌ಡಿ ನೀರು ಹೆಚ್ಚುವರಿಯಾಗಿ ದೊರೆಯಲಿದೆ ಎಂದು ಮಾಹಿತಿ ನೀಡಿದರು.

ಅಲ್ಲದೆ, ಟ್ಯಾಂಕ್‌ಗಳಲ್ಲಿ ನೀರು ತುಂಬುವಲ್ಲಿ ಏನು ಸಮಸ್ಯೆ ಆಗುತ್ತಿದೆ. ಈ ಬಗ್ಗೆ ಶೀಘ್ರ ಕ್ರಮ ವಹಿಸಬೇಕೆಂದು ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಮಾತನಾಡಿದ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಟ್ಯಾಂಕ್‌ಗಳಿಗೆ ಸೆನ್ಸಾರ್ ಅಳವಡಿಸಿ, ಇದರಿಂದ ನೀರು ಭರ್ತಿಯಾಗುವ ಬಗ್ಗೆ ಮಾಹಿತಿ ದೊರೆಯಲಿದೆ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾತು ಮುಂದುವರೆಸಿದ ಶಾಸಕರು, ನಮ್ಮ ಕ್ಷೇತ್ರದಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಅಗತ್ಯವಿದೆ.


ಮೈಸೂರು ಮಹಾನಗರ ಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಆರ್ ಕ್ಷೇತ್ರದ ಕೆಡಿಪಿ ಸಭೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು.

ಪ್ರಮುಖ ರಸ್ತೆಗಳಲ್ಲೇ ದೀಪಗಳಿಲ್ಲ. ಸಂಗೊಳ್ಳಿ ರಾಯಣ್ಣ ವೃತ್ತದಿಂದ (ಕುರುಬಾರಹಳ್ಳಿ ವೃತ್ತ) ವಿಹಾರ ಮಾರ್ಗದಲ್ಲಿ ಹಳೇ ಡೈರಿಯವರೆಗೆ ವಿದ್ಯುತ್ ಕಂಬಗಳಿದ್ದು, ಅವುಗಳಲ್ಲಿ ಬಲ್ಬ್‌ಗಳೇ ಇಲ್ಲ. ಪಾಠಶಾಲಾ ವೃತ್ತದಿಂದ ಹಾರ್ಡಿಂಜ್ ವೃತ್ತದವರೆಗೂ ಸಾಕಷ್ಟು ಲೈಟ್ಸ್‌ಗಳು ಇಲ್ಲ. ಎಲೆತೋಟದ ಸಮೀಪ ಜೆಎಲ್‌ಬಿ ರಸ್ತೆಯಲ್ಲೂ ಲೈಟ್ಸ್‌ಗಳಿಲ್ಲ. ಇದಲ್ಲದೆ, ವಾರ್ಡ್‌ಗಳಲ್ಲಿ 70ರಿಂದ 80 ಲೈಟ್ಸ್‌ಗಳು ಬೇಕಿವೆ. ಮುಂದಿನ ತಿಂಗಳೊಳಗೆ ಬೀದಿದೀಪಗಳನ್ನು ಅಳವಡಿಸಬೇಕೆಂದು ಸೂಚಿಸಿದರು.

ಅರವಿಂದನಗರದಲ್ಲಿ ಮುಡಾದಿಂದ ರೈತ ಸಂತೆಗಾಗಿ ಕಟ್ಟಡ ನಿರ್ಮಿಸಿದ್ದು, ಅದು ಉಪ ಯೋಗ ಆಗುತ್ತಿಲ್ಲ. ಅದನ್ನು ಪಾಲಿಕೆ ವಹಿಸಿಕೊಂಡು ಸಾರ್ವಜನಿಕ ಉಪಯೋಗಕ್ಕೆ ಬಳಸಲು ಕ್ರಮ ವಹಿಸಬೇಕು. ಆಶ್ರಯ ಮನೆಗಳ ಸಂಬಂಧ ಮುಂದಿನ ವಾರದಲ್ಲಿ ಪ್ರತ್ಯೇಕ ಸಭೆ ನಿಗದಿಗೊಳಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಹಲವು ಸಾರ್ವಜನಿಕ ಶೌಚಾಲಯಗಳಿಗೆ ಬೀಗ ಹಾಕಿರುವುದು ಕಂಡು ಬಂದಿದೆ. ಜೊತೆಗೆ ಬಸ್ ಪ್ರಯಾಣಿಕರ ತಂಗುದಾಣಗಳ ನಿರ್ವಹಣೆ ಸಮರ್ಪಕವಾಗಿಲ್ಲ. ಸಿದ್ದಪ್ಪ ವೃತ್ತ ಬಳಿ ಹೊಸದಾಗಿ ಪ್ರಯಾಣಿಕ ತಂಗುದಾಣ ನಿರ್ಮಿಸಿದ್ದರೂ ಪ್ರಯಾಣಿಕರು ಅಲ್ಲಿಗೆ ಹೋಗದಂತಹ ಪರಿಸ್ಥಿತಿ ಇದೆ. ಯಾರ್‍ಯಾರೊ ತಂಗುದಾಣಗಳಲ್ಲಿ ವಾಸ್ತವ್ಯ ಹೂಡಿರುವ ಪರಿಸ್ಥಿತಿ ಕಂಡು ಬರುತ್ತಿದೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, 6 ಶೌಚಾಲಯಗಳ ನಿರ್ವಹಣೆ ಸಂಬಂಧ ಮರು ಟೆಂಡರ್ ಕರೆಯಾಗಿದೆ. ಟೆಂಡರ್‌ಗೆ ಯಾರೂ ಮುಂದೆ ಬಾರದ ಹಿನ್ನೆಲೆಯಲ್ಲಿ ಕೆಲವೆಡೆ ನಿರ್ವಹಣೆ ಸಮಸ್ಯೆಯಾಗಿದೆ ಎಂದು ಉತ್ತರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಎನ್‌ಜಿಓಗಳಿಗೆ ವಹಿಸಿ ನಿರ್ವಹಣೆ ಮಾಡಿಸುವ ಬಗ್ಗೆ ಪರಿಶೀಲಿಸಿ. ದಸರಾ ಸಮೀಪದಲ್ಲಿದ್ದು, ನಗರದಲ್ಲಿ ಪ್ರವಾಸಿಗರ ಸಂಖ್ಯೆ ಸಹ ಹೆಚ್ಚಳವಾಗಲಿದೆ. ಹಾಗಾಗಿ ಈ ವಾರದೊಳಗೆ ಶೌಚಾಲಯಗಳ ಸಂಬಂಧ ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

ಚರಂಡಿ ವ್ಯವಸ್ಥೆ ಪುನರ್‌ನಿರ್ಮಾಣ: ಇಡೀ ಅಶೋಕಪುರಂನಲ್ಲಿ ಚರಂಡಿ ವ್ಯವಸ್ಥೆಯನ್ನು ಪ್ರಸ್ತುತಕ್ಕೆ ಪೂರಕವಾಗಿ ಪುನರ್‌ನಿರ್ಮಾಣ ಮಾಡಬೇಕಿದೆ. ಈ ಸಂಬಂಧ ಡಿಪಿಆರ್ ಸಿದ್ಧಪಡಿಸುವಂತೆ ಪಾಲಿಕೆ ಆಯುಕ್ತರಿಗೆ ಶಾಸಕರು ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಈ ಬಗ್ಗೆ ಮಾತನಾಡಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಇದೇ ವೇಳೆ ಶಾಸಕರು ತಿಳಿಸಿದರು.

ಜನಸ್ನೇಹಿ ಆಗಬೇಕು: ಸಾರ್ವಜನಿಕರು ಪಾಲಿಕೆಯಲ್ಲಿ ಆಗಬೇಕಿರುವ ಸಣ್ಣ ಸಣ್ಣ ಕೆಲಸಗಳಿಗೂ ಶಾಸಕರ ಕಚೇರಿಗೆ ಬರುವುದು ಆಗುತ್ತಿದ್ದು, ಇದಕ್ಕೆ ಎಡೆಯಾಗದಂತೆ ಕ್ಷೇತ್ರ ವ್ಯಾಪ್ತಿಯ ಮೂರು ಪಾಲಿಕೆ ವಲಯ ಕಚೇರಿಗಳು ಕಾರ್ಯನಿರ್ವಹಿಸಬೇಕು. ಸಾರ್ವಜನಿಕರ ಕುಂದುಕೊರತೆ ಆಲಿಸಲು ಕಚೇರಿಯಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಬೇಕೆಂದು ಶಾಸಕರು ಸೂಚನೆ ನೀಡಿದರು.

ಅಗತ್ಯವಿರುವೆಡೆ ಪಾರ್ಕ್‌ಗಳಲ್ಲಿ ಲೈಟ್ಸ್, ಜಿಮ್ ಸಾಧನ ಅಳವಡಿಸಬೇಕು. ಕಾಲಮಿತಿಯಲ್ಲಿ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಸ್ಮಶಾನಗಳನ್ನು ಸ್ವಚ್ಛಗೊಳಿಸಲು ಮುಂದಾಗಬೇಕೆಂದೂ ಶಾಸಕರು ಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪಾಲಿಕೆ ಅಧೀಕ್ಷಕ ಇಂಜಿನಿಯರ್ ಕೆ.ಜೆ.ಸಿಂಧೂ, ಹೆಚ್ಚುವರಿ ಆಯುಕ್ತರಾದ ಕುಸುಮಕುಮಾರಿ, ಮುಖ್ಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.


ಮೈಸೂರಲ್ಲಿ ಮುಳ್ಳಂದಿ ಓಡಾಟ...



ಮೈಸೂರಿನ ಜನವಸತಿ ಪ್ರದೇಶದಲ್ಲಿ ಮುಳ್ಳಂದಿ ಓಡಾಟ ಕುಡ ಬರಿದ್ದು ಸಾರ್ವಜನಿಕರು ಆತಂಕ ಗೊಂಡಿದ್ದಾರೆ. ಸಭೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಈ ವಿಷಯ ಪ್ರಸ್ತಾಪಿಸಿದರು. ಮೈಸೂರಿನ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ಹಿಂಭಾಗದ ಪಾರ್ಕ್ ಆಸುಪಾಸಿನಲ್ಲಿ ಮುಳ್ಳಂದಿ ಯೊಂದು ಓಡಾಡುತ್ತಿರುವ ಬಗ್ಗೆ ಸಾರ್ವಜನಿಕರು ಪಾದಯಾತ್ರೆ ವೇಳೆ ನನ್ನ ಗಮನಕ್ಕೆ ತಂದಿದ್ದು, ಅದರ ಓಡಾಟದ ವಿಡಿಯೋ ಸಹ ಮಾಡಿರುವುದನ್ನು ತೋರಿಸಿದ್ದಾರೆ. ನಾನು ಕೂಡಲೇ ಅರಣ್ಯ ಇಲಾಖೆಗೆ ಕ್ರಮ ವಹಿಸಲು ತಿಳಿಸಿದ್ದು, ಪಾಲಿಕೆಯೂ ಈ ಸಂಬಂಧ ಅರಣ್ಯ ಇಲಾಖೆಯೊಂದಿಗೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಬೇಕೆಂದು ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆ.ಆರ್.ಆಸ್ಪತ್ರೆಯಲ್ಲಿ ಲಿವರ್ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರ ಚಿಕಿತ್ಸೆ

72 ವರ್ಷದ ವಯೋವೃದ್ಧರಿಗೆ ಹೊಸ ಜೀವನ


ಯಶಸ್ವಿ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಯೊಂದಿಗೆ ಕೆ.ಆರ್.ಆಸ್ಪತ್ರೆ ವೈದ್ಯರ ತಂಡ

ಮೈಸೂರು, ಸೆ.10(ಎಸ್‌ಬಿಡಿ)– ಮೈಸೂರಿನ ಕೆ.ಆರ್.ಆಸ್ಪತ್ರೆ ವೈದ್ಯರ ತಂಡ ಅಪರೂಪದ ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ವೈದ್ಯಕೀಯ ಕ್ಷೇತ್ರದ ಗಮನ ಸೆಳೆದಿದೆ.

ಲಿವರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 72 ವರ್ಷದ ವೃದ್ಧರೊಬ್ಬರ ಬಲಭಾಗದ ಯಕೃತ್(RIGHT HEPETECTOMY)ಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದು, ಇದಾಗಿ ಕೇವಲ ಎರಡು ವಾರಗಳಲ್ಲಿ ರೋಗಿಯು ಸಂಪೂರ್ಣ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿರುವುದು ಮತ್ತೊಂದು ವಿಶೇಷವಾಗಿದೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ಮೂಲದ 72 ವರ್ಷದ ವೃದ್ಧರೊಬ್ಬರು ತೀವ್ರ ಅನಾರೋಗ್ಯದಿಂದ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಪರೀಕ್ಷೆಗಳ ಮೂಲಕ ಸಮಸ್ಯೆ ಪತ್ತೆಹಚ್ಚಿದ ವೈದ್ಯರು, ರೋಗಿಯ ಯಕೃತ್‌ನ ಶೇ.60ರಷ್ಟು ಭಾಗವನ್ನು ಕತ್ತರಿಸಿ, ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಅವರಿಗೆ ಹೊಸ ಜೀವನ ನೀಡಿದ್ದಾರೆ.

ಯಕೃತ್‌ನ ಹೆಚ್ಚು ಭಾಗ ಕತ್ತರಿಸುವ ವೇಳೆ ಸಾಕಷ್ಟು ಸವಾಲುಗಳು ಎದುರಾಗಿದ್ದವು. ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಅಧಿಕ ರಕ್ತಸ್ರಾವವಾಗುವುದರಿಂದ ಕ್ಯಾವಿಟ್ರಾನ್ ಅಲ್ಟ್ರಾಸಾನಿಕ್ ಸರ್ಜಿಕಲ್ ಆಸ್ಪಿರೇಟರ್ (CUSA) ಎಂಬ ಹೈಟೆಕ್ ಉಪಕರಣ ಅಗತ್ಯವಿರುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿರುವ ಈ ಹೈಟೆಕ್ ಉಪಕರಣ ಕೆ.ಆರ್.ಆಸ್ಪತ್ರೆಯಲ್ಲಿ ಲಭ್ಯವಿಲ್ಲವಾದರೂ ಎಚ್ಚರಿಕೆಯಿಂದ ಶಸ್ತ್ರಚಿಕಿತ್ಸೆ ನಡೆಸಿ, ರೋಗಿಯ ಜೀವ ಉಳಿಸಿದ್ದಾರೆ.

ಶಸ್ತ್ರಚಿಕಿತ್ಸೆ ವಿಭಾಗದ ಡಾ.ಎಸ್. ಚಂದ್ರಶೇಖರ್, ಸರ್ಜಿಕಲ್ ಅಂಕೋಲಜಿ ವಿಭಾಗದ ಕ್ಯಾನ್ಸರ್ ತಜ್ಞ ಡಾ.ನವೀನ್ ಗೌಡ, ಸರ್ಜಿಕಲ್ ಗ್ಯಾಸ್ಟ್ರೋ ವಿಭಾಗದ ಡಾ.ಶ್ರೀವತ್ಸ ಅರವಳಿಕೆ ವಿಭಾಗದ ಡಾ.ವಿ.ವೈ.ಶ್ರೀನಿವಾಸ್, ಡಾ.ದೀಪಾ, ಡಾ.ಪೂಲನ್ ತಂಡ ಈ ಅಪರೂಪದ ಶಸ್ತ್ರಚಿಕಿತ್ಸೆಯಲ್ಲಿ ಯಶಸ್ವಿಯಾಗುವ ಮೂಲಕ ಸರ್ಕಾರಿ ಆಸ್ಪತ್ರೆಗಳ ಬಗೆಗಿನ ನಂಬಿಕೆ ಹೆಚ್ಚಿಸಿದ್ದಾರೆ.

ಈ ಬಗ್ಗೆ ಡಾ.ನವೀನ್ ಗೌಡ ಪ್ರತಿಕ್ರಿಯಿಸಿ, 72 ವರ್ಷ ವಯೋವೃದ್ಧರಿಗೆ ಶಸ್ತ್ರಚಿಕಿತ್ಸೆ ನಡೆಸುವುದು ಸವಾಲಾಗಿತ್ತು. ಯಕೃತ್ ಭಾಗದ ಶೇ.60ರಷ್ಟು ಭಾಗ ತೆಗೆದು ರೋಗಿಯ ಜೀವ ಉಳಿಸುವುದು ಕಷ್ಟಸಾಧ್ಯವೆನಿಸಿದ್ದರೂ ತಂಡದ ಪರಿಶ್ರಮದಿಂದ ಸಾಧ್ಯವಾಗಿದೆ. ಯಾವುದೇ ಅತ್ಯಾಧುನಿಕ ಉಪಕರಣಗಳಿಲ್ಲದೇ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ, ಕೇವಲ ಎರಡು ವಾರದಲ್ಲಿಯೇ ರೋಗಿಯು ಸಂಪೂರ್ಣ ಗುಣಮುಖರಾಗಿರುವುದು ಪವಾಡವಾಗಿದೆ. ಹಾಗಾಗಿ ಸರ್ಕಾರಿ ಆಸ್ಪತ್ರೆ ಬಗ್ಗೆ ಕೀಳರಿಮೆ ಬಿಡಬೇಕು ಎಂದು ಮನವಿ ಮಾಡಿದ್ದಾರೆ.

ಋಣಿಯಾಗಿರುತ್ತೇನೆ: ನನ್ನ ಪಾಲಿಗೆ ದೊಡ್ಡಾಸ್ಪತ್ರೆ(ಕೆ.ಆರ್.ಆಸ್ಪತ್ರೆ) ವೈದ್ಯರು ನಿಜಕ್ಕೂ ದೇವರು. ವಯಸ್ಸಾದ ನನಗೆ ಸಹಜ ಕಾಯಿಲೆಗಳೊಂದಿಗೆ ಕ್ಯಾನ್ಸರ್ ಆಗಿತ್ತು. ಆದರೆ ವೈದ್ಯರು ಆಪರೇಷನ್ ಮಾಡಿ ನನ್ನ ಜೀವ ಉಳಿಸಿದ್ದಾರೆ. ನಾನು ಅವರಿಗೆ ಋಣಿಯಾಗಿರುತ್ತೇನೆ ಎಂದು ಶಸ್ತ್ರಚಿಕಿತ್ಸೆಗೆ ಒಳಗಾದ ವೃದ್ಧರು ತಿಳಿಸಿದ್ದಾರೆ.

ಬಸ್ಸಲ್ಲಿ ಕೆಳಗೆ ಬಿದ್ದ ನಾಣ್ಯ ಎತ್ತಿಕೊಡಲು ಹೇಳಿ ಮಹಿಳೆ ಸರ ಕದ್ದ ಕಳ್ಳಿ!!

ಮೈಸೂರು, ಸೆ.10(ಎಸ್‌ಬಿಡಿ)– ಬಸ್‌ನಲ್ಲಿ ನಾಣ್ಯ ಬೀಳಿಸಿ, ಅದನ್ನು ತೆಗೆದುಕೊಡಲು ಮುಂದಾದ ಮಹಿಳೆಯ ಚಿನ್ನದ ಸರವನ್ನು ಎಗರಿಸಿ ಪರಾರಿಯಾಗಿರುವ ಘಟನೆ ಮೈಸೂರಿನ ನಗರ ಬಸ್ ನಿಲ್ದಾಣದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಕುವೆಂಪುನಗರ ನಿವಾಸಿ ಸಿ.ಎನ್.ಜ್ಯೋತಿ (54) ಅವರು ಅಪರಿಚಿತ ಮಹಿಳೆಗೆ ಸಹಾಯ ಮಾಡಲು ಹೋಗಿ ಸುಮಾರು



2 ಲಕ್ಷ ರೂ. ಮೌಲ್ಯದ ತಮ್ಮ ಚಿನ್ನದ ಸರ ಕಳೆದುಕೊಂಡಿದ್ದಾರೆ.

ಮಳವಳ್ಳಿ ತಾಲೂಕು ಹಲಗೂರು ಗ್ರಾಮದಲ್ಲಿರುವ ತವರು ಮನೆಗೆ ಹೋಗಿದ್ದ ಜ್ಯೋತಿ ಅವರು ಸೋಮವಾರ ರಾತ್ರಿ ಬಸ್‌ನಲ್ಲಿ ವಾಪಸ್ಸಾಗಿ, ಹಾರ್ಡಿಂಜ್ ವೃತ್ತದಲ್ಲಿ ಇಳಿದುಕೊಂಡಿದ್ದಾರೆ. ಅಲ್ಲಿಂದ ಸಿಟಿ ಬಸ್‌ನಲ್ಲಿ ನಗರ ಬಸ್ ನಿಲ್ದಾಣಕ್ಕೆ ತೆರಳಿದ್ದಾರೆ. ಆ ವೇಳೆ ಮುಂಭಾಗದ ಸೀಟ್‌ನಲ್ಲಿ ಕುಳಿತಿದ್ದ ಸುಮಾರು 30 ವರ್ಷದ ಮಹಿಳೆ ಎದ್ದು ನಿಂತಾಗ ಅವರ ಕೈಯಲ್ಲಿದ್ದ ನಾಣ್ಯ ಕೆಳಗೆ ಬಿದ್ದಿದೆ. ಅದನ್ನು ಎತ್ತಿಕೊಡುವಂತೆ ಜ್ಯೋತಿ ಅವರಿಗೆ ಮನವಿ ಮಾಡಿದ್ದಾರೆ. ಜ್ಯೋತಿ ಅವರು ನಾಣ್ಯವನ್ನು ತೆಗೆದುಕೊಂಡು ಮೇಲೇಳುವಷ್ಟರಲ್ಲಿ ಅಪರಿಚಿತ ಮಹಿಳೆ ನಾಪತ್ತೆಯಾಗಿದ್ದಳು. ತಮ್ಮ ಕೊರಳಿನಲ್ಲಿದ್ದ ಚಿನ್ನದ ಸರವೂ ಇರಲಿಲ್ಲ.

ಈ ಸಂಬಂಧ ಜ್ಯೋತಿ ಅವರು ನೀಡಿರುವ ದೂರಿನನ್ವಯ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮನೆ ಬೀಗ ಮುರಿದು ನಗದು, ಚಿನ್ನಾಭರಣ ಕಳವು

ಮೈಸೂರು, ಸೆ.10(ಎಸ್‌ಬಿಡಿ)– ಮನೆ ಬೀಗ ಮುರಿದು ನಗದು ಹಾಗೂ ಚಿನ್ನಾಭರಣ ದೋಚಿರುವ ಘಟನೆ ಮೈಸೂರಿನ ಸರ್ದಾರ್ ವಲ್ಲಭಬಾಯ್ ಪಟೇಲ್‌ನಗರದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಡಿ.ಸುಬ್ಬಣ್ಣ ಅವರ ಮನೆಗೆ ನುಗ್ಗಿರುವ ಖದೀಮರು, 25 ಸಾವಿರ ರೂ. ನಗದು ಹಾಗೂ ಸುಮಾರು 20 ಸಾವಿರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಕದ್ದೊಯ್ದಿದ್ದಾರೆ.

ಗೌರಿ–ಗಣೇಶ ಹಬ್ಬಕ್ಕೆಂದು ಸುಬ್ಬಣ್ಣ ಕುಟುಂಬ ಸಮೇತ ಸೆ.5ರಂದು ಸಂಜೆ ಚಾಮರಾಜನಗರ ಜಿಲ್ಲೆಯ ಸ್ವಗ್ರಾಮಕ್ಕೆ ತೆರಳಿದ್ದರು. ಸೆ.8ರಂದು ಸಂಜೆ ಮನೆಗೆ ವಾಪಸ್ಸಾದಾಗ ಮುಂಬಾಗಿಲ ಲಾಕ್ ಮುರಿದಿತ್ತು. ಒಳಹೋಗಿ ನೋಡಿದಾಗ ಕೊಠಡಿಯಲ್ಲಿದ್ದ ಬೀರುವಿನ ಲಾಕರ್ ಮುರಿದು ಕಳ್ಳತನ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಕ್ಸ್‌ಟ್ರಾ ಇನ್ನಿಂಗ್ಸ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಸೆಪ್ಟೆಂಬರ್ 11 ಬುಧವಾರ 2024

ಪುಟಗಳು: 4

ದಸರಾಗೆ ಅಂದಗೊಳಿಸುವ ಕಾರ್ಯ ಆರಂಭ



ದಸರಾ ಅಂಗವಾಗಿ ಅರಮನೆ ಆವರಣದಲ್ಲಿ ಪಾಟ್‌ಗಳಲ್ಲಿ ಬಗೆ ಬಗೆಯ ಹೂವಿನ ಗಿಡಗಳನ್ನು ಬೆಳೆಸಿರುವುದು.

ಮೈಸೂರು, ಸೆ.10(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ಚುರುಕುಗೊಂಡಿದೆ. ದಸರಾ ಮಹೋತ್ಸವದ ಕೇಂದ್ರ ಸ್ಥಳ ಮೈಸೂರು ಅರಮನೆಯಲ್ಲಿ ನವರಾತ್ರಿ ವೇಳೆ ವಿವಿಧ ಕಾರ್ಯಕ್ರಮ ಜರುಗಲಿದ್ದು, ವಿವಿಧೆಡೆಯಿಂದ ಆಗಮಿಸುವ ಪ್ರವಾಸಿಗರ ದಂಡು ಅರಮನೆಗೆ ಬಂದು ಕಾರ್ಯಕ್ರಮ ಮಾತ್ರವಲ್ಲದೆ, ಅರಮನೆ ವೀಕ್ಷಿಸಿ ಸಂಭ್ರಮಿಸಲಿದೆ. ಈ ಹಿನ್ನೆಲೆಯಲ್ಲಿ ದಸರಾ ಮಹೋತ್ಸವದಲ್ಲಿ ಪ್ರತಿವರ್ಷವೂ ಅರಮನೆಗೆ ಬಣ್ಣ ಬಳಿಯಲಾಗುತ್ತಿದೆ. ಈ ಸಾಲಿನ ದಸರಾ ಮಹೋತ್ಸವಕ್ಕೆ ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ಆರಂಭಿಸಲಾಗಿದೆ.



ಅರಮನೆಯ ಜಯಮಾರ್ತಾಂಡ ದ್ವಾರದ ಗೋಪುರಗಳಿಗೆ ಬಣ್ಣ ಬಳಿಯುತ್ತಿರುವುದು.

ಅರಮನೆಯ ಕಾಂಪೌಂಡ್ ಗೋಡೆಗಳಿಗೆ ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ. ಆರಂಭಿಕ ಹಂತದಲ್ಲಿ ಅರಮನೆ ಸುತ್ತಲೂ ಇರುವ ಕಾಂಪೌಂಡ್, ದ್ವಾರದ ಗೋಡೆಗಳಿಗೆ ಬಣ್ಣ ಬಳಿಯುವ ಕಾರ್ಯ ಬಿರುಸಾಗಿ ಸಾಗಿದೆ. ಅ.3ರಿಂದ 12ರವರೆಗೆ ನವರಾತ್ರಿ ಮಹೋತ್ಸವ ಜರುಗಲಿದ್ದು, ಅಷ್ಟರಲ್ಲಾಗಲೇ ಅರಮನೆಯಲ್ಲಿ ಸಿದ್ಧತಾ ಕಾರ್ಯ ಪೂರ್ಣಗೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧ ಕಾರ್ಯಗಳು ತ್ವರಿತಗತಿಯಲ್ಲಿ ನಡೆಸಲಾಗುತ್ತಿದೆ.

ಅರಮನೆ ಆವರಣದಲ್ಲಿ ಸಸ್ಯಕಾಶಿಗೂ ಸಿದ್ಧತೆ: ನವರಾತ್ರಿ ಸಂದರ್ಭದಲ್ಲಿ ಅರಮನೆ ಆವರಣದಲ್ಲಿ ಸಂಭ್ರಮ ಮನೆ ಮಾಡಲಿದ್ದು, ಅರಮನೆ ಆವರಣದಲ್ಲಿರುವ ವಿವಿಧ ಪಾರ್ಕ್‌ಗಳಲ್ಲೂ ಬಣ್ಣ ಬಣ್ಣದ ಹೂವಿನ ಗಿಡಗಳು ತಲೆ ಎತ್ತಲಿವೆ. ಈಗಾಗಲೇ ಅರಮನೆಯ ತೋಟಗಾರಿಕಾ ಸಿಬ್ಬಂದಿ ನೂರಾರು ಗಿಡ ಬೆಳೆಸಿದ್ದು, ಅವುಗಳನ್ನು ಪಾಲನೆ ಮಾಡುತ್ತಿದ್ದಾರೆ. ವಿವಿಧ ತಳಿಯ, ಬಣ್ಣ ಬಣ್ಣದ ಆಕರ್ಷಕ ಹೂವಿನ ಗಿಡಗಳನ್ನು ಪಾಠಗಳಲ್ಲಿ ಬೆಳೆಸಲಾಗಿದೆ. ಹೂವಿನ ಗಿಡಗಳಿಗೆ ಅಂತಿಮ ಹಂತದ ಪಾಲನೆ ಮಾಡಲಾಗುತ್ತಿದ್ದು, ಇನ್ನು 15 ದಿನದ ನಂತರ ಪಾಟ್‌ಗಳನ್ನು ಅರಮನೆ ಆವರಣದ ಪಾರ್ಕ್‌ಗಳಲ್ಲಿ ವಿವಿಧ ಆಕಾರದಲ್ಲಿ ಜೋಡಣೆ ಮಾಡಲಾಗುತ್ತದೆ.



ದಸರಾ ಗಜಪಡೆಗೆ ಮಹಾಮಜ್ಜನ.

ಮೈಸೂರಿಂದ ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಗೆ ನೇರ ಬಸ್ ಸಂಪರ್ಕ ಕಲ್ಪಿಸಿ

ಮೈಸೂರಿನಲ್ಲಿ ನೆಲೆಸಿರುವ ಸಾಫ್ಟ್‌ವೇರ್ ಇಂಜಿನಿಯರ್ಸ್ ಮನವಿ

ಮೈಸೂರು, ಸೆ.10(ಬಿಎಲ್‌ಯು)– ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ನೇರವಾಗಿ ಪ್ರತಿ ದಿನ ಕೆಎಸ್‌ಆರ್‌ಟಿಸಿ ಬಸ್ ಸಂಪರ್ಕ ಕಲ್ಪಿಸುವಂತೆ ಮೈಸೂರಿನಲ್ಲಿ ನೆಲೆಸಿರುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಸೇರಿದಂತೆ ಹಲವರು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಸಿಲಿಕಾನ್ ಸಿಟಿ ಬೆಂಗಳೂರಿನ ಐಟಿ ಹಬ್ ಎಲೆಕ್ಟ್ರಾನಿಕ್ ಸಿಟಿ. ಇನ್ಫೋಸಿಸ್, ವಿಪ್ರೋ, ಟಿಸಿಎಸ್, ಸೀಮನ್ಸ್, ಬಾಷ್, ಬಯೋಕಾನ್, ಟೆಕ್ ಮಹೇಂದ್ರ ಹೀಗೆ ನೂರಾರು ಸಾಫ್ಟ್‌ವೇರ್ ಸೇರಿದಂತೆ ಬೃಹತ್ ನಾನಾ ಕಂಪನಿಗಳು ಎಲೆಕ್ಟ್ರಾನಿಕ್ ಸಿಟಿಯಲ್ಲಿದೆ.

ಇಲ್ಲಿ ಲಕ್ಷಾಂತರ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಕೆಲಸ ನಿರ್ವಹಿಸುತ್ತಿದ್ದು, ಇವರಲ್ಲಿ ಸಾವಿರಾರು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮೈಸೂರಲ್ಲಿ ನೆಲೆಸಿದ್ದಾರೆ. ಮೈಸೂರಿನಲ್ಲೇ ವಾಸವಿರುವ ಬಹಳಷ್ಟು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಸೇರಿದಂತೆ ಹಲವರು ಪ್ರತಿ ದಿನ ಬೆಂಗಳೂರಿಗೆ ಪ್ರಯಾಣ ಮಾಡುತ್ತಾರೆ. ಕೆಲವರು ವಾರಕ್ಕೆ ಒಂದು ಅಥವಾ ಎರಡು ಬಾರಿ ಬೆಂಗಳೂರಿಗೆ ಹೋಗಿ ಬರುತ್ತಾರೆ.

ಮೈಸೂರಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹೊರಟರೆ ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣ, ಅಲ್ಲಿಂದ ಮತ್ತೊಂದು ಬಸ್‌ನಲ್ಲಿ ಮೆಜೆಸ್ಟಿಕ್‌ಗೆ, ಅಲ್ಲಿಂದ ಎಲೆಕ್ಟ್ರಾನಿಕ್ ಸಿಟಿ, ಸಿಲ್ಕ್ ಬೋರ್ಡ್, ಬೊಮ್ಮನಹಳ್ಳಿಗೆ ಹೋಗಬೇಕು. ಬೆಂಗಳೂರಿನಲ್ಲಿ ಭಾರಿ ಸಂಚಾರ ದಟ್ಟಣೆ. ಅದರಲ್ಲೂ ಎಲೆಕ್ಟ್ರಾನಿಕ್ ಸಿಟಿ ಸಮೀಪವಿರುವ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ದಿನಕ್ಕೆ 45 ಸಾವಿರ ವಾಹನಗಳು ಹಾದು ಹೋಗುತ್ತವೆ. ಇದರಿಂದ ಬೆಂಗಳೂರಿನಿಂದ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಬಂದು, ಅಲ್ಲಿಂದ ಮೆಜೆಸ್ಟಿಕ್‌ಗೆ ಹೋಗಿ, ಮತ್ತೆ ಮೆಜೆಸ್ಟಿಕ್‌ನಿಂದ ಎಲೆಕ್ಟ್ರಾನಿಕ್ ಸಿಟಿಗೆ ಹೋಗುವಷ್ಟರಲ್ಲಿ ಕನಿಷ್ಟ ಐದಾರು ಗಂಟೆ ಸಮಯ ಹಿಡಿಯುತ್ತದೆ. ಮುಂಜಾನೆ 5 ಗಂಟೆಗೆ ಹೊರಟರೂ ಆಫೀಸ್ ತಲುಪುವುದು ಬೆಳಿಗ್ಗೆ 11 ಗಂಟೆ ಆಗಬಹುದು.

ಮೈಸೂರಿನಿಂದ ಬೆಂಗಳೂರಿಗೆ ಬಹಳಷ್ಟು ರೈಲು ಸಂಪರ್ಕವಿದೆ. ಆದರೆ ಪ್ರತಿ ರೈಲಿನಲ್ಲಿ ಪ್ರಯಾಣಿಕರ ದಟ್ಟಣೆ ಇದ್ದೇ ಇರುತ್ತದೆ. ಬಸ್‌ನಲ್ಲಾದರೆ ಪ್ರಯಾಣ ಮಾಡುತ್ತಲೇ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಾ ಹೋಗಬಹುದು. ರೈಲಿನಲ್ಲಿ ಒಮ್ಮೊಮ್ಮೆ ನಿಲ್ಲಲು ಸಾಧ್ಯವಾಗದ ಪರಿಸ್ಥಿತಿ ಇರುತ್ತದೆ. ಆದ ಕಾರಣ ಬಹಳಷ್ಟು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಪ್ರಯಾಣ ಮಾಡುತ್ತಾರೆ.

ಇದಲ್ಲದೆ ಪ್ಲಾಟ್‌ಫಾರಂ ಖಾಲಿ ಇಲ್ಲದ ಸಮಯದಲ್ಲಿ ರೈಲುಗಳು ಕನಿಷ್ಠ ಅರ್ಧ ಗಂಟೆ ರೈಲ್ವೆ ನಿಲ್ದಾಣದ ಔಟರ್‌ನಲ್ಲಿ ನಿಂತಿರುತ್ತವೆ. ಇದರಿಂದಲೂ ಆಫೀಸ್‌ಗೆ ಹೋಗುವುದು ಮತ್ತಷ್ಟು ವಿಳಂಬವಾಗುತ್ತದೆ.

ಇದರಿಂದ ಪ್ರತಿದಿನ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ಪ್ರಯಾಣ ಮಾಡುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬಹಳಷ್ಟು ಜನರಿಗೆ ಬೆಂಗಳೂರು ಒಗ್ಗುವುದಿಲ್ಲ, ಜೀವನ ನಿರ್ವಹಣೆ ದುಬಾರಿ. ಆದ ಕಾರಣ ಬಹಳಷ್ಟು ಜನರು ಮೈಸೂರಿನಿಂದಲೇ ದಿನ ನಿತ್ಯ ಪ್ರಯಾಣ ಮಾಡುತ್ತಿದ್ದಾರೆ.

ಈ ಹಿನ್ನೆಲೆ ಮೈಸೂರಿನಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ನೇರ ಬಸ್ ಸಂಪರ್ಕ ಕಲ್ಪಿಸುವಂತೆ ಮೈಸೂರಿನ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಮನವಿ ಮಾಡಿದ್ದಾರೆ. ಆಗ ಬೆಂಗಳೂರು ನಗರ ಪ್ರವೇಶಿಸುವ ಅಗತ್ಯವಿರುವುದಿಲ್ಲ. ಮೈಸೂರಿನಿಂದ ಬೆಂಗಳೂರಿನ ಕೆಂಗೇರಿ, ನೈಸ್ ರಸ್ತೆ ಮೂಲಕ ನೇರವಾಗಿ ಎಲೆಕ್ಟ್ರಾನಿಕ್ ಸಿಟಿ ತಲುಪಬಹುದು. ಇದರಿಂದ ತಮಗೆ ತುಂಬಾ ಅನುಕೂಲವಾಗುತ್ತದೆ ಎಂಬುದು ಸಾಫ್ಟ್‌ವೇರ್ ಇಂಜಿನಿಯರ್‌ಗಳ ಮನವಿ.



ವಾರಕ್ಕೆ ಒಂದು ದಿನ ಬಸ್ ಸೌಲಭ್ಯ ಕಲ್ಪಿಸಬಹುದು

ಮೈಸೂರಿನಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ಬಸ್ ಸಂಪರ್ಕ ಕಲ್ಪಿಸುವ ಬಗ್ಗೆ ಹಲವರು ಮನವಿ ಮಾಡಿದ್ದು, ಪರಿಶೀಲನೆ ಮಾಡುತ್ತಿದ್ದೇವೆ. ಸಾಫ್ಟ್‌ವೇರ್ ಇಂಜಿನಿಯರ್‌ಗಳು ಬೇಡಿಕೆ ಸಲ್ಲಿಸಿರುವಂತೆ ಪ್ರತಿದಿನ ಬಸ್ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲ. ವಾರಕ್ಕೆ ಒಂದು ದಿನ ಈ ವ್ಯವಸ್ಥೆ ಮಾಡಬಹುದು. ಪ್ರತಿದಿನ ಬಸ್ ಸಂಪರ್ಕ ಕಲ್ಪಿಸಿದರೆ ಬೆರಳೆಣಿಕೆಯಷ್ಟು ಪ್ರಯಾಣಿಕರು ಪ್ರಯಾಣ ಮಾಡಿದರೆ ಸಂಸ್ಥೆಗೆ ನಷ್ಟವಾಗುತ್ತದೆ. ಕನಿಷ್ಠ 50 ಪ್ರಯಾಣಿಕರಿದ್ದರೆ ಈ ಸೌಲಭ್ಯ ಕಲ್ಪಿಸಲು ನಮಗೆ ಯಾವುದೇ ಅಭ್ಯಂತರವಿಲ್ಲ. ಆದರೆ ಈ ಬಗ್ಗೆ ಡಿಮ್ಯಾಂಡ್ ಸರ್ವೆ ಮಾಡಿ ಅಂಕಿ ಅಂಶಗಳ ಸಹಿತ ಮಾಹಿತಿ ನೀಡುವಂತೆ ಸಲಹೆ ನೀಡಿದ್ದೇವೆ. ಸೋಮವಾರ ಒಂದು ದಿನ ಮೈಸೂರಿನಿಂದ ಎಲೆಕ್ಟ್ರಾನಿಕ್ ಸಿಟಿ ಹಾಗೂ ಶುಕ್ರವಾರ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಿಂದ ಮೈಸೂರಿಗೆ ಬಸ್ ಸಂಪರ್ಕ ಕಲ್ಪಿಸಬಹುದು.

– ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ, ಮೈಸೂರು.

ಡಿಮ್ಯಾಂಡ್ ಸರ್ವೆ ಮಾಡಿದ್ದೇವೆ

ಮೈಸೂರಿನಿಂದ ಎಲೆಕ್ಟ್ರಾನಿಕ್ ಸಿಟಿಗೆ ಪ್ರಯಾಣ ಮಾಡುವವರ ಸಂಖ್ಯೆ ತುಂಬಾ ಇದೆ. ಈ ಬಗ್ಗೆ ನಾವು ಈಗಾಗಲೇ ಮಾಡಿರುವ ಡಿಮ್ಯಾಂಡ್ ಸರ್ವೆಯಿಂದ ಇದು ಖಚಿತವಾಗಿದೆ. ವಾಟ್ಸಾಪ್ ಗ್ರೂಪ್ ಮಾಡಿ ಎಲ್ಲರ ಮಾಹಿತಿ ಸಂಗ್ರಹಿಸಿದ್ದೇವೆ. ಈ ವಿವರವನ್ನು ಈಗಾಗಲೇ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಇ–ಮೇಲ್ ಮಾಡಿದ್ದೇವೆ.

– ಯೋಗೇಂದ್ರ, ಮೈಸೂರು ವಾಸಿ

ಕೈಗಾರಿಕಾ ಪ್ರದೇಶದ ರಸ್ತೆಗಳ 20 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ

ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್

ಮೈಸೂರು, ಸೆ.10(ಆರ್‌ಕೆ)– ಮೈಸೂರಿನ ಕೈಗಾರಿಕಾ ಬಡಾವಣೆಗಳ ಹೊಂಡ ಬಿದ್ದಿರುವ ರಸ್ತೆಗಳನ್ನು 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್ ತಿಳಿಸಿದ್ದಾರೆ.

ನಗರಸಭಾ ವ್ಯಾಪ್ತಿಗೆ ಬರುವ ಹೂಟಗಳ್ಳಿ, ಬೆಳವಾಡಿ, ಕೂರ್ಗಳ್ಳಿ, ಹೆಬ್ಬಾಳು ಮತ್ತು ಬೆಳಗೊಳ ಕೈಗಾರಿಕಾ ಬಡಾವಣೆಯಲ್ಲಿ ಗುಂಡಿ ಬಿದ್ದಿರುವ ಪ್ರಮುಖ ರಸ್ತೆಗಳನ್ನು ಆಸ್ಫಾಲ್ಟಿಂಗ್ ಮಾಡಿ ಕಾಂಕ್ರೀಟ್ ಬಾಕ್ಸ್ ಡ್ರೈನ್‌ನೊಂದಿಗೆ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಈ ಯೋಜನೆಗೆ ಇಲಾಖೆಯಿಂದ ಅನುಮೋದನೆ ದೊರೆತಿದ್ದು, ಇಷ್ಟರಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದ್ದಾರೆ.

ಸುಮಾರು 5,500 ಎಕರೆ ಪ್ರದೇಶದ ಕೈಗಾರಿಕಾ ಬಡಾವಣೆಗಳಲ್ಲಿ 2,500 ಸೂಕ್ಷ್ಮ, ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳಿದ್ದು, 200 ಬಗೆಯ ಉತ್ಪನ್ನ ತಯಾರಿಸುತ್ತಿವೆ ಎಂದು ಹೆಬ್ಬಾಳು ಕೈಗಾರಿಕಾ ಸಂಘದ ಸುರೇಶ್ ಜೈನ್ ತಿಳಿಸಿದ್ದಾರೆ.

ಹೂಟಗಳ್ಳಿ ನಗರಸಭೆಯಾದ ಬಳಿಕ ಎರಡು ವರ್ಷಗಳಲ್ಲಿ ಕೈಗಾರಿಕೋದ್ಯಮಗಳಿಂದ 40 ಕೋಟಿ ರೂ. ತೆರಿಗೆ ಪಾವತಿಯಾಗಿದೆ. ಬಡಾವಣೆಗಳ ನಿರ್ವಹಣೆಗಾಗಿ ಕೆಐಎಡಿಬಿಗೂ ಎಕರೆಗೆ 15,000 ರೂ. ರಂತೆ ನಿರ್ವಹಣಾ ವೆಚ್ಚವನ್ನು ಪಾವತಿಸುತ್ತಿದ್ದೇವೆ. ಆದರೂ ರಸ್ತೆ, ನೀರು, ಚರಂಡಿ, ಬೀದಿದೀಪ, ಸ್ವಚ್ಛತೆಯಂತಹ ಮೂಲಸೌಲಭ್ಯಗಳನ್ನು ಒದಗಿಸದಿರುವುದರಿಂದ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಕೋರಿದರೂ ಪ್ರಯೋಜನವಾಗಿಲ್ಲ ಎಂದು ಅವರು ತಿಳಿಸಿದರು.

ಲೋಕಾಯುಕ್ತ: ದೂರು ಸ್ವೀಕರಿಸುವ ಕಾರ್ಯಕ್ರಮ

ಮೈಸೂರು,ಸೆ.10–ಮೈಸೂರು ವಿಭಾಗದ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಬಗ್ಗೆ ಸಂಬಂಧ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಸೆ.18ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಮೈಸೂರು ತಾಲೂಕಿನ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಸ್ಕೃತಿ ರಕ್ಷಣೆ ನಮ್ಮೆಲ್ಲರ ಕರ್ತವ್ಯ

ಸ್ನೇಹ–ಸಮ್ಮಿಲನ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆಶಿ ಅಭಿಮತ



ಅಮೆರಿಕಾದ ಮೆರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರದಲ್ಲಿ ಆಯೋಜಿಸಿದ್ದ ಸ್ನೇಹ–ಸಮ್ಮಿಲನ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಶೀರ್ವಾದ ಪಡೆದರು.

ಮೈಸೂರು, ಸೆ. 10– ನಮ್ಮ ಸಂಸ್ಕೃತಿ ಹಾಗೂ ನಮ್ಮತನವನ್ನು ಕಾಪಾಡಿಕೊಳ್ಳಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಅಮೆರಿಕಾದ ಮೆರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರದಲ್ಲಿ ಕಾವೇರಿ ಕನ್ನಡ ಸಂಘದ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸ್ನೇಹ–ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಇದರ ಮಧ್ಯೆ ಸಮಾಜಕ್ಕೆ ಏನನ್ನಾದರೂ ಒಳ್ಳೆಯದನ್ನು ಮಾಡುತ್ತಿರಬೇಕು.

ಸುತ್ತೂರು ಶ್ರೀಮಠ ಅಮೆರಿಕಾದಲ್ಲಿರುವ ಭಾರತೀಯರ ಕಷ್ಟ–ಸುಖಗಳಿಗೆ ಸ್ಪಂದಿಸುವುದರೊಂದಿಗೆ ನಮ್ಮ ಸಂಸ್ಕೃತಿ–ಸಂಸ್ಕಾರಗಳನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿ ಸೇವೆಯನ್ನು ಸಲ್ಲಿಸುತ್ತಿದೆ. ಅಮೆರಿಕಾದಲ್ಲಿ ಪೂಜ್ಯರ ಸಾನ್ನಿಧ್ಯದಲ್ಲಿ ಕನ್ನಡಿಗರೆಲ್ಲರೂ ಸಮ್ಮಿಲನಗೊಂಡಿರುವುದು ನಮ್ಮೆಲ್ಲರ ಸೌಭಾಗ್ಯ. ಇದು ಭಕ್ತರು ಮತ್ತು ಭಗವಂತನ ನಡುವೆ ಅವಿನಾಭಾವ ಸಂಬಂಧವನ್ನು ಸೂಚಿಸುತ್ತದೆ.

ಸುತ್ತೂರು ಶ್ರೀಮಠದ ಸೇವೆ ಅನನ್ಯವಾದುದು. ಪೂಜ್ಯರು, ಅನೇಕ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ನೀಡುವ ಕಾಯಕವನ್ನು ಮಾಡುತ್ತಿದ್ದಾರೆ. ಒಂದು ಸರ್ಕಾರ ಮಾಡಬೇಕಾದ ಕೆಲಸವನ್ನು ಶ್ರೀಮಠ ಮಾಡುತ್ತಿದೆ. ಪೂಜ್ಯರು ಕೈಗೊಂಡಿರುವ ಕಾರ್ಯಗಳಿಗೆ ನಾವೆಲ್ಲರೂ ಕೈ ಜೋಡಿಸಬೇಕು ಎಂದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಆಶೀರ್ವಚನ ನೀಡುತ್ತಾ, ಡಿ.ಕೆ.ಶಿವಕುಮಾರ್ ಅವರು ಉತ್ತಮ ಆಡಳಿತಗಾರರು. ಅವರು ರಾಜಕೀಯ ಜೀವನದಲ್ಲಿ ಅನೇಕ ಏಳು–ಬೀಳುಗಳನ್ನು ಕಂಡಿರುವವರು. ಎಲ್ಲವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಮುನ್ನಡೆಸುತ್ತಿದ್ದಾರೆ. ಅತ್ಯುತ್ತಮ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಸಮಸ್ಯೆಗಳನ್ನು ಅತ್ಯಂತ ಧೈರ್ಯವಾಗಿ ಎದುರಿಸುವ ಶಕ್ತಿ ಅವರಲ್ಲಿದೆ ಎಂದು ತಿಳಿಸಿದರು.

ಅಕ್ಕದ ಪದಾಧಿಕಾರಿಗಳಾದ ಬೆನ್ ಚಿಕ್ಕಸ್ವಾಮಿ, ರವಿಡಂಕನಕೋಟೆ, ದಯಾ ಆದಪ್ಪ, ಕಾವೇರಿ ಕನ್ನಡ ಕೂಟದ ಅಧ್ಯಕ್ಷ ಸುದರ್ಶನ್, ಅನಿವಾಸಿ ಭಾರತೀಯರು ಹಾಗೂ ಜೆಎಸ್‌ಎಸ್ ಮಿಷನ್‌ನ ಸ್ವಯಂ ಸೇವಕರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಾಗಶಂಕರ್ ಸ್ವಾಗತಿಸಿದರು. ಮುರಳೀಧರ ಪೈ ಪ್ರಾರ್ಥಿಸಿದರು. ಶ್ರೀಮತಿ ಶುಭಾ ಪ್ರಭು ಕಾಮತ್ ವಂದಿಸಿದರು.

ರಾಜ್ಯದಲ್ಲಿ ಭಯೋತ್ಪಾದನೆ ಹತ್ತಿಕ್ಕಲು ವಿಶೇಷ ಟಾಸ್ಕ್‌ಫೋರ್ಸ್ ರಚನೆಗೆ ವಿಪಕ್ಷ ನಾಯಕ ಆಗ್ರಹ

ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ; ರಾಮೇಶ್ವರಂ ಕೆಫೆ ಸ್ಫೋಟ ಗಂಭೀರವಾಗಿ ಪರಿಗಣಿಸದಿರುವ ಬಗ್ಗೆ ಆಕ್ರೋಶ



ಆರ್.ಅಶೋಕ್

ಬೆಂಗಳೂರು, ಸೆ.10(ಕೆಎಂಶಿ)–ಕರ್ನಾಟಕದಲ್ಲಿ ಭಯೋತ್ಪಾದನಾ ಚಟುವಟಿಕೆ ನಿಯಂತ್ರಣಕ್ಕೆ ವಿಶೇಷ ಟಾಸ್ಕ್‌ಫೋರ್ಸ್ ರಚಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಕ್ಕೆ ನುಸುಳಿರುವ ಬಾಂಗ್ಲಾ ಪ್ರಜೆಗಳನ್ನು ಕೂಡಲೇ ಪತ್ತೆ ಮಾಡಿ ಹೊರ ಹಾಕುವ ಕೆಲಸ ಮಾಡಬೇಕು. ನಿರ್ಲಕ್ಷಿಸಿದರೆ ಕರ್ನಾಟಕ ಮುಂದೊಂದು ದಿನ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಭಯೋತ್ಪಾದಕರ ದುಷ್ಕೃತ್ಯಕ್ಕೆ ರಾಜ್ಯದ ಜನರ ಬದುಕು ಬಲಿಯಾಗಬಾರದು. ಭಯೋತ್ಪಾದನೆಯ ಸ್ಲೀಪರ್ ಸೆಲ್‌ಗಳನ್ನು ಪತ್ತೆ ಮಾಡಬೇಕು. ಐಟಿ–ಬಿಟಿ ರಾಜಧಾನಿ ಬೆಂಗಳೂರಿನಲ್ಲಿ ಭಯದ ವಾತಾವರಣ ಸೃಷ್ಟಿಸಿ, ಆರ್ಥಿಕತೆ ನಾಶ ಮಾಡುವ ಯೋಜನೆ ರೂಪಿಸಲಾಗಿತ್ತು ಎಂಬುದು ಇತ್ತೀಚಿನ ಕೃತ್ಯಗಳಿಂದ ಬಯಲಾಗಿದೆ. ಕಾಂಗ್ರೆಸ್‌ನ ವಿಧಾನಪರಿಷತ್ ಸದಸ್ಯರೊಬ್ಬರು, ಬಾಂಗ್ಲಾ ಮಾದರಿ ರಾಜ್ಯದಲ್ಲೂ ದಂಗೆ ನಡೆಯಲಿದೆ ಎಂಬ ಬೆದರಿಕೆ ಹಾಕಿದ್ದರು. ನಕಲಿ ಆಧಾರ್ ಕಾರ್ಡ್ ಬಳಸಿ ಬಾಂಗ್ಲಾದೇಶದ ಅಕ್ರಮ ವಲಸಿಗರು ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಾರೆ, ಇಂತಹವರಿಂದ ಭಯೋತ್ಪಾದನಾ ಚಟುವಟಿಕೆ ಹೆಚ್ಚುತ್ತಿದೆ. ರಾಜ್ಯ ಗೃಹ ಇಲಾಖೆ ವಿಶೇಷ ಟಾಸ್ಕ್‌ಫೋರ್ಸ್ ರಚಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬೆಂಗಳೂರಿನಲ್ಲಿನ ಬಿಜೆಪಿ ಪ್ರಧಾನ ಕಚೇರಿಯನ್ನು ಬಾಂಬ್ ಇಟ್ಟು ಸ್ಫೋಟಿಸುವ ಭಯೋತ್ಪಾದಕರ ಸಂಚು ಅತ್ಯಂತ ಖಂಡನೀಯ. ವಿಧಾನಸೌಧದಲ್ಲೇ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ್ದನ್ನು ಕಾಂಗ್ರೆಸ್ ಸಚಿವರೊಬ್ಬರು ನಿರಾಕರಿಸಿದ್ದಲ್ಲದೆ, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಸಂದರ್ಭದಲ್ಲೂ ಘಟನೆಯನ್ನು ವ್ಯಾಪಾರ ವ್ಯಾಜ್ಯ ಎಂದು ಹೇಳಿದ್ದರು.

ಇಂತಹ ಹೇಳಿಕೆಗಳಿಂದ ಭಯೋತ್ಪಾದನೆಗೆ ಕುಮ್ಮಕ್ಕು ಸಿಗುತ್ತಿದೆ, ಕರ್ನಾಟಕ ಸಾಫ್ಟ್ ಟಾರ್ಗೆಟ್ ಎಂಬ ಅನಿಸಿಕೆ ಭಯೋತ್ಪಾದಕರಲ್ಲಿದೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಯೋತ್ಪಾದಕರಿಗೆ ಭಯವೇ ಇಲ್ಲದಂತಾಗಿದೆ. ಅಲ್ಲದೆ, ಹಿಂದೂಗಳ ಮೇಲೆ ದಾಳಿ ನಡೆಸುವ ಯೋಜನೆಯನ್ನೂ ರೂಪಿಸಲಾಗಿತ್ತು ಎಂದರು. ಸಿದ್ದರಾಮಯ್ಯ ರಾಜೀನಾಮೆ ನೀಡುವ ವಿಚಾರದಲ್ಲಿ ಬಿಜೆಪಿಗಿಂತಲೂ ಕಾಂಗ್ರೆಸ್ ನಾಯಕರಿಗೇ ಹೆಚ್ಚಿನ ವಿಶ್ವಾಸವಿದೆ, ಅದಕ್ಕಾಗಿ ಮುಖ್ಯಮಂತ್ರಿ ಕುರ್ಚಿಗೆ ಸ್ಪರ್ಧೆ ಹೆಚ್ಚಿದೆ, ಆಡಳಿತ ಪಕ್ಷದಲ್ಲಿ ಬಹುತೇಕ ನಾಯಕರು ಮುಖ್ಯಮಂತ್ರಿ ಆಗುವುದಾಗಿ ಹೇಳುತ್ತಿದ್ದು, ಈ ತಿಕ್ಕಾಟದಲ್ಲಿ ಅಭಿವೃದ್ಧಿ ಕಾರ್ಯಗಳೇ ನಡೆಯುತ್ತಿಲ್ಲ ಎಂದು ದೂರಿದರು.

ಒಳ ಮೀಸಲಾತಿಗೆ ಆಗ್ರಹಿಸಿ ನಾಳೆ ತಮಟೆ ಚಳವಳಿ



ಮೈಸೂರು, ಸೆ.10(ಬಿಎಲ್‌ಯು)– ಸುಪ್ರೀಂಕೋರ್ಟ್ ನಿರ್ದೇಶನದಂತೆ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿ ಮಾಡುವಂತೆ ಆಗ್ರಹಿಸಿ ಸೆಪ್ಟೆಂಬರ್ 12 ರಂದು ಮೈಸೂರಿನಲ್ಲಿ ಬೃಹತ್ ತಮಟೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಉಗ್ರಪ್ಪ ತಿಳಿಸಿದರು. ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆಪ್ಟೆಂಬರ್ 12ರಂದು ಬೆಳಿಗ್ಗೆ 11 ಗಂಟೆಗೆ ಪುರಭವನದ ಅಂಬೇಡ್ಕರ್ ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿ ತನಕ ತಮಟೆ ಚಳವಳಿ ನಡೆಸಲಾಗುವುದು ಎಂದು ಹೇಳಿದರು.

ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ಸಂವಿಧಾನಬದ್ಧ ಅಧಿಕಾರವಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ನ್ಯಾಯಾಲಯ ಈ ಆದೇಶ ನೀಡಿ 40 ದಿನ ಆದರೂ ಸರ್ಕಾರ ಈ ಬಗ್ಗೆ ಯಾವುದೇ ಪ್ರಕ್ರಿಯೆ ಆರಂಭಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಒಳ ಮೀಸಲಾತಿ ಜಾರಿಯಾಗುವ ತನಕ ಬ್ಯಾಕ್‌ಲಾಗ್ ನೇಮಕಾತಿ ಮಾಡಬಾರದು, ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಂದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕೂಡಲೇ ನಮ್ಮ ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಸರ್ಕಾರವನ್ನು ಉಗ್ರಪ್ಪ ಎಚ್ಚರಿಸಿದರು. ಸಮಿತಿಯ ಮುಖಂಡರಾದ ಕೆ.ಹೆಚ್.ವೆಂಕಟೇಶ್, ಮಹೇಶ್, ಲೋಕೇಶ್, ಸಿದ್ದರಾಜು, ಗೋಪಾಲ್, ಕೃಷ್ಣಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಾಹಿತಿ ಹಕ್ಕು ಆಯೋಗದ ಆಯುಕ್ತರ ಸ್ಥಾನಗಳಿಗೆ ಅಪಾರ ಆಕಾಂಕ್ಷಿಗಳು

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಹೊಸ ತಲೆನೋವು



ಬೆಂಗಳೂರು, ಸೆ.10(ಕೆಎಂಶಿ) – ಕರ್ನಾಟಕ ಮಾಹಿತಿ ಹಕ್ಕು ಆಯೋಗದಲ್ಲಿ ಖಾಲಿ ಇರುವ ಆಯುಕ್ತರ ಹುದ್ದೆಗಳಿಗೆ ನೇಮಕಗೊಳ್ಳಲು ಹೆಚ್ಚುತ್ತಿರುವ ಆಕಾಂಕ್ಷಿಗಳ ಒತ್ತಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಲೆನೋವಾಗಿ ಪರಿಣಮಿಸಿದೆ.

ಆಯೋಗದಲ್ಲಿ 10 ಹುದ್ದೆಗಳಿದ್ದು, ಮುಖ್ಯ ಆಯುಕ್ತರೂ ಸೇರಿದಂತೆ 8 ಸ್ಥಾನಗಳ ಭರ್ತಿಗೆ ಸರ್ಕಾರ ಮುಂದಾಗಿದೆ.

ಈಗಾಗಲೇ ಹುದ್ದೆ ಬಯಸಿ ಸರ್ಕಾರದ ಆಹ್ವಾನದ ಮೇರೆಗೆ 580 ಅರ್ಜಿಗಳು ಸಲ್ಲಿಕೆಯಾಗಿದ್ದು, ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತಮಟ್ಟದ ಸಭೆಯಲ್ಲಿ ಇವುಗಳ ಪರಿಶೀಲನೆ ನಡೆದಿದೆ. ಬೃಹತ್ ಪ್ರಮಾಣದಲ್ಲಿ ಬಂದಿರುವ ಅರ್ಜಿಗಳ ಹಿನ್ನೆಲೆಯಲ್ಲಿ ಪ್ರತಿ ಆಯುಕ್ತರ ಹುದ್ದೆಗೆ 1:3 ಅನುಪಾತದಲ್ಲಿ ಪಟ್ಟಿ ತಯಾರಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿಗಳ ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿ ಅವರಿಗೆ ಹೊಣೆ ನೀಡಲಾಗಿತ್ತು.

ಈ ಕುರಿತು ನಡೆದ ಪರಿಶೀಲನಾ ಸಭೆಯಲ್ಲಿ, ಸೆಪ್ಟೆಂಬರ್ 5ರಂದು ಮತ್ತೆ ಸಭೆ ಸೇರಿ ಎಂಟು ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ತೀರ್ಮಾನಿಸಲಾಯಿತು.

ಮಾಹಿತಿ ಹಕ್ಕು ಆಯುಕ್ತರ ಹುದ್ದೆಗಳಿಗೆ ನೇಮಕಾತಿ ಬಯಸಿ ನಿವೃತ್ತ ಐಎಎಸ್, ಐಪಿಎಸ್ ಅಧಿಕಾರಿಗಳು, ಪತ್ರಕರ್ತರು ಸೇರಿದಂತೆ ಐನೂರಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ.

ಮೂಲಗಳ ಪ್ರಕಾರ, ಅರ್ಜಿಗಳನ್ನು ಪರಿಶೀಲಿಸಿ ಮಾಹಿತಿ ಹಕ್ಕು ಆಯುಕ್ತರ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಹಲವು ದಿನಗಳ ಹಿಂದೆಯೇ ಪೂರ್ಣವಾಗಬೇಕಿತ್ತು. ಅಧಿಕಾರಿಗಳು ಸಿದ್ಧಪಡಿಸಿದ 1:3 ಅನುಪಾತದ ಪಟ್ಟಿಯನ್ನು ಪರಿಶೀಲಿಸಿ ಅರ್ಹರನ್ನು ಈ ಹುದ್ದೆಗಳಿಗೆ ನೇಮಕ ಮಾಡುವ ಸಂಬಂಧ ಮುಖ್ಯಮಂತ್ರಿಗಳು ಕಡತವನ್ನು ಪರಿಶೀಲಿಸಿ, ಉನ್ನತ ಮಟ್ಟದ ಸಭೆಯ ಮುಂದಿಡಬೇಕಿತ್ತು. ಆದರೆ ಇದೀಗ ಮಾಹಿತಿ ಹಕ್ಕು ಆಯುಕ್ತರ ಹುದ್ದೆಗಳಿಗೆ ಪ್ರಭಾವ ಬೀರುತ್ತಿರುವವರನ್ನು ನೋಡಿ ಮುಖ್ಯಮಂತ್ರಿಗಳಿಗೆ ತಲೆನೋವು ಶುರುವಾಗಿದೆ.

ಮೂಲಗಳ ಪ್ರಕಾರ, ಈ ಹುದ್ದೆಗಳಿಗೆ ನೇಮಕ ಕುರಿತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಹೈಕಮಾಂಡ್ ಮಟ್ಟದಲ್ಲಿ ಪ್ರಭಾವಿಯಾಗಿರುವ ಟೈಟ್ಲರ್, ಸಾಹಿತ್ಯ ಲೋಕದ ಮೇರು ಪ್ರಶಸ್ತಿ ಗಳಿಸಿರುವ ಸಾಹಿತಿಗಳು ಸೇರಿದಂತೆ ಹಲವರು ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ.

ಅಲ್ಲದೆ, ಸಚಿವ ಸಂಪುಟದ ಕೆಲವು ಹಿರಿಯ ಸಹೋದ್ಯೋಗಿಗಳು, ಅರ್ಜಿ ಹಾಕಿರುವ ಅಭ್ಯರ್ಥಿಗಳನ್ನೇ ಮುಖ್ಯಮಂತ್ರಿ ಬಳಿ ಕರೆದೊಯ್ದು, ಇವರನ್ನು ನೇಮಕ ಮಾಡಲೇಬೇಕೆಂದು ಒತ್ತಡ ಹೇರಿದ್ದಾರೆ.

ಎಲ್ಲರೂ ಪ್ರಭಾವಿಗಳು, ಯಾರನ್ನೂ ಕಡೆಗಣಿಸಿ ನೇಮಕಾತಿ ಮಾಡಲು ಸಾಧ್ಯವಿಲ್ಲ, ಹಾಗೊಂದು ವೇಳೆ ನೇಮಕಾತಿ ಮಾಡಿದರೆ, ಕೆಲವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಹಿಂದೆ ಯಾವ ಸರ್ಕಾರಿ ನೇಮಕಾತಿ ವಿಷಯದಲ್ಲೂ ಇಂತಹ ಒತ್ತಡ ನಿರ್ಮಾಣವಾಗಿರಲಿಲ್ಲ, ಮಾಹಿತಿ ಆಯುಕ್ತರ ನೇಮಕಾತಿಗೆ ಇಷ್ಟೊಂದು ಭಾರಿ ಒತ್ತಡ ಬಂದರೆ ಹೇಗೆ ಎಂದು ಮುಖ್ಯಮಂತ್ರಿ ಅವರು ಆ ಕಡತವನ್ನೇ ಮೂಲೆಗೆ ಹಾಕಿದ್ದಾರಂತೆ. ವಾತಾವರಣ ತಿಳಿಯಾಗಿ ಎಲ್ಲರ ಗಮನ ಬೇರೆಡೆಗೆ ಹೋದ ನಂತರ ತುರ್ತು ಸಭೆ ನಡೆಸಿ ನೇಮಕಾತಿ ಮಾಡೋಣ ಅಲ್ಲಿಯವರೆಗೂ ಈ ಕಡತಗಳನ್ನು ನನ್ನ ಮುಂದೆ ತರಲೇಬೇಡಿ ಎಂದು ಮುಖ್ಯಮಂತ್ರಿ ಆದೇಶಿಸಿದ್ದಾರಂತೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಸ್ನೇಹಿ ಗೌರಿ–ಗಣೇಶನ ವಿಸರ್ಜನಾ ವ್ಯವಸ್ಥೆ




ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಗೌರಿ–ಗಣೇಶನ ವಿಸರ್ಜನೆಗೆ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿತ್ತು.

ಮೈಸೂರು,ಸೆ.10–ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ವತಿಯಿಂದ ಗೌರಿ–ಗಣೇಶನ ವಿಸರ್ಜನೆಗೆ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿತ್ತು. ಹಬ್ಬದ ದಿನದಂದು ಕೆಎಸ್‌ಪಿಸಿಬಿ ಮೈಸೂರು ವಲಯ ಕಚೇರಿ–1ರ ವತಿಯಿಂದ ಮಾಡಿದ ಈ ವಾಹನ ವ್ಯವಸ್ಥೆಯಿಂದಾಗಿ ಪರಿಸರ ಸ್ನೇಹಿ ಗಣೇಶ ವಿಸರ್ಜನೆ ತುಂಬಾ ಅನುಕೂಲವಾಯಿತು. ಸುಮಾರು 800 ಗೌರಿ–ಗಣೇಶ ಮೂರ್ತಿಗಳನ್ನು ಈ ಟ್ಯಾಂಕರ್‌ಗಳಲ್ಲಿ ವಿಸರ್ಜಿಸಲಾಯಿತು.

ವಾಹನಗಳ ಮುಂದೆ ಪರಿಸರ ಸ್ನೇಹಿ ಗೌರಿ–ಗಣೇಶ ಹಬ್ಬದ ಶುಭಾಶಯಗಳು; ಪ್ಲಾಸ್ಟರ್ ಆಫ್ ಪ್ಯಾರೀಸ್ ಹಾಗೂ ಬಣ್ಣದ ಗೌರಿ–ಗಣೇಶ ವಿಗ್ರಹಗಳ ಬಳಕೆ ಬೇಡ; ಮಣ್ಣಿನ ವಿಗ್ರಹಗಳನ್ನೆ ಬಳಸಿ; ಪರಿಸರ ಉಳಿಸಿ ಸಂದೇಶ ಸಾರುವ ಪೋಸ್ಟರ್ ಅಳವಡಿಸಲಾಗಿತ್ತು.

ಈ ವಾಹನಗಳು ಮೈಸೂರಿನ ವಿವಿಧೆಡೆ ಸಂಚರಿಸಿ ಪರಿಸರ ಸ್ನೇಹಿ ಗಣೇಶನ ವಿಸರ್ಜನೆಗೆ ಅನುವು ಮಾಡಿಕೊಟ್ಟಿದ್ದಲ್ಲದೆ, ಜನರಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಲಾಯಿತು.

ನಾಡಪ್ರಭು ಕೆಂಪೇಗೌಡರು ಸಾಮಂತರಾಜ ಮಾತ್ರವಲ್ಲ, ದೂರದೃಷ್ಟಿಯ ನಾಯಕರೂ ಹೌದು

ಶ್ರೀ ಕ್ಷೇತ್ರ ಆದಿಚುಂಚನಗಿರಿ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಬಣ್ಣನೆ

ಮೈಸೂರು, ಸೆ.10(ಜಿಎ)–ಸೋಮಾರಿಗಳನ್ನು ಕ್ರಿಯಾಶೀಲರನ್ನಾಗಿ ಮಾಡಿ ತಮ್ಮ ಜೀವನವನ್ನು ಕಾಯಕಕ್ಕೆ ಮುಡಿಪಿಡುವಂತೆ ಮಾಡಿದ ಕಾಯಕಯೋಗಿ ನಾಡಪ್ರಭು ಕೆಂಪೇಗೌಡರು ಎಂದು ತಿಳಿಸಿರುವ ಶ್ರೀಕ್ಷೇತ್ರ ಆದಿಚುಂಚನಗಿರಿ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಕೆಂಪೇಗೌಡರು ಸಾಮಂತರಾಜರು ಮಾತ್ರವಲ್ಲ. ಅವರೊಬ್ಬ ದೂರದೃಷ್ಟಿವುಳ್ಳ ನಾಯಕರೂ ಹೌದು (ವಿಷನರಿ ಲೀಡರ್) ಎಂದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ ವತಿಯಿಂದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸ ಓದದವರು ಇತಿಹಾಸ ಸೃಷ್ಟಿಸಲಾರರು ಎಂಬ ಅಂಬೇಡ್ಕರ್ ಅವರ ಮಾತಿನಂತೆ ಕೆಂಪೇಗೌಡರ ಚರಿತ್ರೆ ಓದಬೇಕು. ಹಿಂದಿನ ಇತಿಹಾಸ ತಿಳಿದರೆ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಸುಲಭ ಎಂದರು.

ಕೆಂಪೇಗೌಡರ ಬಗ್ಗೆ ತಿಳಿದುಕೊಳ್ಳಬೇಕು. ಒಬ್ಬ ವ್ಯಕ್ತಿಯ ಪೂರ್ವಪರ ತಿಳಿಯದಿದ್ದರೆ ಉಡಾಫೆ ಉತ್ತರ ನಿರೀಕ್ಷಿಸಬೇಕಾಗುತ್ತದೆ. ಕೆಂಪೇಗೌಡರು ಬದುಕಿದ್ದಾಗ ದೇಶಕ್ಕೆ ನಾಡಿಗೆ ಏನಾದರೂ ಸೇವೆ ಮಾಡಬೇಕು ಎಂಬ ತುಡಿತವಿತ್ತು. ಅದರಂತೆ ಸಾಕಷ್ಟು ಸೇವೆಯನ್ನು ಮಾಡಿದ್ದು, ಅವರು ಕೇವಲ ಸಾಮಂತ ರಾಜ ಮಾತ್ರವಲ್ಲದೇ ಬದುಕಿನುದ್ದಕ್ಕೂ ಮುಂದಿನ ಸಮಾಜಕ್ಕೆ ಏನು ನೀಡಬೇಕು ಎಂಬ ವಿಷನರಿ ಲೀಡರ್ ಆಗಿದ್ದರು ಎಂದು ತಿಳಿಸಿದರು.

ಮಾತ, ಪಿತೃ, ದೇವ, ಋಷಿ ಮತ್ತು ಸೇವೆ ಎಂಬ ಪಂಚ ಋಣಗಳಿದ್ದು, ಋಣದ ಈ ಸೂತಕವನ್ನು ಬಗೆಹರಿಸಿಕೊಳ್ಳುವುದು ಕಷ್ಟಕರ. ಮಾತೃ–ಪಿತೃ ಋಣಗಳನ್ನು ತೀರಿಸಲು ಎಷ್ಟು ಜನ್ಮವಿದ್ದರೂ ಸಾಲದು. ಹಾಗೇ ಕೆಂಪೇಗೌಡರು ನಾಡಿಗೆ ಮಾಡಿರುವ ಸೇವೆಯ ಋಣವನ್ನು ತೀರಿಸಲು ಅವರ ಬಗ್ಗೆ ತಿಳಿದುಕೊಳ್ಳಬೇಕು. ನಾಡನ್ನು ಕಟ್ಟಿರುವ ಅವರ ಆದರ್ಶವನ್ನು ಮುಂದಿನ ಪೀಳಿಗೆಗೆ ತಿಳಿಸಲು ಮುಕ್ತ ವಿವಿಯೂ ನಾಡಪ್ರಭು ಕೆಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಆರಂಭಿಸಿದೆ ಎಂದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ ವತಿಯಿಂದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರವನ್ನು ಶ್ರೀಕ್ಷೇತ್ರ ಆದಿಚುಂಚನಗಿರಿ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಕೆಂಪೇಗೌಡರ ವಂಶದ ಅಂತ್ಯಕ್ಕೆ ಮೈಸೂರಿನ ಒಡೆಯರ್ ಕಾರಣ

ಕೆಂಪೇಗೌಡ ವಂಶದ ಕಟ್ಟಕಡೆಯ ಕುಡಿ ಮುಮ್ಮಡಿ ಕೆಂಪವೀರಪ್ಪಗೌಡರು ಶ್ರೀರಂಗಪಟ್ಟಣದಲ್ಲಿ ಮರಣ ಹೊಂದಿದರು ಎಂಬುದಕ್ಕೆ ಪತ್ರವಿದೆ. ಮೈಸೂರಿನ ದೊಡ್ಡ ಕೃಷ್ಣರಾಜ ಒಡೆಯರ್ ಕುತಂತ್ರದಿಂದ ಮುಮ್ಮಡಿ ಕೆಂಪವೀರಪ್ಪಗೌಡರು ಅಂತ್ಯ ಕಂಡರು. ದೊಡ್ಡ ಕೃಷ್ಣರಾಜ ಒಡೆಯರ್ ದಳವಾಯಿಗಳ ಜೊತೆಗೂಡಿ ಕಲಾವತಿ ಎಂಬ ಸುಂದರ ಹೆಣ್ಣನ್ನು ಬಳಸಿಕೊಂಡು ಮುಮ್ಮಡಿ ಕೆಂಪವೀರಪ್ಪಗೌಡರನ್ನು ಬಂಧಿಸಿ, ಶ್ರೀರಂಗಪಟ್ಟಣದ ಕಾರಾಗೃಹದಲ್ಲಿ ಇರಿಸಿ ಅವರ ಅಂತ್ಯಕ್ಕೆ ಕಾರಣರಾದರು. ಆದರೆ, ಕೆಂಪೇಗೌಡ ವಂಶ ಅಂತ್ಯವಾದ 30 ವರ್ಷಗಳ ನಂತರ ಮೈಸೂರಿನ ಅರಸರ ಆಳ್ವಿಕೆ ಅಂತ್ಯವಾಯಿತು. ಅವರನ್ನು ಕುತಂತ್ರದ ಮೂಲಕವೇ ದಳವಾಯಿಗಳು, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್‌ರಿಂದ ಅಂತ್ಯ ಕಂಡಿತು.

–ಡಾ.ತಲಕಾಡು ಚಿಕ್ಕರಂಗೇಗೌಡ, ಇತಿಹಾಸ ತಜ್ಞ

ಇತಿಹಾಸ ತಜ್ಞ ಡಾ.ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ಕೆಂಪೇಗೌಡ ಅಧ್ಯಯನ ಪೀಠದ ಅವಶ್ಯಕತೆ ಇದೀಯಾ ಎಂದು ಅನೇಕರು ಮಾತನಾಡುತ್ತಾರೆ. ಆದರೆ, ಇತಿಹಾಸದಲ್ಲಿ ಎರಡು ರಾಜಮನೆತನಗಳನ್ನು ಕಡೆಗಣಿಸಿದ್ದು, ಗಂಗರು 654 ವರ್ಷ ಹಳೆ ಮೈಸೂರು, ತಮಿಳುನಾಡಿನ ಪಶ್ಚಿಮ ಭಾಗವನ್ನು ಸಮರ್ಥವಾಗಿ ಆಳುವ ಮೂಲಕ ಶ್ರೀರಾಜ್ಯ ಎಂಬ ಬಿರುದು ಪಡೆದುಕೊಂಡಿದೆ. ಹಾಗೇ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಬೆನ್ನೆಲುಬಾಗಿ ನಿಂತಿತು. ಕರ್ನಾಟಕ ಮಾತ್ರ ವಲ್ಲದೇ ದೇಶದಲ್ಲಿಯೇ ಚಾಳುಕ್ಯರು ಮತ್ತು ರಾಷ್ಟ್ರಕೂಟರು ಇಲ್ಲದಿದ್ದರೆ ಇತಿಹಾಸ ಏನಾಗುತ್ತಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಈ ಕರ್ನಾಟಕ ಎಂದು ಮರು ನಾಮಕರಣ ಮಾಡಿದ ಹಿನ್ನೆಲೆಯಲ್ಲಿ ಸುವರ್ಣ ಕರ್ನಾಟಕ ಸಂಭ್ರಮ ಆಚರಣೆ ಮಾಡುತ್ತಿದೆ. ಆದರೆ, 7ನೇ ಶತಮಾನದ ಭೂವಿಕ್ರಮ ಎಂಬ ರಾಜ ಕರ್ನಾಟಕ ಎಂಬ ಹೆಸರು ನೀಡಿದ್ದಾನೆ. ಅಧ್ಯಯನದ ಕೊರತೆಯಿಂದ ಭೂ ವಿಕ್ರಮನಿಗೆ ನೀಡಬೇಕಾದ ಪ್ರಶಂಸೆಯನ್ನು ಮುಖ್ಯಮಂತ್ರಿಗೆ ನೀಡುತ್ತಿದ್ದಾರೆ ಎಂದರು.

ಕೆಂಪೇಗೌಡರ ಬಗ್ಗೆ ಪೂರ್ಣ ಪ್ರಮಾಣದ ವಿವರ ಇಲ್ಲದವರು ಇಲ್ಲಸಲ್ಲದ್ದನ್ನು ಮಾತನಾಡುತ್ತಿದ್ದಾರೆ. ಕೆಂಪೇಗೌಡರ ತಂದೆ ಕೆಂಪನಂಜೇಗೌಡರಿಗೆ ಕೃಷ್ಣದೇವರಾಯ ಅಮರನಾಯಕ ಎಂಬ ಬಿರುದು ನೀಡಿದ್ದಾರೆ. ಈ ಬಗ್ಗೆ ಕಲ್ಯದ ಶಾಸನದಲ್ಲಿ ಉಲ್ಲೇಖವಿದೆ. ಕಲ್ಯ ಶಾಸನವನ್ನು ಅಧ್ಯಯನ ಮಾಡಿದರೆ ಇವುಗಳ ಬಗ್ಗೆ ಮಾಹಿತಿ ದೊರೆಯುತ್ತದೆ ಎಂದು ತಿಳಿಸಿದರು.

ಅಚ್ಚುತರಾಯರು ನೀಡಿದ ಚಿನ್ನದ ನಾಣ್ಯಗಳನ್ನು ಬಳಸಿಕೊಂಡು ವಿಜಯನಗರದ ಕಾಲಘಟ್ಟದಲ್ಲಿ ಬೆಂಗಳೂರಿನ ಕೋಟೆ ಮಾತ್ರ ನಿರ್ಮಾಣವಾಯಿತು. ಈ ಕೋಟೆಯಲ್ಲಿ ಮಾತ್ರ ಸಾಮಾನ್ಯ ಜನರಿಗೂ ಪ್ರವೇಶವಿತ್ತು. ಶೇ.10ರಷ್ಟು ಸ್ಥಳದಲ್ಲಿ ಅವರು ಇದ್ದು, ಬಾಕಿ ಶೇ.90ರಷ್ಟು ಸ್ಥಳದಲ್ಲಿ 64 ಪೇಟೆಗಳನ್ನು ನಿರ್ಮಿಸಿ ನಾಡಿನ ಎಲ್ಲಾ ಜಾತಿ ಅವರಿಗೂ ಅವಕಾಶ ಕಲ್ಪಿಸಿಕೊಟ್ಟರು. ಹಾಗೇ ವಿವಿಧ ರಾಜ್ಯದ ಕರಕುಶಲದವರಿಗೂ ಅವಕಾಶ ಕಲ್ಪಿಸುವ ಮೂಲಕ ಸರ್ವ ಜನಾಂಗ ಶಾಂತಿಯ ದೊರೆಯಾಗಿದ್ದರು ಎಂದರು.

ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಗೆ ಹೆಗಲು ಕೊಟ್ಟರು. 1608ರಲ್ಲಿ ಕುಣಿಗಲ್‌ನ ಮೊಮ್ಮಗಳ ಮನೆಯಲ್ಲಿ ಇದ್ದಾಗ ಯಾರೋ ಯಲಹಂಕ ಸಂಸ್ಥಾನವನ್ನು ಆಕ್ರಮಿಸುತ್ತಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆ 92 ವರ್ಷದ ಅವರು ಯುದ್ಧದಲ್ಲಿ ಪಾಲ್ಗೊಂಡು ವೀರ ಮರಣ ಹೊಂದಿದರು. ಇಂತಹ ವಿಷಯಗಳನ್ನು ಅಧ್ಯಯನ ಮಾಡಲು ಸರ್ಕಾರ ಅನುದಾನ ನೀಡಬೇಕು. ವಿವಿಗಳಲ್ಲಿ ಅನು ದಾನಕ್ಕೆ ಕೊರತೆ ಇರಬಾರದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ, ಪ್ರೊ.ಕೃಷ್ಣೇಗೌಡ, ಕುಲಸಚಿವ ಪ್ರೊ.ಕೆ.ವಿ.ಪ್ರವೀಣ, ಸಂಯೋಜನಾಧಿಕಾರಿ ಡಾ.ರಾಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಸೆ. 10–ಮೈಸೂರಿನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಮಕ್ಕಳು ಅಂಕಪಟ್ಟಿಯ ನಕಲು ಪ್ರತಿ ಮತ್ತು 1 ಭಾವಚಿತ್ರವನ್ನು ಸಂಘದ ಕಚೇರಿಗೆ ತಲುಪಿಸಲು ಕೋರಲಾಗಿದೆ. ಮಾಹಿತಿಗೆ 9008327783, 9845849463, 8904726438 ಸಂಪರ್ಕಿಸಬಹುದು.

ವಾರ್ಷಿಕ ಮಹಾಸಭೆ

ಮೈಸೂರು, ಸೆ.10–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ.15ರಂದು ಬೆಳಗ್ಗೆ 11 ಗಂಟೆಗೆ ಹಳೇ ಡಿಸಿ ಕಚೇರಿ ಆವರಣ, ಕಂದಾಯ ಭವನದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಎಂ. ನೀಲಕಂಠಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸ್ತ್ರೀ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ,
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.


ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಇಂದಿನ ಪಂಚಾಂಗ

11.09.2024 ಬುಧವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ : ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ವಾದ್ಯ ವೈಭವ' ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ.ಎಸ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಶೋಭಾ ಗುರ್ತು–ಗಾಯನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ರೇಖಾ ವೆಂಕಟೇಶ್, 12.45 ಜನಪದ ಸಂಗೀತ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ವಾದ್ಯವೃಂದ–ನಿಲಯ ಕಲಾವಿದರು, 4.00 ಮಹಿಳಾರಂಗ–ಸ್ತ್ರೀ ಚೇತನ, ಅಂತಾರಾಷ್ಟ್ರೀಯ ಖ್ಯಾತಿಯ ಪರ್ವತಾರೋಹಿ ಜಮ್ಮದ ಪ್ರೀತ್ ಅಪ್ಪಯ್ಯ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 4.45 ಹಿಂದಿ ಪಾಠ–ಶಾಂತಾ. ಡಿ.ಕಿಣಿ, 6.50 ಕೃಷಿರಂಗ, ಕೃಷಿ ದೀವಿಗೆ : ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ, ರಾಗಿಯಲ್ಲಿ ಸುಧಾರಿತ ಬೇಸಾಯ ತಾಂತ್ರಿಕತೆಗಳು. ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಸಿ.ಎಂ. ಸುನಿಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಕ್ಷಿತಿಜ ಲಿಟರರಿ ಗುರು–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಭಜನ್ ಸಪೂರಿ–ಸಂತೂರ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಡಾ. ನಾಗಲಕ್ಷ್ಮಿ, ಚಂಪಕಾ ಅಕಾಡೆಮಿ ಮತ್ತು ವೃಂದದವರಿಂದ ಭರತನಾಟ್ಯ, ಸ್ಥಳ: ದೇವಸ್ಥಾನದ ಬಳಿ, ತ್ಯಾಗರಾಜ ವೃತ್ತ, ಕೆ.ಆರ್.ಮೊಹಲ್ಲಾ, ಸಂಜೆ 7 ಗಂಟೆಗೆ

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ:** ವಿದ್ಯಾರ್ಥಿ ಸಂಘದ ಉದ್ಘಾಟನೆ, ಮುಖ್ಯ ಅತಿಥಿಗಳು : ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಕೆ.ಎಂ. ಗಾಯತ್ರಿ, ವಿಶೇಷ ಅತಿಥಿಗಳು : ಶ್ರೀಮತಿ ಗೌರಿ ಸೇತುರಾಮ್, ಕಾಲೇಜು ಪ್ರಾಂಶುಪಾಲ ಪ್ರೊ. ನಯನಕುಮಾರಿ, ಅಧ್ಯಕ್ಷತೆ : ಪ್ರಾಂಶುಪಾಲರಾದ ಪ್ರೊ. ಎನ್. ಭಾರತಿ, ಶ್ರೀಮತಿ ಜ್ಯೋತಿಲಕ್ಷ್ಮಿ ಜಿ. ಕಾವ, ಶ್ರೀಮತಿ ಕೆ.ಎಸ್. ಸುಕೃತಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಹೈ ಲೈಫ್ ಬ್ರೈಡ್ಸ್ :** ಬ್ರೈಡಲ್ ಕೌಚರ್, ಜ್ಯುವೆಲ್ಲರಿ, ಅಸೆಸ್ಸರೀಸ್, ದಿ ಫೈನೆಸ್ಟ್ ಬ್ರೈಡಲ್ ಎಕ್ಸಿಬಿಷನ್, ಸ್ಥಳ: ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್, ಬೆಳಗ್ಗೆ 10 ರಿಂದ.

■ **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಸೈನಸೈಟಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಬಾಸುದೇವ ಸೋಮಾನಿ ಕಾಲೇಜು:** ಉದ್ಯೋಗ ಕೌಶಲ ತರಬೇತಿ ಕಾರ್ಯಾಗಾರ, ಉದ್ಘಾಟನೆ: ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಡಾ.ಎಸ್. ರೇಖಾ, ಕುಬೇರ್ ಪಿ.ಗೌಡ, ಶ್ರೀಮತಿ ಎಸ್.ಪ್ರಭಾ, ಪಿ.ಗೀತಾಂಜಲಿ, ಅಧ್ಯಕ್ಷತೆ: ಬಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸರ್ಕಾರಿ ನೇಚರ್ ಕ್ಯೂರ್ ಮತ್ತು ಯೋಗ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ:** ನೆನಪಿಗಾಗಿ ಯೋಗ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಚೈತನ್ಯ ಯೋಗ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಡಾ.ಬಿ.ಪಿ.ಮೂರ್ತಿ, ಮುಖ್ಯ ಅತಿಥಿಗಳು: ಡಾ.ಪ್ರತಿಭಾ ಪೆರೇರಾ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ, ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಷಿ, ಜಿ.ಎಸ್.ಗಣೇಶ್, ಕೆ.ಆರ್.ಗಣೇಶ್‌ರಾವ್, ಅಧ್ಯಕ್ಷತೆ: ಪ್ರಿನ್ಸಿಪಾಲ್ ಡಾ.ರಾಧಾಕೃಷ್ಣ ರಾಮರಾವ್, ಸ್ಥಳ: ನೇಚರ್ ಕ್ಯೂರ್ ಕಾಲೇಜು ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ

■ **ನಕ್ಷತ್ರ ಅಕಾಡೆಮಿ ಆಫ್ ಆರ್ಟ್ಸ್ ಮಲ್ಟಿ ಟ್ಯಾಲೆಂಟ್ ಕ್ರಿಯೇಟರ್ಸ್:** ಸುಗಮ ಸಂಗೀತ ತರಬೇತಿ ಕಾರ್ಯಕ್ರಮ ಉದ್ಘಾಟನೆ ಹಾಗೂ ಕಲಾವಿದರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ, ಅಧ್ಯಕ್ಷತೆ: ರಾಗ ಕ್ರಿಯೇಷನ್ಸ್ ಅಧ್ಯಕ್ಷ ಆನಂದಶೆಟ್ಟಿ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ವಿಶೇಷ ಆಹ್ವಾನಿತರು: ಮನೋಶಾಸ್ತ್ರಜ್ಞೆ ಡಾ. ರೇಖಾ ಮನಶಾಂತಿ, ಕೆಪಿಎ ಡಿವೈಎಸ್ಪಿ ಕುಮಾರ, ಜಯದೇವ ಆಸ್ಪತ್ರೆ ವೈದ್ಯ ಡಾ.ಕೆ.ಆರ್. ಮಂಜುನಾಥ್, ಖ್ಯಾತ ಗಾಯಕ ಅಮ್ಮರಾಮಚಂದ್ರ, ಸನ್ಮಾನಿತರು: ಗಾಯಕರಾದ ಆಶಾ ಮಹದೇವ್, ಪ್ರೇಮಲತಾ, ಭಾರ್ಗವಿ, ಪ್ರಿಯಾ, ಸೌಮ್ಯಾ, ಗೌರಿ ಒಸ್ಲಾಲ್, ಅಪೂರ್ವ, ಗುರುರಾಜ್, ಕುಮಾರಸ್ವಾಮಿ, ಆರ್. ಲಕ್ಷ್ಮಣ್, ಆದಿಲ್ ಪಾಷ, ನಾರಾಯಣಸ್ವಾಮಿ, ಪ್ರೇಮ್, ಸ್ಥಳ: ನಕ್ಷತ್ರ ಸಭಾಂಗಣ, ಸರಸ್ವತಿ ರಸ್ತೆ, ಕುವೆಂಪುನಗರ, 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಮೈಸೂರು ನಗರ (ಜಿಲ್ಲೆ) ಜನತಾದಳ :** ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮ, ಉಪಸ್ಥಿತರು: ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ರಾಜ್ಯ ಜೆಡಿಎಸ್ ಯೂತ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಟಿ. ದೇವೇಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್, ಶಾಸಕರಾದ ಜಿ.ಡಿ. ಹರೀಶ್‌ಗೌಡ, ಬಾಲಕೃಷ್ಣೇಗೌಡ, ಡಾ.ಅನ್ನದಾನಿ, ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ಮಾಜಿ ಶಾಸಕರಾದ ಕೆ. ಮಹದೇವ್, ಅಶ್ವಿನ್‌ಕುಮಾರ್, ಸ್ಥಳ: ಕೆಂಪೇಗೌಡ ಕಲ್ಯಾಣ ಮಂಟಪ, ಜಾವಾ ರಸ್ತೆ, ಮಂಜುನಾಥಪುರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಅಂತಾರಾಷ್ಟ್ರೀಯ ವಾಲಿಬಾಲ್ ನಿವೃತ್ತ ತರಬೇತುದಾರ ಡಾ.ಎನ್.ಬಿ. ಸುರೇಶ್, ಕು. ಅಮೂಲ್ಯ, ಅಧ್ಯಕ್ಷತೆ : ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಡಾ. ಎಂ. ನಂಜಯ್ಯ ಹೊಂಗನೂರು, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಪೂರ್ಣಿಮಾ, ಶೈಕ್ಷಣಿಕ ಡೀನ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** 44ನೇ ವರ್ಷದ ಗೌರಿ–ಗಣೇಶ ಹಬ್ಬದ ಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ಎಸ್.ಪಿವಿಜಿಎಂಸಿ ಟ್ರಸ್ಟ್; ಪಾರಂಪರಿಕ ಸಂಗೀತೋತ್ಸವ,** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ಗಂಟೆಗೆ ರಿಂದ 6.30 ರವರೆಗೆ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ಆದಿಪುರಾಣ–ಭರತ ಬಾಹುಬಲಿ ಯುದ್ಧ, ವಾಚನ : ವಿದ್ವಾನ್ ಸುಹಾಸ್ ಭಾರದ್ವಾಜ್, ವ್ಯಾಖ್ಯಾನ : ಡಾ. ಜ್ಯೋತಿಶಂಕರ್, ಸಂಜೆ 6.45ಕ್ಕೆ ವಿದ್ವಾನ್ ವಿಘ್ನೇಶ್ ಈಶ್ವರ್ ಅವರಿಂದ ಗಾಯನ, ವಿದ್ವಾನ್ ಸಾಯಿ ರಕ್ಷಿತ್–ವಯೋಲಿನ್, ವಿದ್ವಾನ್ ಉಮಯಾಳಪುರಂ ಶಿವರಾಮನ್–ಮೃದಂಗ, ವಿದ್ವಾನ್ ಬಿ.ಎಸ್. ಪುರುಷೋತ್ತಮ್–ಖಂಜಿರಾ, ಸ್ಥಳ: ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು** : ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಹಾಗೂ ವಿಶ್ವ ಜನಪದ ದಿನಾಚರಣೆ, ಉದ್ಘಾಟನೆ : ಗಾಯಕ ಡಾ. ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಉಮೇಶ್, ಮಹಾರಾಜ ಕಾಲೇಜು ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ. ಎಸ್. ಕೃಷ್ಣಪ್ಪ, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಬಿ.ವಿ. ಕಾರಂತರ ರಂಗ ಚಾವಡಿ, ರಂಗಾಯಣ, ಸಂಜೆ 4ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಕೃತಿಗಳ ಲೋಕಾರ್ಪಣೆ, ಸಾನ್ನಿಧ್ಯ : ಶಿರಸಿ ಶ್ರೀ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀಮತಿ ಎಂ.ಎ. ನೀಲಾಂಬಿಕ ಅವರು ರಚಿಸಿದ ನಾಟಕ 'ಷಷ್ಠಿಕ' ಹಾಗೂ ದಿ. ಅಂಕಪ್ಪನವರ 'ಕಲಿರಾಯ ವಚನಗಳು' ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ : ಅಬಕಾರಿ ಇಲಾಖೆ ಡಿವೈಎಸ್ಪಿ ಎಸ್.ಎಂ. ಮಹೇಶ್, ಕೃತಿ ಕುರಿತು : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮಲ್ಲಿಕಾರ್ಜುನ ಮೊರಬದ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಸಾಹಿತಿ ಶ್ರೀಮತಿ ಎಂ.ಎ. ನೀಲಾಂಬಿಕಾ, ಸ್ಥಳ: ಜೆಎಸ್‌ಎಸ್ ವಿದ್ಯಾರ್ಥಿ ನಿಲಯ ಪ್ರಧಾನ ಭವನ, ಆರ್‌ಟಿಓ ಪಕ್ಕ, ಸಂಜೆ 6ಕ್ಕೆ.

ಗಾಜಿನ ಸೇತುವೆ ನಿರ್ಮಾಣಗೊಂಡರೆ ಕೊಡವ ಲ್ಯಾಂಡ್ ನರಕ



ಚೇರಂಬಾಣೆಯಲ್ಲಿ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಸೆ.10– ಕೊಡಗಿನಲ್ಲಿ 16ಕ್ಕೂ ಹೆಚ್ಚು ಗ್ಲಾಸ್ ಬ್ರಿಡ್ಜ್‌ಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ ಎನ್ನಲಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಗಾಜಿನ ಸೇತುವೆಗಳು ನಿರ್ಮಾಣಗೊಂಡರೆ ಕೊಡವ ಲ್ಯಾಂಡ್ ನರಕವಾಗಲಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪಿಸಿದರು.

ಚೇರಂಬಾಣೆಯಲ್ಲಿ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ಸಿಎನ್‌ಸಿ ವತಿಯಿಂದ ನಡೆದ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅತ್ಯಂತ ಸೂಕ್ಷ್ಮ ಪರಿಸರ ವಲಯ ಹೊಂದಿರುವ ಕೊಡಗಿನಲ್ಲಿ ಗ್ಲಾಸ್ ಬ್ರಿಡ್ಜ್‌ಗಳ ನಿರ್ಮಾಣದಿಂದ ಜನದಟ್ಟಣೆ ಅಧಿಕವಾಗುತ್ತದೆ. ಇದನ್ನು ತಡೆದುಕೊಳ್ಳುವ ಶಕ್ತಿ ಕೊಡವ ಲ್ಯಾಂಡ್‌ಗೆ ಇಲ್ಲದಾಗಿದೆ. ಈ ಯೋಜನೆ ಪರಿಸರದ ಮೇಲೆ ತೀವ್ರ ದುಷ್ಪರಿಣಾಮ ಉಂಟು ಮಾಡಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಯ ವಿವಿಧೆಡೆ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯ ಮೂಲಕ ರೆಸಾರ್ಟ್, ವಿಲ್ಲಾ, ಟೌನ್‌ಶಿಪ್‌ಗಳ ನಿರ್ಮಾಣಕ್ಕಾಗಿ ಬೆಟ್ಟ ಗುಡ್ಡಗಳ ನಾಶ, ಮರಗಳ ಹನನವಾಗುತ್ತಿದೆ. ಪ್ರಕೃತಿ ವಿಕೋಪಕ್ಕೆ ಕಾರಣವಾಗಬಲ್ಲ ಈ ಅಂಶಗಳನ್ನು ಮುಚ್ಚಿ ಹಾಕುತ್ತಿರುವ ಸರ್ಕಾರ ಬಂಡವಾಳಶಾಹಿಗಳ ಪರವಾದ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ ಎಂದು ದೂರಿದರು. ಇತ್ತೀಚೆಗೆ ಅರಣ್ಯ ಸಚಿವರು ಹೊರಡಿಸಿರುವ ಸುತ್ತೋಲೆಯಲ್ಲಿ ಕೊಡಗಿನ ಪ್ರಕೃತಿಗೆ ಮಾರಕವಾಗಿರುವ ರೆಸಾರ್ಟ್ ಹಾಗೂ ಭೂಮಿಯನ್ನು ಭೋಗ್ಯಕ್ಕೆ ಪಡೆದ ಕಂಪನಿಗಳು ನಿರಂತರ ನಡೆಸುತ್ತಿರುವ ಮರ ಹನನದ ಬಗ್ಗೆ ಪ್ರಸ್ತಾಪಿಸಿಲ್ಲ ಕೊಡಗಿನ ಪ್ರಕೃತಿ ವಿಕೋಪ, ಭೂಸ್ಫೋಟ ಮತ್ತು ಜಲಪ್ರಳಯದ ಅಂಶಗಳನ್ನು ಉಲ್ಲೇಖಿಸಿಲ್ಲ ಎಂದರು.

ಜನಜಾಗೃತಿಯಲ್ಲಿ ಕಲ್ಮಾಡಂಡ ದಮಯಂತಿ, ಮಂದಪಂಡ ರಮ್ಯಾ, ಕೇಕಡ ಗಂಗೆ ಅಪ್ಪಣ್ಣ, ಪಟ್ಟಮಾಡ ಸೀತಮ್ಮ, ತೇಲಪಂಡ ಶೈಲ, ಅಳಮಂಡ ಜೈ, ಅಜ್ಜಿನಂಡ ಪಾಪಣ್ಣ ಮಂದಪಂಡ ಮನೋಜ್, ಚೀಯಬೇರ ಸೋಮಣ್ಣ, ಬೊಳ್ಳಾರ್ಪಂಡ ಪೂವಯ್ಯ, ಕಾಡಂಡ ಅಪ್ಪಾಮಿ, ಅಜ್ಜಿನಂಡ ಸಾಬು ಭಾಗವಹಿಸಿದರು.

ಆತ್ಮಹತ್ಯೆ ಆಲೋಚನೆ ಬಿಡಿ, ಸಹಾಯವಾಣಿಗೆ ಕರೆ ಮಾಡಿ

ಬೆಂಗಳೂರು, ಸೆ.10(ಬಿಎಲ್‌ಯು)– ಮಾನಸಿಕ ಸಮಸ್ಯೆಗಳಿದ್ದರೆ ತಕ್ಷಣ ಸಹಾಯವಾಣಿಗೆ ಕರೆ ಮಾಡಿ, ಆತ್ಮಹತ್ಯೆ ಆಲೋಚನೆ ಬಿಡಿ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಲಹೆ ನೀಡಿದ್ದಾರೆ.

ವಿಶ್ವ ಆತ್ಮಹತ್ಯೆ ತಡೆ ದಿನ ಹಿನ್ನೆಲೆ ತಮ್ಮ ಎಕ್ಸ್ ಖಾತೆಯಲ್ಲಿ ಸಹಾಯವಾಣಿ ವಿವರವನ್ನು ನೀಡಿದ್ದಾರೆ. ಆತ್ಮಹತ್ಯೆ ಆಲೋಚನೆಗಳಿಂದ ಮುಕ್ತರಾಗಲು ಮಾನಸಿಕ ಖಿನ್ನತೆಯಿಂದ ಹೊರ ಬರುವುದು ಅತೀ ಮುಖ್ಯವಾಗಿದೆ. ಮಾನಸಿಕ ಸಮಸ್ಯೆಗಳಿದ್ದರೆ ತಕ್ಷಣ ಸಹಾಯವಾಣಿಗೆ ಕರೆ ಮಾಡಿ ಎಂದು ಹೇಳಿದ್ದಾರೆ. ಮಹಿಳಾ ಸಹಾಯವಾಣಿ ಸಂಖ್ಯೆ– 181, ಮಕ್ಕಳ ಸಹಾಯವಾಣಿ ಸಂಖ್ಯೆ– 1098, ಮಾನಸಿಕ ಖಿನ್ನತೆಗೆ ಟೆಲಿ ಮಾನಸ್ ಸಂಖ್ಯೆ– 14416, ತುರ್ತು ಸಹಾಯವಾಣಿ ಸಂಖ್ಯೆ– 112ಗೆ ಕರೆ ಮಾಡಿ ಎಂದು ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

'ರಂಗ ಶಿಕ್ಷಣ' ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ

ರಾಜಕಾರಣಿಗಳ ನಾಟಕದಿಂದ ದೇಶದಲ್ಲಿ ಬಹುತ್ವಕ್ಕೆ ಪೆಟ್ಟು!

- ರಾಜ್ಯ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ಬಿ.ನಾಗರಾಜಮೂರ್ತಿ ವಿಷಾದ
- ರಾಜಕಾರಣಿಗಳ ವರ್ತನೆ ಕೋಮು ಸೌಹಾರ್ದತೆ, ಸಹೋದರತ್ವ ಕದಡುತ್ತಿದೆ



ಮೈಸೂರಿನ ಹಾರ್ಡ್ವಿಕ್ ಶಾಲೆಯ ಸಭಾಂಗಣದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಮಂಗಳವಾರ ಆಯೋಜಿಸಿದ್ದ 'ರಂಗ ಶಿಕ್ಷಣ' ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿದರು.

ಮೈಸೂರು, ಸೆ.10(ಎಂಟಿವೈ)– ರಾಜಕಾರಣಿಗಳ ನಾಟಕದಿಂದ ದೇಶದಲ್ಲಿ ಬಹುತ್ವಕ್ಕೆ ಧಕ್ಕೆಯುಂಟಾಗುತ್ತಿದೆ ಎಂದು ರಾಜ್ಯ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ವಿಷಾದಿಸಿದ್ದಾರೆ.

ಮೈಸೂರಿನ ಹಾರ್ಡ್ವಿಕ್ ಶಾಲೆಯ ಸಭಾಂಗಣದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಮಂಗಳವಾರ ಆಯೋಜಿಸಿದ್ದ 'ರಂಗ ಶಿಕ್ಷಣ' ಕುರಿತ ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಂಗಭೂಮಿ, ದೂರದರ್ಶನ, ಸಿನಿಮಾ ಕಲಾವಿದರಿಗಿಂತಲೂ ರಾಜಕಾರಣಿಗಳ ನಾಟಕವೇ ಇಂದು ಆಕರ್ಷಕವಾಗಿ ಕಾಣುತ್ತಿದೆ. ರಾಜಕಾರಣಿಗಳ ನಾಟಕಗಳು ಕೋಮು ಸೌಹಾರ್ದತೆ, ಎಲ್ಲರನ್ನು ಒಳಗೊಳ್ಳುವ ಗುಣ, ಸಹೋದರತ್ವವನ್ನು ಕದಡುವ ಸಂದೇಶ ನೀಡುತ್ತಿವೆ. ಭ್ರಷ್ಟಾಚಾರ, ಸರ್ವಾಧಿಕಾರತ್ವ ದೇಶದಾದ್ಯಂತ ಹಬ್ಬಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಕಲಾವಿದರು ಎಚ್ಚರಿಕೆ ಹಾಗೂ ಬದ್ಧತೆಯಿಂದ ಬಹುತ್ವ ಉಳಿಸುವ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು.


ಇಂದು ದೇಶದಲ್ಲಿ ಏಕಮುಖಿ ಸಂಸ್ಕೃತಿ ಪ್ರತಿಪಾದಿಸುತ್ತಿರುವವರನ್ನೇ ದೇಶಭಕ್ತರು ಎಂದು ಬಿಂಬಿಸಲಾಗುತ್ತಿದೆ. ಅಂತಹವರನ್ನು ಪ್ರಶ್ನಿಸಿದರೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ. ವಿವಿಧ ರೂಪದಲ್ಲಿ ಮಕ್ಕಳ ಮನಸ್ಸಿನ ಮೇಲೆ ವಿಭಜನಕಾರಿ ಸಿದ್ಧಾಂತಗಳನ್ನು ತುಂಬುವ ಸಂಚು ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮಕ್ಕಳಿಗೆ ವರ್ತಮಾನ ಹಾಗೂ ಬಹುತ್ವದ ಪರಂಪರೆಯ ಅರಿವು ಮೂಡಿಸಲು ರಂಗಭೂಮಿ ಕಾರ್ಯಾಗಾರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿಸುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, 20 ವರ್ಷದ ಹಿಂದೆ ಮಕ್ಕಳಿಗೆ ರಂಗಭೂಮಿ ಬೇಕೆ ಎಂಬ ಪ್ರಶ್ನೆ ಮೂಡಿತ್ತು. ಆಗ, ಬಾಲ್ಯ ಸಮೃದ್ಧಿಯಿಂದ ಕೂಡಿತ್ತು. ಕಲಿಕೆಯು ಚೆನ್ನಾಗಿತ್ತು. ಇದೀಗ ಮೊಬೈಲ್‌ನ ವರ್ಚ್ಯುವಲ್ ಜಗತ್ತಿನೊಳಗೆ ಸಿಲುಕಿದ್ದಾರೆ. ಅವರಿಗೆ ವಾಸ್ತವ ಜಗತ್ತನ್ನು ಅರ್ಥ ಮಾಡಿಸುವುದೂ ಸವಾಲಾಗಿದೆ. ಅವರಿಗೆ ರಂಗಭೂಮಿ ಅನಿವಾರ್ಯವಾಗಿದೆ. ರಂಗಭೂಮಿಯು ಬಹುಶಿಸ್ತೀಯ ಕಲಿಕೆಯನ್ನು ನೀಡಲಿದ್ದು, ವರ್ಚ್ಯುವಲ್ ಜಗತ್ತು ಸೃಷ್ಟಿಸಿರುವ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಕೊಡಲಿದೆ ಎಂದು ತಿಳಿಸಿದರು.

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಪ್ರಸನ್ನ ಮಾತನಾಡಿ, ದೇಶದ ಆಡಳಿತ ವ್ಯವಸ್ಥೆಯು ಮಕ್ಕಳನ್ನು ಮರೆತಿದೆ. ದೇಶದ ಶೇ 50ರಷ್ಟು ಮಕ್ಕಳು ಖಿನ್ನತೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮೊಬೈಲ್ ಗೇಮಿಂಗ್, ವರ್ಚ್ಯುವಲ್ ಜಗತ್ತು ಬಾಲ್ಯವನ್ನು ಕಿತ್ತುಕೊಳ್ಳುತ್ತಿದೆ. ಅವರಿಗೆ ಮಕ್ಕಳ ರಂಗಭೂಮಿ ಚಿಕಿತ್ಸೆಯನ್ನು ನೀಡಬಲ್ಲದು. ಅಮಿತಾಬ್ ಬಚ್ಚನ್, ಇರ್ಫಾನ್ ಖಾನ್ ಸೇರಿದಂತೆ ಮೇರು ನಟರು ರಂಗಭೂಮಿ ಹಿನ್ನೆಲೆಯವರು. ಅವರಲ್ಲಿ ಸಹಜ ಅಭಿನಯ ಕಾಣುತ್ತಿದ್ದೆವು. ಈಗಿನ ಕಲಾವಿದರಿಗೆ ರಂಗಭೂಮಿಯಲ್ಲದೇ ಸಿನಿಮಾ, ಒಟಿಟಿ ವೇದಿಕೆಗಳಿವೆ. ಅವರಲ್ಲಿ ಸೃಜನಶೀಲತೆ, ಅನುಭವ ಕೊರತೆ ಕಾಣುತ್ತಿದೆ. ಈಗಿನ ನಟರೂ ದ್ವೀಪಗಳಂತಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಕಾರ್ಯಾಗಾರದ ನಿರ್ದೇಶಕ ರಜನೀಶ್ ಬಿಷ್ಟ್ ಉಪಸ್ಥಿತರಿದ್ದರು.

ಎಕ್ಸ್‌ಪ್ರೆಸ್‌ವೇನಲ್ಲಿ ಸರಣಿ ಅಪಘಾತ ಹಿನ್ನೆಲೆ

ಅಪಘಾತ ವಲಯದ ಬ್ಲಾಕ್‌ಸ್ಪಾಟ್ ಗುರುತಿಸುವಂತೆ ಅಧಿಕಾರಿಗಳಿಗೆ ಸೂಚನೆ



ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಯಶವಂತ್ ವಿಗುರುಕ್ ಮಾತನಾಡಿದರು.

ರಾಮನಗರ, ಸೆ.10(ಮೋಹನ್‌ರಾಜ್)– ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅಪಘಾತಗಳು ಕಡಿಮೆಯಾಗುತ್ತಿದ್ದರೂ ಈ ವ್ಯಾಪ್ತಿಯಲ್ಲಿ ಬಿಡದಿಯ ಶೇಷಗಿರಿಹಳ್ಳಿ, ಹೆಜ್ಜಾಲ ಗೇಟ್, ಕಲ್ಲೋಪ ಹಾಗೂ ಹನುಮಂತನಗರದಲ್ಲಿ ಅಪಘಾತಗಳಾಗುತ್ತಿವೆ. ಅದನ್ನು ತಡೆಗಟ್ಟುವ ಉದ್ದೇಶದಿಂದ ಅಪಘಾತ ವಲಯದ ಬ್ಲಾಕ್ ಸ್ಪಾಟ್ ಎಂದು ಗುರುತಿಸಿ ಅಪಘಾತಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳನ್ನು ಕೂಡಲೇ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಂಗಳವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಸ್ಥಳಗಳಲ್ಲಿ ವಾಹನ ಸವಾರರು ರಾಂಗ್ ರೂಟಲ್ಲಿ ಸಂಚರಿಸುವ ಕಾರಣ ಅಪಘಾತಗಳು ಸಂಭವಿಸುತ್ತವೆ. ಹಾಗಾಗಿ ಈ ರೀತಿ ತಪ್ಪು ಮಾರ್ಗದಲ್ಲಿ ಸಂಚರಿಸುವವರಿಗೆ ಮೊದಲ ಹಂತದಲ್ಲಿ ದಂಡ ವಿಧಿಸಬೇಕು. ನಂತರ ಕಾನೂನು ಪ್ರಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಜಾಗಗಳಲ್ಲಿ ಹಂಪ್ಸ್ ಹಾಕಿಸಿ ಅದಕ್ಕೆ ಬಣ್ಣ ಬಳಿಯಬೇಕು ಹಾಗೂ ಈ ಬಗ್ಗೆ ಮಾಹಿತಿ ನೀಡುವ ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದು ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ರಸ್ತೆಯಲ್ಲಿನ ಗುಂಡಿಗಳಿಂದ ಅಪಘಾತಗಳಾಗುವುದು ಅಥವಾ ಸಾವು ನೋವು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು. ಪ್ರಮುಖವಾಗಿ ಬಸ್‌ಗಳು ಸಂಚರಿಸುವ ರಸ್ತೆಯಲ್ಲಿ ಗುಂಡಿಗಳಿದ್ದರೆ ಮೊದಲು ಮುಚ್ಚಬೇಕು ಯಾವುದೇ ಕಾರಣಕ್ಕೂ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಮೈಸೂರು– ಬೆಂಗಳೂರು ಹೆದ್ದಾರಿ ಮಾರ್ಗದಲ್ಲಿ ಹಾಕಲಾಗಿರುವ ರಸ್ತೆ ಸುರಕ್ಷತೆಯ ಮೆಸ್‌ಗಳನ್ನು ಕೆಲವೆಡೆ ಕತ್ತರಿಸಲಾಗಿದ್ದು ಅದನ್ನು ಪುನಃ ಸುಸ್ಥಿತಿಗೆ ತರಬೇಕು ಹಾಗೂ ಈ ಹೆದ್ದಾರಿಯಲ್ಲಿ ಅಪಘಾತಗಳು ಹಾಗೂ ಸಾವು ನೋವುಗಳು ಆಗದಂತೆ ಎಚ್ಚರಿಕೆಯ ಕ್ರಮಗಳನ್ನು ವಹಿಸುವಂತೆ ಜಿಲ್ಲಾಧಿಕಾರಿಯವರು ಸಂಬಂಧಿಸಿದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ರಾಮನಗರ ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾರಿಗಳಾದ ಲೋಕೋಪಯೋಗಿ ವಿಭಾಗದ ಕಾರ್ಯಪಾಲಕ ಅಭಿಯಂತರ ಎಚ್.ಎಂ.ಮಹಾದೇವಪ್ಪ, ಪ್ರಾದೇಶಿಕ ಸಾರಿಗೆ ಅಧಿಕಾರಿ ಜಿತೇಂದ್ರ, ಪೊಲೀಸ್ ಅಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ನಿರಂಜನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರ ನಿಶ್ಚಿತ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಮೇಶ್ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಸಭೆಯಲ್ಲಿದ್ದರು.

ವಿರಾಜಪೇಟೆ: ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ



ವಿರಾಜಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವಿರಾಜಪೇಟೆ, ಸೆ.10–ಪ್ರಸಿದ್ಧ ವಿರಾಜಪೇಟೆ ಬಸವೇಶ್ವರ ದೇವಸ್ಥಾನದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ದೇವಸ್ಥಾನದಲ್ಲಿ ಸೆ.17ರವರೆಗೆ ಮಧ್ಯಾಹ್ನ, ರಾತ್ರಿ ಮಹಾಪೂಜೆ ಹಾಗೂ ಪ್ರಸಾದ ವಿನಿಯೋಗಿಸಲಾಗುವುದು. ಮಂಗಳೂರು ತಂಡದಿಂದ ಜರುಗಿದ ತತ್ವಪದ, ರಂಗಗೀತೆ, ಜಾನಪದ ಗೀತೆ, ಮಿಮಿಕ್ರಿ ಹಾಗೂ ಹಾಸ್ಯ ಕಾರ್ಯಕ್ರಮ ಗಮನ ಸೆಳೆಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ.ಪೂವಯ್ಯ, ದಿ.ಎನ್.ವೆಂಕಟೇಶ ಕಾಮತ್ ಅವರು ವಿರಾಜಪೇಟೆ ಗೌರಿ–ಗಣೇಶ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ಕಾರಣಕರ್ತರಾಗಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮದಿಂದ ಜನತೆಗೆ ಮನರಂಜನೆ ಹಾಗೂ ಭಕ್ತಿಯೊಂದಿಗೆ ಉತ್ಸವ ಆಚರಿಸಲಾಗುವುದು ಎಂದು ಹೇಳಿದರು.

ವಿರಾಜಪೇಟೆ ವಕೀಲರ ಸಂಘದ ಕಾರ್ಯದರ್ಶಿ ವಿ.ಜಿ.ರಾಕೇಶ್ ಮಾತನಾಡಿ, ಇಲ್ಲಿನ ಗೌರಿ–ಗಣೇಶೋತ್ಸವಕ್ಕೆ ಶತಮಾನಗಳ ಇತಿಹಾಸವಿದೆ. ದೊಡ್ಡ ವೀರರಾಜೇಂದ್ರ ವಿರಾಜಪೇಟೆಯನ್ನು ನಿರ್ಮಾಣ ಮಾಡಿದ ಸಂದರ್ಭ ಬಸವೇಶ್ವರ ದೇಗುಲವನ್ನೂ ನಿರ್ಮಿಸಲಾಯಿತು. ಸಾಂಸ್ಕೃತಿಕ ಮತ್ತು ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಬಸವೇಶ್ವರ ದೇವಸ್ಥಾನ ಕಾರ್ಯಕ್ರಮಗಳು ಜನಮನ್ನಣೆಗೆ ಪಾತ್ರವಾಗಿವೆ ಎಂದರು.

ಇದೇ ಸಂದರ್ಭ ವಾಯ್ಸ್ ಆಫ್ ಮೈಸೂರು ಸಂಗೀತ ರಸಸಂಜೆ ಕಾರ್ಯಕ್ರಮ ಮುಖ್ಯಸ್ಥ ಎಂ.ಬಿ.ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು. ಸಮಿತಿ ಸಂಚಾಲಕ ಹೈಕೋರ್ಟ್ ವಕೀಲ ರವೀಂದ್ರನಾಥ್ ಕಾಮತ್, ಪುರಸಭಾ ಸದಸ್ಯ ಸಿ.ಕೆ.ಪೃಥ್ವಿನಾಥ್, ಎಸ್.ಎಚ್. ಮತೀನ್, ಬಸವೇಶ್ವರ ದೇವಸ್ಥಾನ ಉಪಾಧ್ಯಕ್ಷ ಜೆ.ಎನ್. ಸಂಪತ್ ಕುಮಾರ್, ಮಂಗಳೂರಿನ ಸಿರಿ ಸಂಭ್ರಮ ಕಲಾ ತಂಡದ ಶಶಿರಾಜ್ ರಾವ್ ಕಾವೂರು, ಮೈಮ್ ರಾಮ್‌ದಾಸ್, ದೇವಸ್ಥಾನ ಖಜಾಂಚಿ ಜೆ.ಎನ್.ಪುಷ್ಪರಾಜ್ ಇದ್ದರು.

ಸೆ.17ರಂದು ಗಣೇಶ ಮೂರ್ತಿ ವಿಸರ್ಜನೆ



ಜೈ ಭಾರತ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ಎನ್.ಎನ್.ಶಿವು ಮಾತನಾಡಿದರು.

ವಿರಾಜಪೇಟೆ, ಸೆ.10–ಪಟ್ಟಣದ ಗೌರಿ–ಗಣೇಶ ಮೂರ್ತಿ ವಿಸರ್ಜನೆ ನಡೆಯುವ ಸೆ.17ರಂದು ಜೈ ಭಾರತ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ವತಿಯಿಂದ ಪಟ್ಟಣದ ಕಾರು ನಿಲ್ದಾಣದಲ್ಲಿ ಸಂಗೀತ ರಸಮಂಜರಿ ಹಾಗೂ ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್.ಎನ್.ಶಿವು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೌರಿ–ಗಣೇಶ ಮೂರ್ತಿ ವಿಸರ್ಜನೋತ್ಸವ ಪ್ರಯುಕ್ತ ಅಂದು ಸಂಜೆ 4 ಗಂಟೆಗೆ ನಡೆಯುವ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಸ್ಥಳೀಯ ಕಲಾವಿದರು ಸೆ.16ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಆಸಕ್ತರು ಮೊ.ಸಂ: 7022398295 ಅಥವಾ 9901969859 ಅನ್ನು ಸಂಪರ್ಕಿಸಬಹುದು. ರಾತ್ರಿ 8 ಗಂಟೆಗೆ ನಡೆಯುವ ರಸಸಂಜೆ ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ತೋರೆರ ಪ್ರಭು ಕುಟ್ಟಪ್ಪ, ಹಾರ್ವೋನಿಯಂ ವಾದಕ ಶಶಿ ಕುಮಾರ್, ದೈವ ನರ್ತಕ ಬೀಕಚಂಡ ಪುಟ್ಟ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸಂಘದ ಗೌರವಾಧ್ಯಕ್ಷ ತೋರೆರ ಕುಟ್ಟಪ್ಪ ಮಾತನಾಡಿ, ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾಕುಶಾಲಪ್ಪ, ಕೆದಮುಳ್ಳೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಪರಮೇಶ್ವರ್, ಮಾಜಿ ಅಧ್ಯಕ್ಷ ಮಾಳೇಟಿರ ಚುಕ್ಕು ದೇವಯ್ಯ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ಕಾವೇರಿ ಲಘು ವಾಹನ ಮಾಲೀಕರು ಹಾಗೂ ಚಾಲಕರ ಸಂಘದ ಅಧ್ಯಕ್ಷ ಹೇಮಂತ್, ದಾನಿಗಳಾದ ಕೊಪ್ಪಡ ಪಟ್ಟು ಪಳಂಗಪ್ಪ, ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಜೀವನ್, ಖಜಾಂಚಿ ಅರ್ಜುನ್ ತಿಮ್ಮಯ್ಯ, ಸಹ ಕಾರ್ಯದರ್ಶಿ ಜೇಕೋಬ್ ನರೋನಾ, ಗೌರವ ಸಲಹೆಗಾರ ಪ್ರವೀಣ್ ಶೆಟ್, ನಿರ್ದೇಶಕರಾದ ಟೈಗರ್ ಕಿರಣ್, ದಿನೇಶ್ ಉಪಸ್ಥಿತರಿದ್ದರು.

ವಿಜ್ಞಾನ, ತಂತ್ರಜ್ಞಾನ ಮಂಡಳಿಯೊಂದಿಗೆ ಚಾ.ನಗರ ವಿವಿ ಒಡಂಬಡಿಕೆ



ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯೊಂದಿಗೆ ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಒಡಂಬಡಿಕೆ ಮಾಡಿಕೊಂಡರು.

ಚಾಮರಾಜನಗರ, ಸೆ.10–ಚಾಮರಾಜನಗರ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಪೂರಕವಾದ ಅನ್ವೇಷಣೆ, ಸಂಶೋಧನೆ ಮತ್ತು ಅಧ್ಯಯನಕ್ಕೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ನಗರದ ಹೊರವಲಯದ ಸುವರ್ಣ ಗಂಗೋತ್ರಿಯ ನಿಜಗುಣ ಸಭಾಂಗಣದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಎಂ. ಆರ್.ಗಂಗಾಧರ್ ಒಡಂಬಡಿಕೆಗೆ ಸಹಿ ಹಾಕಿದರು.

ಬಳಿಕ ಮಾತನಾಡಿದ ಅವರು, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಪ್ರತಿ ವಿಶ್ವವಿದ್ಯಾನಿಲಯದಲ್ಲೂ ಬೌದ್ಧಿಕ ಆಸ್ತಿ ಕೋಶದ ಘಟಕಗಳ ಸ್ಥಾಪನೆ ಕಡ್ಡಾಯಗೊಳಿಸಿದೆ. ಇದು ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಪೂರಕವಾದ ಸಂಶೋಧನೆ ಮತ್ತು ಅನ್ವೇಷಣೆ ಮತ್ತು ಭೌಗೋಳಿಕ ಉತ್ಪನ್ನಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ವಿವಿಯ ಅಧ್ಯಯನ ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಅಧ್ಯಾಪಕರಿಗೆ ನೆರವಾಗಲಿದೆ. ಇವರು ಸಂಶೋಧನಾ ಉತ್ಪನ್ನಗಳ ಮೇಲೆ ಹಕ್ಕು ಪಡೆಯಬಹುದು ಎಂದರು.

ಕೆಎಸ್‌ಸಿಎಸ್‌ಟಿ ಕಾರ್ಯನಿರ್ವಾಹಕ ಕಾರ್ಯದರ್ಶಿ ಯು.ಟಿ.ವಿಜಯ್ ಮಾತನಾಡಿ, ಸಂಸ್ಥೆ 49 ವರ್ಷಗಳಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿಜ್ಞಾನ, ತಂತ್ರಜ್ಞಾನದ ನಾವೀನ್ಯತೆ ಬಳಸಿಕೊಳ್ಳುವ ಮೂಲಕ ಕಾರ್ಯನಿರ್ವಹಿಸುತ್ತಿದೆ. ಜಲ, ಮಣ್ಣು ಹಾಗೂ ಇಂಧನಗಳನ್ನು ಬಳಸಿಕೊಂಡು ಭೌಗೋಳಿಕ ಸಂಪನ್ಮೂಲಗಳ ಉತ್ಪಾದನೆ, ಅದರ ಸಂರಕ್ಷಣೆ ಮತ್ತು ಹಕ್ಕುಗಳ ಬಗೆಗೆ ಅನುಮೋದನೆ ನೀಡುತ್ತದೆ. ವಿಜ್ಞಾನ ತಂತ್ರಜ್ಞಾನಕ್ಕೆ ಪೂರಕವಾದ ಕಾರ್ಯಾಗಾರ, ವಿಶೇಷ ಉಪನ್ಯಾಸ ಮತ್ತು ಅರಿವು ಕಾರ್ಯಕ್ರಮಗಳೊಂದಿಗೆ ಸಂಶೋಧಕರು ರೈತರು, ಉತ್ಪನ್ನ ಸಿದ್ಧಪಡಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ಧನಸಹಾಯ ಹಾಗೂ ಕಾಪಿರೈಟ್ (ಹಕ್ಕು) ನೀಡಲಾಗುವುದು. ಈ ನಿಟ್ಟಿನಲ್ಲಿ ವಿವಿ ಕುಲಪತಿಗಳು ಸಹಮತ ಸೂಚಿಸಿ ಒಡಂಬಡಿಕೆಗೆ ಸಹಿ ಮಾಡಿದ್ದು ಸಂತಸವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಡಾ.ಸರಸಿಜ ಪದ್ಮನಾಭನ್, ಡಾ.ನಂದಿನಿ, ಡಾ.ಪ್ರಜನ್ಯ ವಿಶೇಷ ಉಪನ್ಯಾಸ ನೀಡಿದರು. ವಿಶ್ವವಿದ್ಯಾನಿಲಯದ ಪಿಎಂಇಬಿ ನಿರ್ದೇಶಕ ಡಾ.ವಿ.ಜಿ.ಸಿದ್ದರಾಜು, ಬೌದ್ಧಿಕ ಆಸ್ತಿ ಕೋಶ ಸಂಯೋಜನಾಧಿಕಾರಿ ಹಾಜೀರಾ ನಸ್ರೀನ್, ಕಾರ್ತಿಕ್, ದಿವ್ಯ, ಕಾಮೀಲಾ ತಬ್ಸುಮ್ ಇತರರಿದ್ದರು.

ಶ್ರೀಗಂಧದ ತುಂಡು ಸಾಗಿಸುತ್ತಿದ್ದ ಇಬ್ಬರ ಬಂಧನ

ಹನೂರು, ಸೆ.10–ಶ್ರೀಗಂಧ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ರಾಮಾಪುರ ಠಾಣೆ ಪೊಲೀಸರು, 45,000 ರೂ. ಮೌಲ್ಯದ 15 ಕೆಜಿ ಶ್ರೀಗಂಧದ ತುಂಡು ಹಾಗೂ ಬೈಕ್ ವಶಪಡಿಸಿಕೊಂಡಿದ್ದಾರೆ. ಸೆ.8ರಂದು ಮಧ್ಯಾಹ್ನ ತಾಲೂಕಿನ ಅಜ್ಜೀಪುರ ಗ್ರಾಮದ ಕಡೆಯಿಂದ ಮಂಚಾಪುರ ಹೊರವಲಯದ ಉಡುತೊರೆ ಹಳ್ಳ (ಕೆ.ಗುಂಡಾಪುರ) ಜಲಾಶಯದ ಚಾನಲ್ ರಸ್ತೆ ಮಾರ್ಗವಾಗಿ ಬೈಕ್‌ನಲ್ಲಿ ಶ್ರೀಗಂಧದ ತುಂಡುಗಳನ್ನು ಬಂಧಿತರು ಸಾಗಿಸುತ್ತಿದ್ದರು. ಮಾಹಿತಿ ಮೇರೆಗೆ ದಾಳಿ ನಡೆಸಿದ ರಾಮಾಪುರ ಪೊಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕ ಎಂ.ಎನ್. ಈಶ್ವರ್ ಹಾಗೂ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ. ನಂತರ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ನ್ಯಾಯಾಲಯ ವಶಕ್ಕೆ ಒಪ್ಪಿಸಿದ್ದಾರೆ.

ಶೀಳನೆರೆ ಸಾವಿತ್ರಮ್ಮ ನಿಧನ

ಕೆ.ಆರ್.ಪೇಟೆ, ಸೆ.10– ತಾಲೂಕಿನ ಶೀಳನೆರೆ ಗ್ರಾಮದ ಹಿರಿಯ ಮುಖಂಡ




ಲೇಟ್ ಪಾಪಣ್ಣ ಅವರ ಧರ್ಮಪತ್ನಿ ಸಾವಿತ್ರಮ್ಮ (87) ವಯೋಸಹಜ ಅನಾರೋಗ್ಯದಿಂದ ಸೋಮವಾರ ನಿಧನ ಹೊಂದಿದ್ದಾರೆ.

ಮೃತರು ಪುತ್ರರಾದ ಗ್ರಾಪಂ ಸದಸ್ಯರು ಹಾಗೂ ಕ್ಲಾಸ್ 1 ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಶೀಳನೆರೆ ಸಿದ್ದೇಶ್, ಇಂಜಿನಿಯರ್ ರಮೇಶ್, ಕೋರಮಂಡಲ್ ಸಕ್ಕರೆ ಕಾರ್ಖಾನೆ ಫೀಲ್ಡ್ ಆಫೀಸರ್ ದೇವರಾಜು, ಶಿವರಾಂ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಸೋಮವಾರ ಮಧ್ಯಾಹ್ನ ಶೀಳನೆರೆ ಗ್ರಾಮದಲ್ಲಿ ನಡೆಯಿತು.

ರಾಮಕೃಷ್ಣೇಗೌಡ

ಕೆ.ಆರ್.ಪೇಟೆ, ಸೆ.10– ತಾಲೂಕಿನ ಕಸಬಾ ಹೋಬಳಿಯ ಹರಿಹರಪುರ ಗ್ರಾಮದ ಹಿರಿಯ ಮುಖಂಡರು ಹಾಗೂ ಮಂಡಲ್ ಪಂಚಾಯ್ತಿ ಮಾಜಿ ಪ್ರಧಾನರಾದ ಹರಿಹರಪುರ ಹೆಚ್.ಸಿ



ರಾಮಕೃಷ್ಣೇಗೌಡ (80) ಅವರು ವಯೋಸಹಜ ಖಾಯಿಲೆಯಿಂದ ನಿಧನರಾದರು.

ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿರುವ ಜಮೀನಿನಲ್ಲಿ ಮಧ್ಯಾಹ್ನ ನಡೆಯಿತು.

ಮದ್ದೂರು ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಕೈ ತೆಕ್ಕೆಗೆ



ಮದ್ದೂರು ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಮದ್ದೂರು, ಸೆ.10– ತೀವ್ರ ಕುತೂಹಲ ಮೂಡಿಸಿದ್ದ ಮದ್ದೂರು ಪುರಸಭೆಯ ಎರಡನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳೆರಡು ಅಚ್ಚರಿ ಎಂಬಂತೆ ಕಾಂಗ್ರೆಸ್ ಪಕ್ಷವು ತನ್ನ ತೆಕ್ಕೆಗೆ ಪಡೆಯುವ ಮೂಲಕ ಜೆಡಿಎಸ್ ಪಕ್ಷಕ್ಕೆ ಮರ್ಮಾಘಾತ ನೀಡಿದೆ.

ಕಾಂಗ್ರೆಸ್ ಪಕ್ಷದ ನಾಲ್ಕು ಸದಸ್ಯರ ಪೈಕಿ ಬಹುದಿನಗಳಿಂದ ಓರ್ವ ಸದಸ್ಯ ಹೊರಗುಳಿದಿದ್ದು ಮೂರು ಸ್ಥಾನಗಳನ್ನು ಮಾತ್ರ ಹೊಂದಿದ್ದ ಕಾಂಗ್ರೆಸ್ ಸ್ಥಳೀಯ ಶಾಸಕ ಕೆ.ಎಂ.ಉದಯ್ ನೇತೃತ್ವದಲ್ಲಿ ಮದ್ದೂರು ಪುರಸಭೆಯ ಇತಿಹಾಸದಲ್ಲಿಯೇ ದಾಖಲೆ ಎಂಬಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳೆರಡನ್ನು ತನ್ನದಾಗಿಸಿಕೊಂಡಿದೆ.

ಫಲ ನೀಡಿದ ತಂತ್ರಗಾರಿಕೆ: 23 ಸದಸ್ಯ ಬಲದ ಪುರಸಭೆಯಲ್ಲಿ ಮಂಡ್ಯ ಸಂಸದ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶಾಸಕ ಕೆ.ಎಂ.ಉದಯ್ ಸೇರಿದಂತೆ 25 ಮಂದಿ ಮತ ಹಕ್ಕು ಹೊಂದಿದ್ದು 3 ಕಾಂಗ್ರೆಸ್, 4 ಪಕ್ಷೇತರ, 1 ಬಿ.ಜೆ.ಪಿ, 6 ಬಂಡಾಯ ಜೆ.ಡಿ.ಎಸ್ ಸದಸ್ಯರನ್ನು ಒಟ್ಟುಗೂಡಿಸಿ ಶಾಸಕ ಕೆ.ಎಂ.ಉದಯ್ ಮತ ಸೇರಿದಂತೆ ಒಟ್ಟು 15 ಒಳಗೊಂಡಂತೆ 2 ಸ್ಥಾನಗಳನ್ನು ಗೆಲ್ಲುವಲ್ಲಿ ಶಾಸಕರ ತಂತ್ರಗಾರಿಕೆ ಫಲ ನೀಡಿದೆ. ಈ ಹಿಂದೆ ಅಧಿಕಾರದಲ್ಲಿದ್ದ ಜೆ.ಡಿ.ಎಸ್. ಪಕ್ಷವು 12 ಸದಸ್ಯರನ್ನು ಹೊಂದಿದ್ದು 4 ಪಕ್ಷೇತರ ಸದಸ್ಯರ ಬೆಂಬಲದೊಡನೆ ಹಿಂದಿನ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸೇರಿದಂತೆ 17 ಮತದೊಡನೆ ಮೊದಲ 30 ತಿಂಗಳ ಎರಡು ವರಿಷ್ಠ ಹುದ್ದೆಗಳನ್ನು ತಮ್ಮದಾಗಿಸಿಕೊಂಡಿದ್ದರು.

ಆಪರೇಷನ್ ಹಸ್ತ: ಶಾಸಕ ಕೆ.ಎಂ.ಉದಯ್ 12 ಜೆ.ಡಿ.ಎಸ್ ಸದಸ್ಯರ ಪೈಕಿ 7 ಸದಸ್ಯರನ್ನು ಹೊರತರುವಲ್ಲಿ ಯಶಸ್ವಿಯಾಗಿದ್ದು ಸೋಮವಾರ ನಡೆದ ಚುನಾವಣೆ ವೇಳೆ ಮಾಜಿ ಅಧ್ಯಕ್ಷ ಸುರೇಶ್‌ಕುಮಾರ್ ಗೈರು ಹಾಜರಿಯಲ್ಲಿ 6 ಜೆ.ಡಿ.ಎಸ್ ಸದಸ್ಯರು ಕಾಂಗ್ರೆಸ್ ಬೆಂಬಲಕ್ಕೆ ನಿಂತು ತೀವ್ರ ಕುತೂಹಲ ಮೂಡಿಸಿದ ಆಪರೇಷನ್ ಹಸ್ತ ಯಶಸ್ವಿಯಾಯಿತು. ಬಿ.ಜೆ.ಪಿ ಓರ್ವ ಸದಸ್ಯೆ ಲತಾರಾಮು ಸಹ ಕಾಂಗ್ರೆಸ್ ಪಾಲಿಗೆ ಮುನ್ನುಡಿ ಬರೆದು ಇವರಿಗೆ ಪಕ್ಷೇತರ 4 ಸದಸ್ಯರು ಸಾಥ್ ನೀಡಿದ್ದು ವಿಶೇಷವಾಗಿತ್ತು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ: ವಾರ್ಡ್ ನಂ.5ರ ಕಾಂಗ್ರೆಸ್ ಸದಸ್ಯೆ ಕೋಕಿಲ ಅರುಣ್ ನೂತನ ಅಧ್ಯಕ್ಷರಾಗಿ ಹಾಗೂ ಜೆಡಿಎಸ್ ಬಂಡಾಯ ಸದಸ್ಯ ವಾರ್ಡ್ ನಂ. 20ರ ಟಿ.ಆರ್.ಪ್ರಸನ್ನಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಪ್ರತಿಸ್ಪರ್ಧಿಗಳಾದ ಜೆ.ಡಿ.ಎಸ್ ವಾರ್ಡ್ ನಂ. 9ರ ಶೋಭಾರಾಣಿ ಅಧ್ಯಕ್ಷ ಸ್ಥಾನಕ್ಕೆ ಹಾಗೂ ವಾರ್ಡ್ ನಂ. 18ರ ಪಕ್ಷೇತರ ಸದಸ್ಯ ಮನೋಜ್‌ಕುಮಾರ್ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ತಲಾ 8 ಮತಗಳನ್ನು ಪಡೆದು 7 ಮತಗಳ ಅಂತರದಿಂದ ಪರಾಭವಗೊಂಡರು.

ಬಿಗಿ ಬಂದೋಬಸ್ತ್: ಚುನಾವಣೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮಳವಳ್ಳಿ ಡಿ.ವೈ.ಎಸ್.ಪಿ ಕೃಷ್ಣಪ್ಪ, ವೃತ್ತ ನಿರೀಕ್ಷಕರಾದ ಶಿವಕುಮಾರ್, ವೆಂಕಟೇಗೌಡ ಸೇರಿದಂತೆ ಕೊಪ್ಪ, ಕೆಸ್ತೂರು, ಬೆಸಗರಹಳ್ಳಿ, ಭಾರತೀನಗರ ಠಾಣೆಯ ಪಿ.ಎಸ್.ಐ ಗಳ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್‌ನ್ನು ಕೈಗೊಳ್ಳಲಾಗಿತ್ತು.

2004ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಮದ್ದೂರು ಶಾಸಕ ಎಸ್.ಎಂ.ಕೃಷ್ಣ ಅವಧಿಯ ಬಳಿಕ ಸತತ 20 ವರ್ಷಗಳ ಕಾಲ ಜೆಡಿಎಸ್ ತೆಕ್ಕೆಯಲ್ಲಿದ್ದ ಮದ್ದೂರು ಪುರಸಭೆ ಆಡಳಿತವನ್ನು ಮತ್ತೆ ಕಾಂಗ್ರೆಸ್ ತೆಕ್ಕೆಗೆ ಪಡೆಯುವಲ್ಲಿ ಶಾಸಕ ಕೆ.ಎಂ.ಉದಯ್ ನೇತೃತ್ವ ತಂಡ ಯಶಸ್ವಿಯಾಗಿ ನಗುವಿನ ನಗೆ ಬೀರಿದೆ.

ಜೆ.ಡಿ.ಎಸ್ ಪಕ್ಷದಿಂದ ಆಯ್ಕೆಯಾಗಿದ್ದ ಸದಸ್ಯರಾದ ಬಿ.ಸಿ.ಸರ್ವಮಂಗಳ, ಆಯಿಷಾ ಜುಲೇವಿ, ವನಿತಾ, ಪ್ರಮೀಳ, ಟಿ.ಆರ್.ಪ್ರಸನ್ನಕುಮಾರ್, ಬಸವರಾಜು ಕಾಂಗ್ರೆಸ್ ಪಕ್ಷದತ್ತ ಮತ ಚಲಾಯಿಸಿದರೆ ಮತ್ತೋರ್ವ ಮಾಜಿ ಅಧ್ಯಕ್ಷ ಸುರೇಶ್ ಕುಮಾರ್ ಗೈರು ಹಾಜರಾದರು. ಈ ವೇಳೆ ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೈಲೂರು ಚಲುವರಾಜು, ಜಿ.ಪಂ. ಮಾಜಿ ಅಧ್ಯಕ್ಷ ಸುರೇಶ್ ಕಂಠಿ, ಮಾಜಿ ಅಧ್ಯಕ್ಷ ಎಂ.ಪಿ.ಅಮರ್ ಬಾಬು, ಮುಖಂಡರಾದ ಕೆ.ಆರ್.ಮಹೇಶ್, ಶಂಕರೇಗೌಡ, ಅರುಣ, ವಿಜಯ್‌ಕುಮಾರ್, ಆರ್.ಸಿ.ಮಹೇಶ್, ರಘು ಹಾಗೂ ಇತರರಿದ್ದರು.

ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್‌ಗೆ ಪ್ರತಿಷ್ಠಿತ ಎನ್‌ಎಬಿಎಚ್ ಮಾನ್ಯತೆ



ಮದರ್‌ಹುಡ್ ಹಾಸ್ಪಿಟಲ್‌ಗೆ ಲಭಿಸಿರುವ ಎನ್‌ಎಬಿಎಚ್ ಮಾನ್ಯತೆ

ಮೈಸೂರು,ಸೆ.10–ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್‌ಗೆ ಪ್ರತಿಷ್ಠಿತ ಎನ್‌ಎಬಿಎಚ್(ನ್ಯಾಷನಲ್ ಅಕ್ರೆಡಿಷನ್ ಬೋರ್ಡ್ ಫಾರ್ ಹಾಸ್ಪಿಟಲ್ಸ್ ಎಂಡ್ ಹೆಲ್ತ್‌ಕೇರ್ ಪ್ರೊವೈಡರ್ಸ್) ಮಾನ್ಯತೆಯನ್ನು ನೀಡಲಾಗಿದ್ದು, ಉನ್ನತ ಗುಣಮಟ್ಟದ ಆರೋಗ್ಯ ಸೇವೆಗೆ ಸಂಸ್ಥೆ ಹೊಂದಿರುವ ಬದ್ಧತೆಯ ಹಾದಿಯಲ್ಲಿ ಇದೊಂದು ಗಮನಾರ್ಹ ಮೈಲುಗಲ್ಲಾಗಿದೆ. ರೋಗಿಯ ಸುರಕ್ಷತೆ, ಆರೈಕೆಗಳಲ್ಲಿ ಕಠಿಣ ಗುಣಮಟ್ಟಗಳಿಗೆ ಮತ್ತು ತನ್ನ ಎಲ್ಲ ಸೇವೆಗಳಲ್ಲಿ ಉತ್ಕೃಷ್ಟತೆಗೆ ಅಂಟಿಕೊಂಡಿರುವುದಕ್ಕೆ ಇದು ಸಾಕ್ಷಿಯಾಗಿದೆ.

ಕಠಿಣವಾದ ಮೌಲ್ಯೀಕರಣ ಪ್ರಕ್ರಿಯೆಗೆ ಎನ್‌ಎಬಿಎಚ್ ಮಾನ್ಯತೆ ಹೆಸರಾಗಿದೆ. 10 ಅಧ್ಯಾಯಗಳಲ್ಲಿ ಪ್ರಮಾಣಿತ ಕಾರ್ಯಾಚರಣೆ ಕಾರ್ಯವಿಧಾನಗಳನ್ನು ಅನುಷ್ಠಾನಕ್ಕೆ ತರುವುದನ್ನು ಇದು ಒಳಗೊಂಡಿರುತ್ತದೆ. ಜೊತೆಗೆ 71 ಮಾನದಂಡಗಳು, 408 ಉದ್ದೇಶಿತ ಅಂಶಗಳನ್ನು ಇದು ಹೊಂದಿದ್ದು, ಇವೆಲ್ಲವೂ ಅತ್ಯುನ್ನತ ಆರೈಕೆಯ ಮಟ್ಟಗಳನ್ನು ಕಲ್ಪಿಸುವತ್ತ ಗಮನ ಕೇಂದ್ರೀಕರಿಸಿರುತ್ತವೆ.

ಈ ಸಾಧನೆ ಕುರಿತು ಪ್ರತಿಕ್ರಿಯಿಸಿದ ಮದರ್‌ಹುಡ್ ಹಾಸ್ಪಿಟಲ್ಸ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ವಿಜಯ ರತ್ನ ವೆಂಕಟರಾಮನ್, ನಮ್ಮ ಮೈಸೂರು ಘಟಕಕ್ಕೆ ಎನ್‌ಎಬಿಎಚ್ ಮಾನ್ಯತೆ ಸ್ವೀಕರಿಸುವುದಕ್ಕೆ ನಾವು ಅಪಾರ ಹೆಮ್ಮೆ ಪಡುತ್ತೇವೆ. ಈ ಪ್ರದೇಶದಲ್ಲಿ ತಾಯಂದಿರು ಮತ್ತು ಮಕ್ಕಳಿಗೆ ಅಗ್ರಮಾನ್ಯ ಆರೋಗ್ಯ ಸೇವೆಗಳನ್ನು ವಿತರಿಸುವಲ್ಲಿ ನಮ್ಮ ಅಚಲ ಬದ್ಧತೆಯನ್ನು ಈ ಅಂಗೀಕಾರ ಒತ್ತಿ ಹೇಳುತ್ತದೆ. ಪ್ರತಿ ರೋಗಿ ಸುರಕ್ಷಿತ, ಸಹಾನುಭೂತಿಯ ಮತ್ತು ವಿಶ್ವಮಟ್ಟದ ಆರೈಕೆ ಪಡೆಯುವ ಖಾತ್ರಿ ಮಾಡಿಕೊಳ್ಳುವುದು ಮತ್ತು ಅತ್ಯುನ್ನತ ಗುಣಮಟ್ಟಗಳನ್ನು ಉಳಿಸಿಕೊಳ್ಳುವಲ್ಲಿ ನಮ್ಮ ತಂಡದ ಬದ್ಧತೆಯನ್ನು ಎನ್‌ಎಬಿಎಚ್ ಮಾನ್ಯತೆಯ ಸಾಧನೆ ಬಿಂಬಿಸುತ್ತದೆ ಎಂದರು.

ಸತತವಾಗಿ ರೋಗಿಯ ಅನುಭವ ಮತ್ತು ಸುರಕ್ಷತೆಯನ್ನು ವಿಸ್ತರಿಸುವುದರೊಂದಿಗೆ ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್, ಮಹಿಳೆಯರು ಮತ್ತು ಮಕ್ಕಳ ಸಮಗ್ರ ಆರೈಕೆ ಪೂರೈಸುವಲ್ಲಿ ತನ್ನ ಧ್ಯೇಯಕ್ಕೆ ಬದ್ಧರಾಗಿದೆ ಎಂದು ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್ಸ್‌ನ ಸಿಬ್ಬಂದಿ ನಿರ್ದೇಶಕ ಸಂದೀಪ್ ಪಟೇಲ್ ಬಿ.ಜೆ. ಹೇಳಿದರು.

ಮೈಸೂರಲ್ಲಿ ಫುಟ್‌ಪಾತ್ ಒತ್ತುವರಿ, ಟ್ರಾಫಿಕ್ ಸಿಗ್ನಲ್ ಅವ್ಯವಸ್ಥೆ, ಕಾನೂನು ಸುವ್ಯವಸ್ಥೆ ಕುರಿತು ಎಂಜಿಪಿ ಚರ್ಚೆ

ಮೈಸೂರು,ಸೆ.10(ಎಸ್‌ಪಿಎನ್)–ಮೈಸೂರು ನಗರದಲ್ಲಿ ಫುಟ್‌ಪಾತ್ ಒತ್ತುವರಿ, ಸಂಚಾರಿ ಟ್ರಾಫಿಕ್ ಸಿಗ್ನಲ್ ಸಮಸ್ಯೆ, ಆಟೋ ಚಾಲಕರ ಅವ್ಯವಸ್ಥಿತ ನಿಲುಗಡೆ, ಹೆಚ್ಚು ಮಕ್ಕಳಿರುವ ಪಿಜಿ ಕೇಂದ್ರಗಳ ಸುತ್ತ ನಿಗಾ ಸೇರಿದಂತೆ ಇತರೆ ಸಂಚಾರ ಮತ್ತು ಕಾನೂನು ಸುವ್ಯವಸ್ಥೆ ಕುರಿತು ಮೈಸೂರು ಗ್ರಾಹಕರ ಪರಿಷತ್ (ಮೈಗ್ರಾಪ)ನಲ್ಲಿ ಸದಸ್ಯರು ಗಹನ ಚರ್ಚೆ ನಡೆಸಿದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಸಾಮಾನ್ಯ ಸಭೆಯಲ್ಲಿ ಮೈಸೂರು ನಗರದಲ್ಲಿ ಸುಧಾರಿತ ಸಂಚಾರ ವ್ಯವಸ್ಥೆ ಕುರಿತು ವಿವಿಪುರಂ ಠಾಣೆಯ ಇನ್ಸ್‌ಪೆಕ್ಟರ್ ವಿವೇಕಾನಂದ, ಸಂಚಾರ ಠಾಣೆ ಎಎಸ್‌ಐ ಮುರುಳಿ ಅವರೊಂದಿಗೆ ಸದಸ್ಯರು ಸಂವಾದ ನಡೆಸಿದರು.

ಸೆ.5ರ 'ಮೈಸೂರು ಮಿತ್ರ' ವರದಿ ಚರ್ಚೆ: ಮೈಸೂರು ನಗರಾದ್ಯಂತ ಪ್ರಮುಖ ರಸ್ತೆ ವೃತ್ತಗಳಲ್ಲಿರುವ ಟ್ರಾಫಿಕ್ ಸಿಗ್ನಲ್ ಲೈಟ್‌ಗಳ ಸಮಸ್ಯೆ ಕುರಿತು 'ಮೈಸೂರು ಮಿತ್ರ' ಸೆ.5ರ ಆರನೇ ಪುಟದಲ್ಲಿ 'ಮೈಸೂರಲ್ಲಿ ಹಲವು ವೃತ್ತಗಳ ಸಿಗ್ನಲ್ ಲೈಟ್‌ಗಳಿಗೆ ಗ್ರಹಣ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿದ್ದ ವರದಿ ಕುರಿತು ಸದಸ್ಯರು ಪೊಲೀಸರ ಗಮನ ಸೆಳೆದರಲ್ಲದೆ, ಒಂಟಿಕೊಪ್ಪಲು ಸಿಗ್ನಲ್ ಲೈಟ್, ಆಕಾಶವಾಣಿ ವೃತ್ತದ ಸಿಗ್ನಲ್ ಲೈಟ್ ಸೇರಿದಂತೆ ನಗರದ ಹಲವೆಡೆ ಸಿಗ್ನಲ್ ಲೈಟ್‌ಗಳು ಏಕೆ ಆನ್ ಆಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಎಎಸ್‌ಐ ಮುರುಳಿ, ವಿವಿಪುರಂ ಸಂಚಾರ ಠಾಣಾ ವ್ಯಾಪ್ತಿ ಸೇರಿದಂತೆ ನಗರಾದ್ಯಂತ ಸಿಗ್ನಲ್ ಲೈಟ್ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ನೀಡಲಾಗಿದೆ.

ಆದರೆ, ಆ ಸಂಸ್ಥೆ ಕೆಲವು ತಿಂಗಳಿಂದ ಸರಿಯಾಗಿ ಟ್ರಾಫಿಕ್ ಸಿಗ್ನಲ್ ಲೈಟ್ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಕೆಲವೆಡೆ ಲೈಟ್‌ಗಳು ಆನ್ ಆಗುತ್ತಿಲ್ಲ. ಈ ಸಮಸ್ಯೆಯನ್ನು ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಅಲ್ಲದೆ, 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ವರದಿ ಬಗ್ಗೆ ಚರ್ಚೆಯಾಗಿದೆ. ಸದ್ಯದಲ್ಲೆ ಈ ಸಮಸ್ಯೆ ತಾರ್ಕಿಕ ಅಂತ್ಯ ಕಾಣಲಿದೆ ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.



ಮೈಸೂರು ನಗರದಲ್ಲಿ ಸುಧಾರಿತ ಸಂಚಾರ ವ್ಯವಸ್ಥೆ ಕುರಿತು ವಿವಿ ಪುರಂ ಠಾಣೆಯ ಇನ್ಸ್‌ಪೆಕ್ಟರ್ ವಿವೇಕಾನಂದ, ಸಂಚಾರ ಠಾಣೆ ಎಎಸ್‌ಐ ಮುರುಳಿ ಅವರೊಂದಿಗೆ ಸದಸ್ಯರು ಸಂವಾದ ನಡೆಸಿದರು.

ಫುಟ್‌ಪಾತ್ ಒತ್ತುವರಿಗೆ ನಮ್ಮನ್ನು ಪ್ರಶ್ನಿಸಬೇಡಿ: ಮೈಸೂರು ನಗರದ ಹೃದಯ ಭಾಗದಲ್ಲಿರುವ ಕೆ.ಆರ್. ವೃತ್ತ, ಡಿ.ದೇವರಾಜ ಅರಸು ರಸ್ತೆ ಸುತ್ತಮುತ್ತ, ನ್ಯೂ ಕಾಂತರಾಜಅರಸ್ ರಸ್ತೆಯ ಮೈಸೂರು ದಿನಂತ ವೃತ್ತ, ವಿಜಯನಗರ 2ನೇ ಹಂತದ ಆಫೀಸ್ ವೃತ್ತ, ಹೆಬ್ಬಾಳ ಸೂರ್ಯ ಬೇಕರಿ ಹಾಗೂ ನಂಜುಮಳಿಗೆ (ಮೈಸೂರು–ಮಾನಂದವಾಡಿ ರಸ್ತೆ) ಬಳಿ ಸೇರಿದಂತೆ ಇತರೆಡೆ ಬೀದಿಬದಿ ವ್ಯಾಪಾರಿಗಳು ಫುಟ್‌ಪಾತ್ ಬಿಟ್ಟು ರಸ್ತೆಯಲ್ಲಿ ನಿಂತು ವ್ಯಾಪಾರ ಮಾಡುತ್ತಿದ್ದಾರೆ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದ ವಿವಿ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ, ಎಎಸ್‌ಐ ಮುರುಳಿ, ಈ ಸಮಸ್ಯೆಗೂ ನಮಗೂ ಸಂಬಂಧವಿಲ್ಲ. ಅಧಿಕೃತವಾಗಿ ರಸ್ತೆಬದಿ ವ್ಯಾಪಾರ ಮಾಡಲು ಕೆಲ ಷರತ್ತುಗಳನ್ನು ವಿಧಿಸಿ, ಮೈಸೂರು ನಗರಪಾಲಿಕೆಯೇ ಅನುಮತಿ ಪತ್ರ ನೀಡಿದೆ, ಈ ಸಮಸ್ಯೆಗೆ ನೀವು ಪಾಲಿಕೆ ಆಯುಕ್ತರನ್ನೇ ಕೇಳಬೇಕು. ಪಾಲಿಕೆ ಅಧಿಕಾರಿಗಳು ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಭದ್ರತೆ ಕೇಳಿದರೆ, ಕೊಡುತ್ತೇವೆ ಅಷ್ಟೇ ಎಂದರು.

ಸಾರ್ವಜನಿಕರಲ್ಲಿ ಅರಿವು ಮೂಡಿಸಿ: ಕಾನೂನು ಪಾಲನೆ, ಶಿಸ್ತು, ಸಂಯಮ ಸೇರಿದಂತೆ ರಸ್ತೆ ನಿಯಮಗಳು ಹಾಗೂ ಇತರೆ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಕುರಿತು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದ ಪೊಲೀಸರು, ಆನ್‌ಲೈನ್ ವಂಚನೆ, ನಕಲಿ ದಾಖಲೆ ಮೂಲಕ ಆಸ್ತಿ ವಂಚನೆ ಪ್ರಕರಣಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದರು.

ಸದಸ್ಯ ವಾಸು ಸಂಚಾರ ಅವ್ಯವಸ್ಥೆ ಕುರಿತು, ಶಾಲೆಗಳಿಗೆ ಮಕ್ಕಳನ್ನು ಬಿಡಲು ಹಾಗೂ ಸರ್ಕಾರಿ ನೌಕರರು, ಕಾರ್ಮಿಕರು ಸರಿಯಾದ ಸಮಯಕ್ಕೆ ಕಚೇರಿಗಳಿಗೆ ತಲುಪಲು ಆಗುತ್ತಿಲ್ಲ, ಅಲ್ಲದೇ ಕೆಲವರು ರಸ್ತೆ ಬದಿಯಲ್ಲೇ ತಮ್ಮ ವಾಹನ ನಿಲ್ಲಿಸುತ್ತಾರೆ. ಇದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಇಂತಹವರ ಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಪಿಜಿ ಕೇಂದ್ರಗಳ ಸುತ್ತ ಗಮನಹರಿಸಿ: ಮೈಸೂರಿನ ಸರಸ್ವತಿಪುರಂನಲ್ಲಿ 120ಕ್ಕೂ ಹೆಚ್ಚು ಹೆಣ್ಣು ಮಕ್ಕಳು ವಾಸಿಸುವ ಪಿಜಿ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ ತಡ ರಾತ್ರಿವರೆಗೂ ಹೆಣ್ಣು ಮಕ್ಕಳು ಓಡಾಟ ಮಾಡುತ್ತಿರುತ್ತಾರೆ. ಹೆಣ್ಣು ಮಕ್ಕಳ ಭದ್ರತೆ ದೃಷ್ಟಿಯಿಂದ ಪಿಜಿ ಕೇಂದ್ರದ ಮಾಲೀಕರ ಜೊತೆ ಸಭೆ ಮಾಡುವಂತೆ ಮೈಗ್ರಾಪ ಸದಸ್ಯ ಭಾನು ಪ್ರಶಾಂತ್, ಪೊಲೀಸರಲ್ಲಿ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಪೊಲೀಸರು, ನಾವು ಮಹಿಳೆಯರಿಗೆ ಭದ್ರತೆ ನೀಡಲು ಸದಾ ಸಿದ್ಧ. ಆದರೆ, ಎಲ್ಲಾ ಸಂದರ್ಭದಲ್ಲೂ ಪೊಲೀಸರು ಪ್ರವೇಶ ಮಾಡುವಂತಿಲ್ಲ. ಪಿಜಿ ಕೇಂದ್ರಗಳ ಪರಿಶೀಲನೆ ಕುರಿತು ನಗರಪಾಲಿಕೆ ಅಧಿಕಾರಿಗಳು ಗಮನ ಹರಿಸಬೇಕು ಎಂದು ಉತ್ತರಿಸಿದರು.

ಸಭೆಯಲ್ಲಿ ಮೈಸೂರು ಗ್ರಾಹಕ ಪರಿಷತ್ ಸದಸ್ಯರಾದ ಶ್ರೀಶೈಲ ರಾಮಣ್ಣವರ್, ಎಸ್.ರೋಹಿತ ಸಾಂಬಶಿವನ್, ಜೋಸೆಫ್, ಕೆ.ವಿ.ಭಾನು ಪ್ರಶಾಂತ್, ಡಾ.ರೇಣು ಅಗ್ರವಾಲ್, ಎಂ.ಆರ್.ಓಂಕಾರಯ್ಯ, ಕವಿಕೆ ನಾಯ್ಡು, ಪಿ.ರಾಕೇಶ್, ಬಿ.ಎಸ್.ಸೋಮಶೇಖರ, ಮನೋಹರ, ಎಸ್.ವಾಸು, ಜಿ.ಶ್ರೀಧರ್, ವೆಂಕಟೇಶ್, ಎಂ.ಅಂಜುಮನ್, ವಿ.ಎಸ್.ಸೇತುರಾವ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಟ್ರಾಫಿಕ್ ಪೊಲೀಸರು ಮೊಬೈಲ್‌ನಲ್ಲಿ ಮುಳುಗಿರುತ್ತಾರೆ

"ಕಳೆದೊಂದು ವರ್ಷದಿಂದ ಮೈಸೂರು ನಗರದ ಪ್ರಮುಖ ಸಿಗ್ನಲ್‌ಗಳಲ್ಲಿ ಸವಾರರು ಸಿಗ್ನಲ್ ಜಂಪ್ ಮಾಡಿ, ಮೊಬೈಲ್‌ನಲ್ಲಿ ಮಾತನಾಡಿಕೊಂಡು ವಾಹನ ಚಾಲನೆ ಮಾಡುತ್ತಿದ್ದಾರೆ. ಯುವಕ–ಯುವತಿಯರು ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುತ್ತಿದ್ದರೂ ಸಂಚಾರಿ ಪೊಲೀಸರು ನೋಡಿಯೂ ನೋಡದಂತೆ ಮೊಬೈಲ್ ನೋಡುತ್ತ ಕುಳಿತಿರುತ್ತಾರೆ. ಇದರಿಂದ ಹಿರಿಯ ನಾಗರಿಕರು, ವಿಶೇಷಚೇತನರು ವಾಹನ ಚಾಲನೆ ಮಾಡುವಾಗ ಹೈರಾಣಾಗುತ್ತಿದ್ದಾರೆ. ಹೀಗಾದರೆ, ಸಂಚಾರ ವ್ಯವಸ್ಥೆ ಸರಿಯಾಗುವುದು ಹೇಗೆ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದ ಪೊಲೀಸರು, ಪೊಲೀಸರು ಕರ್ತವ್ಯದಲ್ಲಿ ಮೊಬೈಲ್ ವೀಕ್ಷಣೆ ಮಾಡುತ್ತಿದ್ದಲ್ಲಿ, ಅಂತಹ ನಿರ್ದಿಷ್ಟ ಪ್ರಕರಣಗಳಿದ್ದರೆ ಲಿಖಿತ ರೂಪದಲ್ಲಿ ದೂರು ನೀಡಿದರೆ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸುವ ಭರವಸೆ ನೀಡಿದರು.

ಸೆ.15ರಂದು ವಿದ್ಯಾವಾರಿಧಿ ಪ್ರಶಸ್ತಿ, ಕನ್ನಡ ಕಿಶೋರಿ ಪ್ರಶಸ್ತಿ ಪ್ರದಾನ



ರವೀಶ್‌ಕುಮಾರ್ ರಾಮಚಂದ್ರ ಭಟ್ ಉಷಾಮಣಿ ರಾಘವೇಂದ್ರ ಜೈಬುನ್ನೀಸ



ಎನ್.ಅನು ವರ್ಷ ಮಹೇಶ್ ದೀಕ್ಷಾ ಅರಸ್

ಮೈಸೂರು,ಸೆ.10–ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಸೆ.15ರಂದು ಸಂಜೆ 4 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆ ಆವರಣದಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ಪ್ರತಿಷ್ಠಾನದ 19ನೇ ವಾರ್ಷಿಕೋತ್ಸವ ಪ್ರಯುಕ್ತ ಮೊಹಮ್ಮದ್ ಹುಮಾಯೂನ್ ಎನ್. ಅವರ 'ಭಾವದಿಂಚರ' ಕವನ ಸಂಕಲನ ಕೃತಿ ಲೋಕಾರ್ಪಣೆ, ಚುಟುಕು ಕವಿಗೋಷ್ಠಿ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಇದೇ ವೇಳೆ ಬಿ.ರವೀಶ್‌ಕುಮಾರ್, ರಾಮಚಂದ್ರ ಭಟ್, ಶ್ರೀಮತಿ ಎಸ್.ಉಷಾಮಣಿ, ಸಿ.ಎಸ್.ರಾಘವೇಂದ್ರ, ಜೈಬುನ್ನೀಸಾ ಅವರಿಗೆ ವಿದ್ಯಾವಾರಿಧಿ ಪ್ರಶಸ್ತಿ, ಕು. ಎನ್.ಅನು, ವರ್ಷ ಮಹೇಶ್, ಸಿ.ದೀಕ್ಷಾ ಅವರಿಗೆ ಕನ್ನಡ ಕಿಶೋರಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನನಸಾಯ್ತು ತುಳವರ ಕನಸು: ತುಳು ಲಿಪಿಗೆ ಯೂನಿಕೋಡ್ ಮಾನ್ಯತೆ!

ಮಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ಅತೀ ಹೆಚ್ಚು ಜನರು ಮಾತನಾಡುವ ತುಳು ಭಾಷೆ ಇದೀಗ ಯೂನಿಕೋಡ್‌ಗೆ ಸೇರ್ಪಡೆಗೊಂಡಿದ್ದು, ಈ ಮೂಲಕ ಹಲವು ವರ್ಷಗಳ ತುಳುವರ ಕನಸು ನನಸಾದಂತಾಗಿದೆ. ಯೂನಿಕೋಡ್‌ನ 16ನೇ ಆವೃತ್ತಿಯಾಗಿ ತುಳು ಲಿಪಿ ಸೇರ್ಪಡೆಯಾಗಿದ್ದು, ಒಟ್ಟು 80 ಅಕ್ಷರಗಳನ್ನು ಸೇರ್ಪಡೆಗೊಳಿಸಲಾಗಿದೆ. ಯುನಿಕೋಡ್‌ನಲ್ಲಿ ತುಳು ಲಿಪಿ ಲಭ್ಯವಾಗಿರುವ ಕಾರಣ ಮುಂದಿನ ದಿನಗಳಲ್ಲಿ ನ್ಯಾಚುರಲ್ ಲಾಂಗ್ವೇಜ್ ಪ್ರೊಸೆಸಿಂಗ್, ಟೆಕ್ಸ್ಟ್ ಟು ಸ್ಪೀಚ್, ಸ್ಪೀಚ್ ಟು ಟೆಕ್ಸ್ಟ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇವೆಲ್ಲವನ್ನೂ ಮಾಡಲು ಸಾಧ್ಯವಾಗಲಿದೆ. 2017ರಲ್ಲಿ ಯೂನಿಕೋಡ್ ಅಗತ್ಯದ ಹಿನ್ನೆಲೆಯಲ್ಲಿ ತುಳು ಸಾಹಿತ್ಯ ಅಕಾಡೆಮಿಯು ತುಳು ಅಕ್ಷರಗಳನ್ನು ಅಂತಿಮಗೊಳಿಸಲು ಒಂದು ಸಮಿತಿ ರಚಿಸಿತ್ತು. ಮಾಹಿತಿ ತಂತ್ರಜ್ಞಾನ ತಜ್ಞರಾದ ಯು.ಬಿ.ಪವನಜ ತಾಂತ್ರಿಕ ಸಲಹೆ ನೀಡಿದ್ದರು. ಇದರಂತೆ ತುಳು ಅಕ್ಷರಗಳ ಪಟ್ಟಿ ಮಾಡಲಾಗಿತ್ತು. 80 ಪುಟಗಳ ಪಟ್ಟಿಯನ್ನು ಯುನಿಕೋಡ್‌ಗೆ ಕಳುಹಿಸಲಾಗಿತ್ತು. ಇದೇ ಸಂದರ್ಭ 'ತಿಗಳಾರಿ ಲಿಪಿ' ಎಂದು ಪ್ರತ್ಯೇಕ ಪ್ರಸ್ತಾವನೆ ಕೂಡ ಸಲ್ಲಿಸಲಾಗಿತ್ತು.

ಜೋಡಿ ಗಾಡಿ, ಚಕ್ಕಡಿಗಾಡಿ ಓಟದ ಸ್ಪರ್ಧೆಗೆ ಚಾಲನೆ



ಕೂರ್ಗಳ್ಳಿಯಲ್ಲಿ ಗೌರಿ–ಗಣೇಶ ಹಬ್ಬದ ಪ್ರಯುಕ್ತ ವೈಭವ ಲಯನ್ಸ್ ಕೂರ್ಗಳ್ಳಿ ವತಿಯಿಂದ ರಾಷ್ಟ್ರಮಟ್ಟದ 2ನೇ ವರ್ಷದ ಜೋಡಿ ಗಾಡಿ ಮತ್ತು ಚಕ್ಕಡಿ ಗಾಡಿ ಓಟದ ಸ್ಪರ್ಧೆಗೆ ಚಾಲನೆ ನೀಡಲಾಯಿತು. ಈ ವೇಳೆ ಮೈಸೂರು ಜಿಪಂ ಮಾಜಿ ಅಧ್ಯಕ್ಷರೂ ಆದ ಮೈಸೂರು ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಪ್ರಕಾಶ್, ವಕೀಲ ಜೀವನ್, ವೈಭವ ಲಯನ್ಸ್ ಗ್ರೂಪ್‌ನ ದೀಕ್ಷಿತ್‌ಗೌಡ, ಅಭಿಷೇಕ್, ಸುನಿಲ್, ಅಶೋಕ್, ಮಧು, ಸಂಘದ ಸದಸ್ಯರು, ಕೂರ್ಗಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಆರ್ಥಿಕ ಧನಸಹಾಯ...




ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀ ಸತ್ಯಸಾಯಿ ಬಾಬಾ ಶಾಲೆಯ 1981ರ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ಮಾದೇಶ ಅವರ ಕುಟುಂಬಕ್ಕೆ ಆರ್ಥಿಕ ಧನಸಹಾಯ ಮಾಡಲಾಯಿತು. ಈ ವೇಳೆ ಮೋಹನ್‌ಕುಮಾರ್, ರಾಮಕೃಷ್ಣ, ಮಂಜುನಾಥ್, ಶಿವಕುಮಾರ್ ಉಪಸ್ಥಿತರಿದ್ದರು.

ಡಾ.ಎ.ಪಿ.ಚಂದ್ರಶೇಖರ್‌ಗೆ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಶ್ರದ್ಧಾಂಜಲಿ

ಮೈಸೂರು,ಸೆ.10–ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ, ಸೆ.7ರಂದು ನಿಧನರಾದ ಡಾ. ಎ.ಪಿ. ಚಂದ್ರಶೇಖರ್ ಅವರಿಗೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಸಭೆಯಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಬಸವನಗೌಡಪ್ಪ, ಡಾ. ಎ.ಪಿ. ಚಂದ್ರಶೇಖರ್ ಅವರನ್ನು ಸ್ಮರಿಸುತ್ತಾ ಉತ್ತಮ ಶಿಕ್ಷಕರಾಗಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ಶಿಕ್ಷಣ ನೀಡಿದ್ದಾರೆ. ಅವರು ಆಸ್ಪತ್ರೆ ಮತ್ತು ಸಮಾಜಕ್ಕೆ ಸಲ್ಲಿಸಿದ ಸೇವೆ ವಿದ್ಯಾರ್ಥಿಗಳಿಗೆ ಮಹಾ ಪ್ರೇರಣೆಯಾಗಿದೆ. ಸಹದ್ಯೋಗಿಗಳೊಂದಿಗೆ ಉತ್ತಮ ಸ್ನೇಹ ಬಾಂಧವ್ಯವನ್ನು ಹೊಂದಿದ್ದರು ಎಂದರು.



ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು ಮಾತನಾಡಿ, ಡಾ.ಎ.ಪಿ.ಚಂದ್ರಶೇಖರ್ 2008ರಿಂದ 2014ರವರೆಗೆ ಸುಮಾರು 6 ವರ್ಷಗಳ ಕಾಲ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ಆಡಳಿತಾತ್ಮಕವಾಗಿಯು, ವಿಭಾಗದ ಮತ್ತು ಆಸ್ಪತ್ರೆಯ ಶ್ರೇಯೋಭಿವೃದ್ಧಿಗಾಗಿ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದರು ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಹಿರಿಯ ವೈದ್ಯ ಡಾ. ಸುಮಾ ಮತ್ತು ಆಸ್ಪತ್ರೆಯ ಹಿರಿಯ ಶುಶ್ರೂಷಿ ಶ್ರೀಮತಿ ಸಿಬಿ ಅವರು ಡಾ.ಎ.ಪಿ.ಚಂದ್ರಶೇಖರ್ ಸೇವೆಯನ್ನು ಸ್ಮರಿಸಿದರು.

ಡಾ.ಎ.ಪಿ.ಚಂದ್ರಶೇಖರ್‌ರವರ ಮಗ, ಮಗಳು ಮತ್ತು ಇತರೆ ಕುಟುಂಬ ಸದಸ್ಯರು ಹಾಜರಿದ್ದರು. ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರು, ವಿದ್ಯಾರ್ಥಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದಿಂದ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಶೋಭಾಕುಮಾರಿ ಅವರಿಗೆ ಅಭಿನಂದನೆ...



ಮೈಸೂರು ಜಿಲ್ಲೆಯ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ಶ್ರೀಮತಿ ಶೋಭಾ ಕುಮಾರಿ ಅವರನ್ನು ಶ್ರೀರಕ್ಷಾ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಸ್.ಬಿ.ಎಂ.ಮಂಜು, ಉಪಾಧ್ಯಕ್ಷ ಪ್ರಶಾಂತ್, ನಿರ್ದೇಶಕರಾದ ತಿರುಮಲೇಶ್, ರಾಜೇಶ್, ಭಾಗ್ಯಮ್ಮ, ಕಾರ್ಯದರ್ಶಿ ನೀತು, ತಿಮ್ಮೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಸೆ.30ರೊಳಗೆ ಬೇಡಿಕೆ ಈಡೇರಿಸದೇ ಹೋದಲ್ಲಿ ವಿಧಾನಸೌಧ ಚಲೋ: ರೈತರ ಒಕ್ಕೂಟ ಎಚ್ಚರಿಕೆ

ಮೈಸೂರು, ಸೆ.10(ಎಸ್‌ಪಿಎನ್)– ಕಾಂಗ್ರೆಸ್ ಸರ್ಕಾರ ಚುನಾವಣೆಗೂ ಮುನ್ನ ರೈತರಿಗೆ ನೀಡಿದ್ದ ಭರವಸೆಗಳಲ್ಲಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ರದ್ದು ಸೇರಿದಂತೆ ಇತರೆ ಬೇಡಿಕೆಗಳನ್ನು ಸೆ.30ರೊಳಗೆ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗುವುದು ಎಂದು ರೈತ ಮುಖಂಡ ಕುರುಬೂರು ಶಾಂತಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆಲಂಗಾಣದಲ್ಲಿ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಅಕ್ರಮ–ಸಕ್ರಮ ಯೋಜನೆ ಮರುಜಾರಿಗೊಳಿಸದಂತೆ ರಾಜ್ಯದಲ್ಲೂ ಜಾರಿಗೊಳಿಸಬೇಕು. ರಾಜ್ಯದಲ್ಲಿ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಆಧಾರ್ ಲಿಂಕ್ ಮಾಡುವ ವಿಚಾರ ಕೈಬಿಡಬೇಕು. ರಾಜ್ಯದ ಎಲ್ಲಾ ಜಲಾಶಯಗಳು ಹಾಗೂ ಕೆರೆಗಳ ಹೂಳು ತೆಗೆಸಿ ರೈತರ ಜಮೀನಿಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು. ಕೃಷಿ ಸಾಲ ಪಾವತಿಸದ ರೈತರ ಜಮೀನು ವಶಪಡಿಸಿಕೊಳ್ಳುವ ಸರ್ಫೈಸಿ ಕಾನೂನು ರದ್ದುಪಡಿಸಬೇಕು.



ಬರ, ಅತಿವೃಷ್ಟಿ, ಪ್ರಕೃತಿ ವಿಕೋಪ ಕುರಿತು ಎನ್‌ಡಿಆರ್‌ಎಫ್ ಪರಿಹಾರ ಮಾನದಂಡ ತಿದ್ದುಪಡಿ ಮಾಡಿ, ವೈಜ್ಞಾನಿಕ ಮಾನದಂಡ ಮೂಲಕ ಪರಿಹಾರ ನೀಡುವ ಕಾನೂನು ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ.

ರೈತರಿಗೆ ಖಾಸಗಿ ಫೈನಾನ್ಸ್, ಬ್ಯಾಂಕ್‌ಗಳ ಸಾಲ ವಸೂಲಾತಿಗೆ ನೋಟಿಸ್ ನೀಡಿ ಜಮೀನು ಹರಾಜು ಹಾಕುವುದನ್ನು ನಿಲ್ಲಿಸಬೇಕು ಹಾಗೂ ರಾಜ್ಯ ಸರ್ಕಾರ ಜಿಂದಾಲ್ ಕಂಪನಿಗೆ ನೀಡಿರುವ 3,667 ಎಕರೆ ಜಮೀನು ನೀಡಿರುವುದನ್ನು ವಾಪಸ್ ಪಡೆಯಬೇಕು. ಕಳಸಾ–ಬಂಡೂರಿ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮತಿ ಕೊಡಿಸಲು ರಾಜ್ಯ ಸರ್ಕಾರ, ಕೇಂದ್ರದ ಮೇಲೆ ಒತ್ತಡ ತರಬೇಕು ಎಂದು ಶಾಂತಕುಮಾರ್ ಆಗ್ರಹಿಸಿದ್ದಾರೆ.

ಕಬ್ಬಿನ ಉತ್ಪನ್ನ ಇಳುವರಿ ಕಡಿಮೆ ತೋರುತ್ತಿರುವ ಕಾರಣ ಪ್ರಸಕ್ತ ಸಾಲಿನ ದರಕ್ಕಿಂತ ಹೆಚ್ಚುವರಿ ದರ ನಿಗದಿ ಮಾಡಬೇಕು. ಹಿಂದಿನ ವರ್ಷ ನಿಗದಿ ಮಾಡಿದ್ದ ಹಿಂಬಾಕಿ ಟನ್‌ಗೆ 150 ರೂ.ಗಳನ್ನು ಸಕ್ಕರೆ ಕಾರ್ಖಾನೆಗಳು ರೈತರ ಖಾತೆಗಳಿಗೆ ಜಮೆ ಮಾಡುವಂತೆ ತಾಕೀತು ಮಾಡಬೇಕು ಹೀಗೆ ಇತರೆ ಬೇಡಿಕೆಗಳನ್ನು ಸೆ.30ರೊಳಗೆ ಈಡೇರಿಸದಿದ್ದರೆ, ಬೆಂಗಳೂರಿನಲ್ಲಿ 'ವಿಧಾನಸೌಧ ಚಲೋ' ಹಮ್ಮಿಕೊಳ್ಳಲಾಗುವುದು ತಿಳಿಸಿದ್ದಾರೆ.

ಸೆ.16, ಮಾಂಟೆಸರಿ, ನರ್ಸರಿ ಶಿಕ್ಷಕರ ಉಚಿತ ಉದ್ಯೋಗ ಮಾಹಿತಿ ಶಿಬಿರ

ಮೈಸೂರು, ಸೆ. 10– ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಸೆ.16ರಂದು ಉಚಿತ ಉದ್ಯೋಗ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿದೆ. ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರು, ಅಂಗನವಾಡಿ ಶಿಕ್ಷಕರು, ಮಾಂಟೆಸರಿ ಶಿಕ್ಷಕರು, ನರ್ಸರಿ ಶಿಕ್ಷಕರಿಗೆ ಸಂಬಂಧಿಸಿದ ಈ ಮಾಹಿತಿ ಶಿಬಿರವು ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ, ಎಸ್‌ಎಸ್‌ಐಟಿ ಟೀಚರ್ಸ್ ಟ್ರೈನಿಂಗ್ ಅಕಾಡೆಮಿ ಸಹಭಾಗಿತ್ವದಲ್ಲಿ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಕಾಲೇಜಿನ ಆವರಣದಲ್ಲಿ ಬೆಳಗ್ಗೆ 10.30ರಿಂದ 1.30ರವರೆಗೆ ನಡೆಯಲಿದೆ. ಪಿಯುಸಿ ನಂತರದ ವಿದ್ಯಾಭ್ಯಾಸ ಪೂರ್ಣಗೊಳಿಸಿರುವ 18ರಿಂದ 55ರ ವಯೋಮಾನದವರು ಶಿಬಿರದಲ್ಲಿ ಭಾಗವಹಿಸಬಹುದು. ಆಸಕ್ತರು ಸೆ.14ರೊಳಗೆ 8310306882, 9964790442 ಕರೆಮಾಡಿ ನೋಂದಾಯಿಸಿಕೊಳ್ಳಬಹುದಾಗಿದೆ.

ಸೆ.15, ಸರ್ವ ಸದಸ್ಯರ ಮಹಾಸಭೆ

ಮೈಸೂರು: ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ.15ರಂದು ಬೆಳಗ್ಗೆ 11 ಗಂಟೆಗೆ ಸೀತಾ ರಾಘವ ಪ್ರಾರ್ಥನಾ ಮಂದಿರದಲ್ಲಿ ಸಂಘದ ಅಧ್ಯಕ್ಷ ಎಂ.ನೀಲಕಂಠಸ್ವಾಮಿ ಅಧ್ಯಕ್ಷತೆ ನಡೆಯಲಿದೆ.

ದೇಶ - ವಿದೇಶ

ಚೀನಾದಲ್ಲಿ ಮೆದುಳಿನ ಮೇಲೆ ದಾಳಿ ಮಾಡುವ ಹೊಸ ವೈರಸ್ ಪತ್ತೆ

ಚೀನಾ: ಈಗಾಗಲೇ ಚೀನಾದಲ್ಲಿ ಪತ್ತೆಯಾಗಿ ಇಡೀ ವಿಶ್ವದ ಜನರ ನಿದ್ದೆಗೆಡಿಸಿದ್ದ ಕೊರೊನಾ ಮಹಾಮಾರಿಯನ್ನು ಮರೆಯುವ ಮುನ್ನವೇ ಮೆದುಳಿನ ಮೇಲೆ ದಾಳಿ ಮಾಡುವ ಹೊಸ ವೈರಸ್ ಪತ್ತೆಯಾಗಿದೆ ಎನ್ನುವ ಮಾಹಿತಿ ಲಭ್ಯವಾಗಿದೆ. ರಕ್ತ ಪರೀಕ್ಷೆಯಲ್ಲಿ ಇದು ಹೊಸ ರೀತಿಯ ವೈರಸ್ ಎಂದು ಕಂಡುಬಂದಿದೆ. ಚೀನಾದಲ್ಲಿ ಈ ವೈರಸ್ ಅನ್ನು ಕಂಡುಹಿಡಿಯಲಾಗಿದೆ. ಇದನ್ನು ವೆಟ್ಲ್ಯಾಂಡ್ ವೈರಸ್ ಎಂದು ನಾಮಕರಣ ಮಾಡಲಾಗಿದೆ. ಚೀನಾದಲ್ಲಿ ವಿಜ್ಞಾನಿಗಳು ಮತ್ತೊಂದು ಹೊಸ ರೀತಿಯ ವೈರಸ್ ಅನ್ನು ಕಂಡುಹಿಡಿದಿದ್ದು, ಪ್ರಾಣಿಗಳಲ್ಲಿ ರಕ್ತ ಹೀರುವ ಕೀಟಗಳಿಂದ ಮನುಷ್ಯರಿಗೆ ಹರಡುವ ವೆಟ್ಲ್ಯಾಂಡ್ ಎಂಬ ವೈರಸ್ ಅನ್ನು ಸಂಶೋಧಕರು ಗುರುತಿಸಿದ್ದಾರೆ. ಈ ವೈರಸ್ ಮೆದುಳು, ನರವೈಜ್ಞಾನಿಕ ಕಾಯಿಲೆಗಳಿಗೆ ಕಾರಣವಾಗುತ್ತದೆ ಎಂದು ಹೇಳಲಾಗಿದೆ. ಚೀನಾದ ಕ್ಸಿನ್ಜುವೊ ನಗರದಲ್ಲಿ 2019ರಲ್ಲಿ ಮೊದಲ ಬಾರಿಗೆ ಈ ವೈರಸ್ ಪತ್ತೆಯಾಯಿತು. ವೈರಸ್ ಮೆದುಳಿನ ಮೇಲೂ ಪರಿಣಾಮ ಬೀರಬಹುದು ಎಂದು ಸಂಶೋಧಕರು ತಿಳಿಸಿದ್ದಾರೆ.



ಕೇದಾರನಾಥ ಮಾರ್ಗದಲ್ಲಿ ಭೂಕುಸಿತ: ಐವರ ಸಾವು

ಡೆಹ್ರಾಡೂನ್: ಕೇದಾರನಾಥ ಯಾತ್ರೆ ಮಾರ್ಗದ ಸೋನ್‌ಪ್ರಯಾಗ ಮತ್ತು ಗೌರಿಕುಂಡ್ ನಡುವೆ ಭೂಕುಸಿತ ಸಂಭವಿಸಿದ್ದು, ಐವರು ಸಾವನ್ನಪ್ಪಿ, ಮೂವರು ಗಾಯಗೊಂಡಿರುವ ಘಟನೆ ಸೋಮವಾರ ವರದಿಯಾಗಿದೆ.



ಸೋಮವಾರ ರಾತ್ರಿ 7.20ರ ಸುಮಾರಿಗೆ ಕೇದಾರನಾಥಕ್ಕೆ ಭೇಟಿ ನೀಡಿ ಹಿಂದಿರುಗುತ್ತಿದ್ದ ಯಾತ್ರಾರ್ಥಿಗಳ ತಂಡವೊಂದು ಭೂಕುಸಿತದಲ್ಲಿ ಸಿಲುಕಿತ್ತು. ಘಟನೆ ನಂತರ ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಸಿಬ್ಬಂದಿ ತಕ್ಷಣ ರಕ್ಷಣಾ ಕಾರ್ಯಾಚರಣೆ ನಡೆಸಿ ಯಾತ್ರಾರ್ಥಿಯ ಮೃತದೇಹವನ್ನು ಹೊರತೆಗೆದಿದ್ದಾರೆ. ಮೃತರನ್ನು ಮಧ್ಯಪ್ರದೇಶದ ದುರ್ಗಾಭಾಯಿ ಖಾಪರ್ (50,) ಸಮನ್ ಭಾಯ್ (50), ಗುಜರಾತ್‌ನ ಭರತ್ ಭಾಯಿ ನಿರಾಲಾಲ್ (52) ಮತ್ತು ನೇಪಾಳದ ತಿತ್ಲಿ ದೇವಿ (70) ಎಂದು ಗುರುತಿಸಲಾಗಿದೆ. ಅವಶೇಷಗಳಡಿಯಲ್ಲಿ ಇನ್ನಷ್ಟು ಯಾತ್ರಾರ್ಥಿಗಳು ಸಿಲುಕಿರುವ ಸಾಧ್ಯತೆಯಿದೆ. ರಕ್ಷಣಾ ಕಾರ್ಯಾಚರಣೆ ಸಮಯದಲ್ಲಿ ನಿರಂತರ ಕಲ್ಲುಬಂಡೆ ಕುಸಿತ ಉಂಟಾದ ಪರಿಣಾಮ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು.

ಗಾಝಾ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ದಾಳಿ: 40 ಮಂದಿ ಸಾವು



ಕೈರೋ: ದಕ್ಷಿಣ ಗಾಝಾದಲ್ಲಿ ನಿರಾಶ್ರಿತ ಫೆಲೆಸ್ತೀನಿಯರಿದ್ದ ಶಿಬಿರದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗೆ 40 ಮಂದಿ ಮೃತಪಟ್ಟಿದ್ದು, 60ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ ಎಂದು ವರದಿ ಮಾಡಿದೆ. ಹಮಾಸ್ ಕಮಾಂಡ್ ಸೆಂಟರ್ ಅನ್ನು ಗುರಿಯಾಗಿಸಿ ಈ ದಾಳಿ ನಡೆಸಿದ್ದಾಗಿ ಇಸ್ರೇಲ್ ಸೇನೆ ಹೇಳಿಕೊಂಡಿದೆ. ಆದರೆ ಅಮಾಯಕ ನಾಗರಿಕರನ್ನು ಗುರಿ ಮಾಡಲಾಗಿದೆ ಎಂದು ಹಮಾಸ್ ಹೇಳಿಕೊಂಡಿದೆ. ಯುದ್ಧಪೀಡಿತ ಗಾಝಾದ ಅಲ್–ಮವಾಸಿ ಪ್ರದೇಶದಲ್ಲಿನ ಖಾನ್ ಯೂನಿಸ್ ನಗರದಲ್ಲಿ ಕಿಕ್ಕಿರಿದ ಜನಸಂಖ್ಯೆಯಿದ್ದ ನಿರಾಶ್ರಿತರ ಶಿಬಿರದ ಮೇಲೆ ಕನಿಷ್ಟ 4 ಕ್ಷಿಪಣಿಗಳು ಅಪ್ಪಳಿಸಿದೆ ಎಂದು ಅಲ್ಲಿದ್ದ ನಿರಾಶ್ರಿತರು ಮತ್ತು ನೆರವು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದ ವೈದ್ಯರು ಮಾಹಿತಿಯನ್ನು ನೀಡಿದ್ದಾರೆ.

ಮಗು ಹತ್ಯೆ ಮಾಡಿ ಶವವನ್ನು ವಾಷಿಂಗ್ ಮೆಷಿನ್‌ನಲ್ಲಿಟ್ಟ ಮಹಿಳೆ!

ಚೆನ್ನೈ: ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ರಾಧಾಪುರಮ್‌ನ ಮನೆಯೊಂದರ ವಾಷಿಂಗ್ ಮೆಷಿನ್‌ನಲ್ಲಿ 3 ವರ್ಷದ ಮಗುವಿನ ಶವ ಪತ್ತೆಯಾಗಿದೆ. ಕೊಲೆ ಆರೋಪದಡಿ ನೆರೆಮನೆಯ 40 ವರ್ಷದ ಮಹಿಳೆಯನ್ನು ಬಂಧಿಸಲಾಗಿದೆ. ಮಗು ಸಂಜಯ್‌ನನ್ನು ಹತ್ಯೆ ಮಾಡಿ ಮೃತದೇಹವನ್ನು ವಾಷಿಂಗ್ ಮೆಷಿನ್‌ನಲ್ಲಿ ಬಚ್ಚಿಟ್ಟಿದ್ದಾಗಿ ಆಕೆ ತಪ್ಪೊಪ್ಪಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಎರಡು ಮನೆಯವರ ನಡುವೆ ಹಲವು ವರ್ಷಗಳಿಂದ ಭೂಮಿ ವಿವಾದ ಇತ್ತು. ಮಗು ನಾಪತ್ತೆಯಾದ ಹಿನ್ನೆಲೆಯಲ್ಲಿ ಆರೋಪಿ ಮನೆಯಲ್ಲಿ ಹುಡುಕಾಟ ನಡೆಸುವ ವೇಳೆ ವಾಷಿಂಗ್ ಮೆಷಿನ್‌ನಲ್ಲಿ ಸಂಜಯ್ ಮೃತದೇಹ ಪತ್ತೆಯಾಗಿದೆ. ಆರೋಪಿ ಮಹಿಳೆಯ ಮಗ ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ. ಇದರಿಂದ ಮಾನಸಿಕವಾಗಿ ನೊಂದಿದ್ದ ಆಕೆಯು, ನೆರೆಮನೆಯ ಬಾಲಕನು ಜೀವಂತವಾಗಿ ಇರಬಾರದು ಎಂದು ಭಾವಿಸಿ ಕೊಲೆ ಮಾಡಿದ್ದಾಳೆ ಎನ್ನಲಾಗಿದೆ. ಘಟನೆ ಸಂಬಂಧ ಮಹಿಳೆಯನ್ನು ಬಂಧಿಸಿದ್ದು, ವಿಚಾರಣೆ ನಡೆಸಲಾಗುತ್ತಿದೆ.



ಅದಾನಿಯ ತೆಕ್ಕೆಗೆ ನೈರೋಬಿ ವಿಮಾನ ನಿಲ್ದಾಣ; ಕೀನ್ಯಾದ ನ್ಯಾಯಾಲಯ ತಡೆಯಾಜ್ಞೆ



ನೈರೋಬಿ: ಇಲ್ಲಿನ ಪ್ರಮುಖ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಭಾರತದ ಅದಾನಿ ಸಮೂಹಕ್ಕೆ ವರ್ಗಾಯಿಸುವ ಪ್ರಕ್ರಿಯೆಗೆ ಕೀನ್ಯಾದ ಹೈಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ ಎಂದು 'ಫೈನಾನ್ಷಿಯಲ್ ಟೈಮ್ಸ್' ವರದಿ ಮಾಡಿದೆ. ಪೂರ್ವ ಆಫ್ರಿಕಾದ ಅತಿದೊಡ್ಡ ವಿಮಾನಯಾನ ಕೇಂದ್ರವಾದ ಜೊಮೊ ಕೀನ್ಯಾಟ್ಟ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆಯನ್ನು ಅದಾನಿ ಸಮೂಹಕ್ಕೆ 30 ವರ್ಷಗಳ ಗುತ್ತಿಗೆ ನೀಡುವ ಪ್ರಸ್ತಾಪಕ್ಕೆ ಕೀನ್ಯಾದ ಹೈಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ ಎಂದು ವರದಿಯು ತಿಳಿಸಿದೆ. ಆದರೆ ಈ ಕುರಿತು ಅದಾನಿ ಸಮೂಹದಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಕೀನ್ಯಾದ ಪ್ರಮುಖ ವಿಮಾನ ನಿಲ್ದಾಣವನ್ನು ಅದಾನಿ ಸಮೂಹಕ್ಕೆ ನೀಡುವ ಪ್ರಸ್ತಾವಿತ ಒಪ್ಪಂದವನ್ನು ವಿರೋಧಿಸಿ ಕೀನ್ಯಾದ ವಿಮಾನಯಾನ ಕಾರ್ಮಿಕರ ಒಕ್ಕೂಟವು ಕಳೆದ ತಿಂಗಳು ಮುಷ್ಕರಕ್ಕೆ ಕರೆ ನೀಡಿತ್ತು. ಇದರಿಂದ ಉದ್ಯೋಗ ಕಡಿತ ಉಂಟಾಗಲಿದೆ ಎಂದು ಕಳವಳ ವ್ಯಕ್ತಪಡಿಸಿತ್ತು.